ಬೆಂಗಳೂರು ಸಂಪುಟ: 16 ಸಂಚಿಕೆ: 33 ಪುಟ: 06 ಬುಧವಾರ 25-12-2024

Mail:mussanje2010@gmail.com www.mussanjenews.com

# ಮುಸ್ಸಂಜೆ

ಪ್ರಭಾವಶಾಲಿ ಕನ್ನಡ ಸಂಜೆ ದಿನ ಪತ್ರಿಕೆ
Managing Editor: N.Veerendra Babu (MBA, LLB)
Executive Editor: L P Babu
Honourary Editor: Venkatesh



ನಾನಿ ಅಂದ್ರೆ ತುಂಬಾ ಇಷ್ಟ

ನಟಿ ರುಕ್ಮಿಣಿ ವಸಂತ್‌ಗೆ ಷರತ್ತು!

2024ರಲ್ಲಿ ವಿದಾಯ ಹೇಳಿದ ಆಟಗಾರರು ಪುಟ 6

## ಮೊಟ್ಟೆ ಎಸೆತ ಪ್ರಕರಣ; ನನ್ನನ್ನು ಕೊಲೆ ಮಾಡಲು ಕಾಂಗ್ರೆಸ್ ನಾಯಕರ ಹುನ್ನಾರ; ಮುನಿರತ್ನ ಆರೋಪ

# ನನ್ನ ಹತ್ಯೆಗೆ ಸಂಚು



**ಬೆಂಗಳೂರು:** ಆರ್‌ಆರ್ ನಗರ ಬಿಜೆಪಿ ಶಾಸಕ ಮುನಿರತ್ನ ಮೇಲೆ ಬೆಂಗಳೂರಿನ ನಂದಿನಿ ಲೇಔಟ್ ಠಾಣಾ ವ್ಯಾಪ್ತಿಯಲ್ಲಿ ಮೊಟ್ಟೆ ಎಸೆಯಲಾಗಿದೆ.


ಲಕ್ಷ್ಮೀದೇವಿ ನಗರ ವಾರ್ಡ್‌ನ ಬಿಜೆಪಿ ಕಚೇರಿಯಲ್ಲಿ ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಜನ್ಮದಿನ ನಿಮಿತ್ತ ಆಯೋಜಿಸಿದ್ದ ಕಾರ್ಯಕ್ರಮಕ್ಕೆ ತೆರಳುತ್ತಿದ್ದಾಗ, ಕಂಠೀರವ ಸ್ಟುಡಿಯೋ ಬಳಿ ಕಾಂಗ್ರೆಸ್ ಕಾರ್ಯಕರ್ತರು ಮುನಿರತ್ನ ಕಾರಿನ ಮೇಲೆ ಮೊಟ್ಟೆ ಎಸೆದಿದ್ದಾರೆ. ಮುನಿರತ್ನ ಮೇಲೂ ಮೊಟ್ಟೆ ಎಸೆಯಲಾಗಿದೆ. ತಮ್ಮ ಮೇಲೆ ಕಾಂಗ್ರೆಸ್ ಕಾರ್ಯಕರ್ತರು ಹಲ್ಲೆ ಮುಂದಾಗಿದ್ದಾರೆ ಎಂದು ಮುನಿರತ್ನ ಆರೋಪಿಸಿದ್ದಾರೆ.

ಘಟನೆ ನಡೆಯುತ್ತಿದ್ದಂತೆ ಸ್ಥಳದಲ್ಲಿದ್ದ ಪೊಲೀಸರು ಮುನಿರತ್ನ ಅವರನ್ನು ರಕ್ಷಣೆ ಮಾಡಿದ್ದು, ಕೃತ್ಯ ಖಂಡಿಸಿ ಬಿಜೆಪಿ ಕಾರ್ಯಕರ್ತರು ಸ್ಥಳದಲ್ಲಿ ಪ್ರತಿಭಟನೆ ನಡೆಸಿ, ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿದರು.

ಸ್ಥಳಕ್ಕೆ ನಂದಿನಿ ಲೇಔಟ್ ಠಾಣೆ ಪೊಲೀಸರು ಭೇಟಿ, ಪರಿಶೀಲನೆ ನಡೆಸಿದ್ದಾರೆ. ಘಟನೆಯ ನಂತರ ರಸ್ತೆಯಲ್ಲೇ ಕುಳಿತು ಶಾಸಕ ಮುನಿರತ್ನ ಬೆಂಬಲಿಗರು ಪ್ರತಿಭಟನೆ ನಡೆಸಿದ್ದಾರೆ.

ಘಟನೆ ಸಂಬಂಧ ಪ್ರತಿಕ್ರಿಯಿಸಿರುವ ಮುನಿರತ್ನ "ಇಂದು ಅಟಲ್ ಬಿಹಾರಿ ವಾಜಪೇಯಿ ಜನ್ಮದಿನಾಚರಣೆ ಹಿನ್ನೆಲೆ ಕಾರ್ಯಕ್ರಮಕ್ಕಾಗಿ ಬಂದಿದ್ದೆ. ಮುಗಿಸಿ ಹೋಗುವಾಗ ದುಷ್ಕರ್ಮಿಗಳು ನನ್ನ ಮೇಲೆ ಮೊಟ್ಟೆ ದಾಳಿ ನಡೆಸಿದ್ದಾರೆ. ಇದಕ್ಕೂ ಮುನ್ನ ಗುಪ್ತ ವರದಿ ಪ್ರಕಾರ ನಿಮ್ಮ ಮೇಲೆ ಕೊಲೆಯತ್ನ ದಾಳಿ ನಡೆಯಲಿದೆ. ಹೀಗಾಗಿ ಕಾರಿನಲ್ಲಿ ಕುಳಿತುಕೊಳ್ಳಿ ಎಂದು ಸೂಚಿಸಿದ್ದರು. ಪೊಲೀಸರ ನಿರ್ದೇಶನದಂತೆ ಹೊರಬರುವಾಗ ಪುಟ 2

## ಒಂದೇ ಕುಟುಂಬದ ನಾಲ್ವರು ದುರ್ಮರಣ



**ಹಾವೇರಿ:** ಎರಡು ಕಾರುಗಳ ಮಧ್ಯೆ ಭೀಕರ ರಸ್ತೆ ಅಪಘಾತ ಸಂಭವಿಸಿದ್ದು, ಈ ದುರ್ಘಟನೆಯಲ್ಲಿ ಒಂದೇ ಕುಟುಂಬದ ನಾಲ್ವರು ಮೃತಪಟ್ಟಿರುವ ಘಟನೆ ಹಾವೇರಿ ಜಿಲ್ಲೆ ಶಿಗ್ಗಾಂವಿ ತಾಲೂಕಿನ ತಡಸ ಕ್ರಾಸ್ ಬಳಿ ನಡೆದಿದೆ.

ಚಂದ್ರಮ್ಮ(59), ಮೀನಾ(38), ಮಹೇಶ್‌ಕುಮಾರ್, ಧನ್ವೀರ್ ಮೃತರು. ಪುಣೆ-ಬೆಂಗಳೂರು ರಾಷ್ಟ್ರೀಯ ಹೆದ್ದಾರಿ 48ರ ತಡಸ ಕ್ರಾಸ್ ಬಳಿ ಎರಡು ಕಾರುಗಳ ನಡುವೆ ಮುಖಾಮುಖಿ ಡಿಕ್ಕಿಯಾಗಿದ್ದು, ಸ್ಥಳದಲ್ಲೇ ಇಬ್ಬರು ಸಾವನ್ನಪ್ಪಿದ್ದರೆ, ಇನ್ನಿಬ್ಬರು ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ.

ಚಂದ್ರಮ್ಮ ವಯಸ್ಸು 59 ವರ್ಷ, ಚಾಮರಾಜಪೇಟೆ, ಬೆಂಗಳೂರು, ಮೀನಾ ವಯಸ್ಸು 38 ವರ್ಷ, (ಚಂದ್ರಮ್ಮನ ಮಗಳು) ಹರಿಹರ, ಮಹೇಶ್ ಕುಮಾರ್ ಸಿ ,(ಚಾಲಕ ಕಮ್ ಮಾಲೀಕ) ವಯಸ್ಸು 41 ಸಾ-ಹರಿಹರ ದಾವಣಗೆರೆ ಜಿಲ್ಲೆ. ಧನವೀರ ,ವಯಸ್ಸು 11 ವರ್ಷ,-ಹರಿಹರ ಎಂದು ತಿಳಿದುಬಂದಿದೆ.



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಂದಿನಿ ವತಿಯಿಂದ ಪ್ರಥಮಬಾರಿಗೆ ಗ್ರಾಹಕರಿಗೆ ಒದಗಿಸಲು ತಯಾರಿಸಿರುವ ನಂದಿನಿ ವೇ ಪ್ರೋಟಿನ್ ಆಧಾರಿತ ಇಡ್ಲಿ ಮತ್ತು ದೋಸೆ ಹಿಟ್ಟನ್ನು ಬಿಡುಗಡೆ ಮಾಡಿದರು.ಸಚಿವರಾದ ವೆಂಕಟೇಶ್, ಕೃಷ್ಣ ಭೈರೇಗೌಡ, ದಿನೇಶ್ ಗುಂಡೂರಾವ್, ಕೆ.ಎಂ.ಎಫ್. ಅಧ್ಯಕ್ಷ ಭಿಮಾನಯಕ್, ವ್ಯವಸ್ಥಾಪಕ ನಿರ್ದೇಶಕ ಶಿವಸ್ವಾಮಿ ಹಾಗೂ ಅಧಿಕಾರಿಗಳು ಉಪಸ್ಥಿತರಿದ್ದರು.

## ಸಿಐಡಿ ಮೇಲೆ ವಿಶ್ವಾಸವಿಲ್ಲ



ವಿಜಯಪುರ: ಸಿಟಿ ರವಿ ಪ್ರಕರಣ ಸಿಐಡಿಗೆ ವಹಿಸಲಾಗಿದೆ, ಆದ್ರೆ ಸಿಐಡಿ ಮೇಲೆ ನಮಗೆ ವಿಶ್ವಾಸ ಇಲ್ಲ ಎಂದು ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಹೇಳಿದ್ದಾರೆ.

ವಿಜಯಪುರದಲ್ಲಿ ಮಾತನಾಡಿದ ಅವರು, ಘಟನೆ ದಿನ ಬೆಳಗಾವಿ ಕಮಿಷನರ್ ಫೋನ್ ಕಾಲ್‌ನಲ್ಲೇ ಬ್ಯುಸಿ ಆಗಿದ್ದರು, ಖಾನಾಪುರದಲ್ಲಿ ನಾನು ಕಣ್ಣಾರೆ ನೋಡಿದ್ದೇನೆ, ಮೂರು ತಾಸು ಫೋನ್‌ನಲ್ಲಿ ಮಾತನಾಡುತ್ತಿದ್ದರು, ಸಿಟಿ ರವಿ ಎನ್‌ಕೌಂಟರ್ ಮಾಡೋಕೆ ಪ್ಲಾನ್ ಆಗಿತ್ತು ಎಂದು ಹೇಳಿದರು.

ನಿಷ್ಪಕ್ಷಪಾತ ತನಿಖೆ ಆಗಬೇಕು, ಕಮಿಷನ್ ಕಿವಿಗೆ ಹಿಡಿದ ಫೋನ್ ಬಿಟ್ಟಿಲ್ಲ, ಮೂರು ತಾಸು ಪುಟ 2

## ಕೆನ್-ಬೇತ್ವಾ ನದಿ ಜೋಡಣೆ ಯೋಜನೆಗೆ ಮೋದಿ ಶಂಕುಸ್ಥಾಪನೆ

**ನವದೆಹಲಿ:** ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರ 100 ನೇ ಜನ್ಮದಿನದ ಸಂದರ್ಭದಲ್ಲಿ ಬುಧವಾರ ಮಧ್ಯಪ್ರದೇಶದಲ್ಲಿ ಕೆನ್-ಬೇತ್ವಾನದಿ ಜೋಡಣೆ ರಾಷ್ಟ್ರೀಯ ಯೋಜನೆಗೆ ಪ್ರಧಾನಿ ನರೇಂದ್ರ ಮೋದಿ ಶಂಕುಸ್ಥಾಪನೆ ನೆರವೇರಿಸಿದರು.

ಕೆನ್-ಬೇತ್ವಾ ನದಿಯುನ್ನು ಸಂಪರ್ಕಿಸುವ ರಾಷ್ಟ್ರೀಯ ಯೋಜನೆಯು ರಾಷ್ಟ್ರೀಯ ದೃಷ್ಟಿಕೋನ ಯೋಜನೆಯಡಿಯಲ್ಲಿ ದೇಶದ ಮೊದಲ ನದಿಗಳನ್ನು ಜೋಡಿಸುವ ಯೋಜನೆಯಾಗಿದೆ.

ಈ ಯೋಜನೆಯು ಮಧ್ಯಪ್ರದೇಶ ಮತ್ತು ಉತ್ತರ ಪ್ರದೇಶದ ವಿವಿಧ ಜಿಲ್ಲೆಗಳಿಗೆ ನೀರಾವರಿ ಸೌಲಭ್ಯಗಳನ್ನು ಒದಗಿಸಿ ಲಕ್ಷಾಂತರ ರೈತ ಕುಟುಂಬಗಳಿಗೆ ಪ್ರಯೋಜನವನ್ನು ನೀಡುತ್ತದೆ. ಈ ಯೋಜನೆಯಿಂದ




ಈ ಭಾಗದ ಜನರಿಗೆ ಕುಡಿಯುವ ನೀರಿನ ಸೌಲಭ್ಯವೂ ದೊರೆಯಲಿದೆ.

ಕಳೆದ 1 ವರ್ಷದಲ್ಲಿ ಅಭಿವೃದ್ಧಿಗೆ ಹೊಸ ಗತಿ ಸಿಕ್ಕಿದೆ. ಇಂದು ಕೋಟ್ಯಂತರ ರೂ.ಗಳ ಅಭಿವೃದ್ಧಿ ಯೋಜನೆಗಳಿಗೆ ಚಾಲನೆ ನೀಡಿ ಶಂಕುಸ್ಥಾಪನೆ ಮಾಡಲಾಗಿದೆ.ಇಂದು ಕೆನ್-ಬೇತ್ವಾ ನದಿ ಜೋಡಣೆ ಯೋಜನೆಗೂ ಪುಟ 2

## ದೆಹಲಿ ಸಿಎಂ ಅತಿಶಿ ಶೀಘ್ರ ಬಂಧನ

**ನವದೆಹಲಿ:** ದೆಹಲಿ ಚುನಾವಣೆಗೂ ಮುನ್ನವೇ ಮುಖ್ಯಮಂತ್ರಿ ಅತಿಶಿ ಅವರನ್ನು ನಕಲಿ ಪ್ರಕರಣದಲ್ಲಿ ಶೀಘ್ರ ಬಂಧಿಸಲಾಗುವುದೆಂದು ಅರವಿಂದ ಕೇಜ್ರಿವಾಲ್ ಹೇಳಿದ್ದಾರೆ. ಎಎಪಿ ಕಲ್ಯಾಣ ಯೋಜನೆಗಳು, ಮಹಿಳಾ ಸಮ್ಮಾನ್ ಯೋಜನೆ ಮತ್ತು ಸಂಜೀವಿನಿ ಯೋಜನೆಗಳಿಗೆ ಅಡ್ಡಿಪಡಿಸಲು ದೆಹಲಿ ಸಿಎಂ ಅತಿಶಿ ಅವರನ್ನು ಬಂಧಿಸಲು ಪಿತೂರಿ ನಡೆಸಲಾಗುತ್ತಿದೆ ಂದು ಕೇಜ್ರಿವಾಲ್ ಹೇಳಿದ್ದಾರೆ. ಮುಂದಿನ ದಿನಗಳಲ್ಲಿ ನಕಲಿ ಪ್ರಕರಣದಲ್ಲಿ ಅತಿಶಿ ಅವರನ್ನು ಬಂಧಿಸಲು ಈಗಾಗಲೇ ಯೋಜನೆಗಳನ್ನು ಪುಟ 2

## ವಿಮಾನ ಪತನ

ಅಕ್ಟೌ ನಗರ: ಸುಮಾರು 110ಕ್ಕೂ ಹೆಚ್ಚು ಜನರನ್ನ ಹೊತ್ತೊಯ್ಯುತ್ತಿದ್ದ ವಿಮಾನ ಪತನಗೊಂಡಿರುವ ಘಟನೆ ಕಝಾಕಿಸ್ತಾನದ ಅಕ್ಟೌ ನಗರದ ಬಳಿ ನಡೆದಿದೆ. ಅಜರ್‌ಬೈಜಾನ್ ಏರ್‌ಲೈನ್ಸ್ ವಿಮಾನ ಪತನವಾಗಿದೆ. ವಿಮಾನದಲ್ಲಿ 72 ಜನರಿದ್ದರು ಎನ್ನಲಾಗಿದ್ದು, ಹಲವರು ಸಾವನ್ನಪ್ಪಿರುವ ಶಂಕೆ ವ್ಯಕ್ತವಾಗಿದೆ. ವಿಮಾನ ಬಾಕುದಿಂದ ರಷ್ಯಾದ ಚೆಚೆನ್ಯಾದ ಗ್ರೋಜ್ನಿಗೆ ತೆರಳುತ್ತಿತ್ತು. ಆದರೆ ಗ್ರೋಜಿಯಲ್ಲಿ ದಟ್ಟ ಮಂಜಿನಿಂದಾಗಿ ಮಾರ್ಗವನ್ನು ಬದಲಾಯಿಸಲಾಯಿತು

ಅಪಘಾತದ ಮೊದಲು, ವಿಮಾನವು ವಿಮಾನ ನಿಲ್ದಾಣದ ಮೇಲೆ ಹಲವಾರು ಬಾರಿ ಸುತ್ತು ಹಾಕಿದ್ದು ನಂತರ ಪತನಗೊಂಡಿದೆ.

## ಶಿವರಾಜ್ ಕುಮಾರ್ ಆಪರೇಷನ್ ಯಶಸ್ವಿ

ನವದೆಹಲಿ: ನಟ ಶಿವರಾಜ್ ಕುಮಾರ್ ಅವರಿಗೆ ನಡೆದಿರುವ ಅಪರೇಷನ್ ಯಶಸ್ವಿಯಾಗಿದೆ ಎಂದು ಗೀತಾ ಶಿವರಾಜ್ ಕುಮಾರ್ ಅವರು ಮಾಹಿತಿ ನೀಡಿದ್ದಾರೆ. ಶಿವರಾಜ್ ಕುಮಾರ್ ಅವರಿಗೆ ನಡೆದ ಅಪರೇಷನ್ ಯಶಸ್ವಿಯಾಗಿದೆ.



ಅಭಿಮಾನಿಗಳು ಹೇಗೆ ದೇವರೋ ಅದೇ ರೀತಿ ಬಂದು ಡಾಕ್ಟರ್ಸ್ ಗಳು ಕೂಡ ದೇವರು. ದೇವರ ರೀತಿ ಬಂದು ಅಪರೇಷನ್ ಮಾಡಿದ್ದಾರೆ ಸದ್ಯ ಶಿವರಾಜ್ ಕುಮಾರ್ ಐಸಿಯುನಲ್ಲಿ ಇದ್ದಾರೆ ಶೀಘ್ರದಲ್ಲೇ ನಿಮ್ಮ ಜೊತೆ ಮಾತನಾಡಲಿದ್ದಾರ ಎಂದು ಮಯಾಮಿ ಆಸ್ಪತ್ರೆಯಲ್ಲಿ ತಿಳಿಸಿದರು.

ಕಳೆದ ಕೆಲವು ದಿನಗಳಿಂದ ನಟ ಶಿವರಾಜ್ ಕುಮಾರ್ ಅವರ ಅನಾರೋಗ್ಯ ಸಮಸ್ಯೆಯು ಪುಟ 2


## ಸೇನಾ ವಾಹನ ಅಪಘಾತ

### ಕರ್ನಾಟಕದ ಮೂವರು ಯೋಧರು ನಿಧನ

**ಬಾಗಲಕೋಟೆ/ಬೆಳಗಾವಿ:** ಜಮ್ಮು ಕಾಶ್ಮೀರದಲ್ಲಿ ಸಂಭವಿಸಿದ ಸೇನಾ ವಾಹನ ಅಪಘಾತದಲ್ಲಿ ಕರ್ನಾಟಕ ಮೂಲದ ಸೈನಿಕರು ಕೂಡ ಸಾವನ್ನಪ್ಪಿದ್ದಾರೆ.

ಮಂಗಳವಾರ ಪೂಂಚ್ ಜಿಲ್ಲೆಯ ಮೆಂಧರ್‌ನ ಬಲ್ನೋಯಿ ಪ್ರದೇಶದ ಗಡಿ ನಿಯಂತ್ರಣ ರೇಖೆ (ಎಲ್‌ಒಸಿ) ಬಳಿ ವಾಹನ ಕಂದಕಕ್ಕೆ ಉರುಳಿಬಿದ್ದು ಐವರು ಯೋಧರು ಸಾವನ್ನಪ್ಪಿ, ಐವರು ತೀವ್ರವಾಗಿ ಗಾಯಗೊಂಡ ದುರ್ಘಟನೆ ಸಂಭವಿಸಿತ್ತು.

ಬಾಗಲಕೋಟೆ ಜಿಲ್ಲೆ ರಬಕವಿ ಬನಹಟ್ಟಿ ತಾಲೂಕಿನ ಮಹಾಲಿಂಗಪುರ ನಿವಾಸಿ ಮಹೇಶ್ ಮಾರಿಗೊಂಡ (25), ಬೆಳಗಾವಿ ತಾಲೂಕಿನ ಪಂತನಗರದ ಯೋಧ ದಯಾನಂದ ತಿರಕಣ್ಣವರ (44) ಹಾಗೂ ಕುಂದಾಪುರದ ಅನೂಪ್ ಎಂಬವರೂ ಕೂಡ ಘಟನೆಯಲ್ಲಿ ಮೃತಪಟ್ಟಿದ್ದಾರೆ ಎಂಬ ಮಾಹಿತಿ ಲಭ್ಯವಾಗಿದೆ. ಬನಹಟ್ಟಿಯ ತಾಲೂಕಿನ



ಮಹಾಲಿಂಗಪುರ ಮಹೇಶ್ ಮರಿಗೊಂಡ ಅವರು 11ನೇ ಮರಾಠಾ ರೆಜಿಮೆಂಟ್‌ನಲ್ಲಿ ಸೇವೆ ಸಲ್ಲಿಸುತ್ತಿದ್ದರು. ಸೈನಿಕರನ್ನು ಹೊತ್ತ ವಾಹನವು ಮೆಂಡರ್ ಎಂಬ ಪ್ರದೇಶಕ್ಕೆ ಕರ್ತವ್ಯಕ್ಕೆ ಹೊರಟಿತ್ತು ಎಂದು ತಿಳಿದುಬಂದಿದೆ.

**ಎರಡು ವರ್ಷಗಳಲ್ಲಿ ನಿವೃತ್ತಿ ಆಗಲಿದ್ದ ಯೋಧ:** ಬೆಳಗಾವಿಯ ದಯಾನಂದ ಕಲ್ಲಪ್ಪ ತಿರಕನ್ನವರ ಅವರು ಭಾರತೀಯ ಸೇನೆಯ 11ನೇ ಮರಾಠಾ ಲಘು ಪದಾತಿದಳದ ಮಿಂಡರ್‌ದಲ್ಲಿ ಸುಬೇದಾರ್ ಆಗಿ ಕರ್ತವ್ಯ ಪುಟ 2

## ರವಿ ಪ್ರಕರಣ; ಸಿಪಿಐ ಸಸ್ಪೆಂಡ್

ಬೆಳಗಾವಿ: ಎಂಎಲ್ ಸಿ ಸಿ.ಟಿ ರವಿ ಅವರನ್ನು ಬಂಧಿಸಿ ಸುತ್ತಾಡಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಮೊದಲ ತಲೆತಂಡವಾಗಿದೆ. ಕರ್ತವ್ಯ ಲೋಪದಡಿ ಖಾನಾಪುರ ಪೊಲೀಸ್ ಠಾಣೆಯ ಸಿಪಿಐ ಮಂಜುನಾಥ್ ನಾಯಕ್ ಅವರನ್ನ ಅಮಾನತು ಮಾಡಿ ಬೆಳಗಾವಿ ಉತ್ತರ ವಲಯದ ಐಜಿಪಿ ವಿಕಾಸ್ ಕುಮಾರ್ ಆದೇಶ ಹೊರಡಿಸಿದ್ದಾರೆ. ಬಿಜೆಪಿ ನಾಯಕರನ್ನು ಠಾಣೆಯೊಳಗೆ ಬಿಟ್ಟಿದ್ದಕ್ಕೆ ಅಮಾನತು ಮಾಡಲಾಗಿದೆ ಎನ್ನಲಾಗಿದೆ. ಸಿಟಿ ರವಿ ಬಂಧನ ನಂತರ ಬಿಜೆಪಿ ನಾಯರಕನ್ನ ಠಾಣೆಯೊಳಗೆ ಬಿಟ್ಟಿದ್ದರು. ಈ ವೇಳೆ ಖಾನಾಪುರ ಠಾಣೆಯಲ್ಲಿ ಬಿಜೆಪಿ ನಾಯಕರು ಸಭೆ ಮಾಡಿದ್ದರು. ಆಗ ಕಮಿಷನರ್ ಯಡಾಮಾರ್ಟಿನ್ ಡಿಸಿಪಿ ರೋಹನ್ ಇದ್ದರು. ಕಮಿಷನರ್ ಅನುಮತಿ ಮೇರೆಗೆ ಬಿಜೆಪಿ ನಾಯಕರನ್ನ ಠಾಣೆಯೊಳಗೆ ಬಿಟ್ಟಿದ್ದರು ಎನ್ನಲಾಗಿದೆ.

## "ಜೈ ಬಾಪು, ಜೈ ಭೀಮ್, ಜೈ ಸಂವಿಧಾನ' ಸಮಾವೇಶ

**ಬೆಂಗಳೂರು:** "27ರಂದು ನಡೆಯಲಿರುವ ಸಾರ್ವಜನಿಕ ಸಭೆಗೆ ಜೈ ಬಾಪು, ಜೈ ಭೀಮ್, ಜೈ ಸಂವಿಧಾನ ಸಮಾವೇಶ ಎಂದು ಹೆಸರಿಡಲಾಗಿದೆ" ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ತಿಳಿಸಿದರು.

ಬೆಳಗಾವಿ ಕ್ಲಬ್ ರಸ್ತೆಯ ಸಿಪಿಇಡಿ ಶಾಲಾ ಮೈದಾನದಲ್ಲಿ ಶಿವಕುಮಾರ್ ಅವರು ಮಾಧ್ಯಮಗೋಷ್ಠಿ ಉದ್ದೇಶಿಸಿ ಬುಧವಾರ ಮಾತನಾಡಿದರು.

"ಈ ಪ್ರದೇಶವನ್ನು ಮಹಾತ್ಮಾ ಗಾಂಧೀಜಿ ನವನಗರ ಎಂದು ಘೋಷಣೆ ಮಾಡಿದ್ದೇವೆ. 26 ರಂದು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸಭೆಯನ್ನು ಗಾಂಧಿ ಬಾವಿ (ಪಂಪ ಸರೋವರ) ಬಳಿ ಹಮ್ಮಿಕೊಳ್ಳಲಾಗಿದೆ. 1924ರಲ್ಲಿ ನಡೆದ ಬೆಳಗಾವಿ



ಕಾಂಗ್ರೆಸ್ ಅಧಿವೇಶನದಲ್ಲಿ ಮಹಾತ್ಮಾ ಗಾಂಧಿ ಅವರು ಅಧ್ಯಕ್ಷರಾಗಿದ್ದರು. ಇಂದು ಆ ಸ್ಥಾನದಲ್ಲಿ ಕರ್ನಾಟಕದವರೇ ಆದ ಮಲ್ಲಿಕಾರ್ಜುನ ಖರ್ಗೆ ಅವರು ಕುಳಿತಿರುವುದು ನಮ್ಮ ಹೆಮ್ಮೆಯ ವಿಚಾರ. ಕರ್ನಾಟಕದವರೇ ಆದ ಗಂಗಾಧರ ದೇಶಪಾಂಡೆ ಹಾಗೂ ಜವಾಹರ್ ಲಾಲ್ ನೆಹರು ಅವರು ಅಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಗಳಾಗಿದ್ದರು. ಅವರೂ ಸೇರಿ ಬೆಳಗಾವಿಯಲ್ಲಿ ಈ ಅಧಿವೇಶನ ಮಾಡಿದ್ದರು. ಅಂದು 80 ಎಕರೆ ಜಾಗದಲ್ಲಿ ಅಧಿವೇಶನ ನಡೆದಿತ್ತು. ಇಂದು ಅದೇ ಸ್ಥಳದಲ್ಲಿ ಕಾರ್ಯಕಾರಿ ಸಮಿತಿ ಸಭೆ ಮಾಡುತ್ತಿದ್ದೇವೆ." ಎಂದು ತಿಳಿಸಿದರು. "ಅಂದು ನಮ್ಮ ನಾಯಕರು ಸ್ವಾತಂತ್ರ್ಯ ಹೋರಾಟದ ನಾಯಕತ್ವ ವಹಿಸಿಕೊಂಡು ಪುಟ 2

# ಕೊಣಿದಲ ಪವನ್ ಕಲ್ಯಾಣ್, ಆಂಧ್ರಪ್ರದೇಶದ ಮುಖ್ಯಮಂತ್ರಿಯಾಗಬೇಕು

ಚಿಕ್ಕಬಳ್ಳಾಪುರ: ಕೊಣಿದಲ ಪವನ್ ಕಲ್ಯಾಣ್, ಆಂಧ್ರಪ್ರದೇಶದ ಮುಖ್ಯಮಂತ್ರಿಯಾಗಬೇಕು ಎಂದು ಬಯಸಿದ ಕೋಟ್ಯಂತರ ಜನರಲ್ಲಿ ನಾನೂ ಒಬ್ಬ. ನಿರೀಕ್ಷೆಯಂತೆ ಮುಖ್ಯಮಂತ್ರಿಯಾಗದಿದ್ದರೂ ಸ್ಪರ್ಧೆ ಮಾಡಿದ 21 ಸ್ಥಾನಗಳಲ್ಲಿ 21ರಲ್ಲಿಯೂ ಗೆದ್ದು ನೂತನ ದಾಖಲೆ ಬರೆಯುವ ಜೊತೆಗೆ ಆಂಧ್ರಪ್ರದೇಶದ ಉಪ ಮುಖ್ಯಮಂತ್ರಿಯಾಗಿದ್ದಾರೆ. ವಿಚಾರ ಅದಲ್ಲ, ಉಪ ಮುಖ್ಯಮಂತ್ರಿಯಾಗಿರುವ ಪವನ್ ಕಲ್ಯಾಣ್ ಅವರು ಶ್ರೀ ವೆಂಕಟೇಶ್ವರ ಸ್ವಾಮಿ ದರ್ಶನಕ್ಕಾಗಿ ನಮಗೆ ಅವಕಾಶ ಕಲ್ಪಿಸಿಕೊಟ್ಟಿದ್ದು. ಹೌದು, ಆಂಧ್ರಪ್ರದೇಶದ ಉಪ ಮುಖ್ಯಮಂತ್ರಿ ಪವನ್ ಕಲ್ಯಾಣ್ ಅವರು ಅವರ ಅಭಿಮಾನಿಗಳ ಬಗ್ಗೆ ಹೊಂದಿರುವ ಪ್ರೀತಿ ಏನು ಎಂಬುದಕ್ಕೆ ಇಂದು ದೇವರ ದರ್ಶನ ಪಡೆದ ನಮಗೆ ಅರ್ಥವಾಗಿದೆ. ಅವರದೇ ಹೆಸರಿನಲ್ಲಿ ಬಿಗಿನಿಂಗ್ ಬ್ರೇಕ್ ದರ್ಶನವನ್ನು ಇಂದು ಪಡೆಯಲಾಯಿತು. ನಾನು ಸೇರಿದಂತೆ ನಗರಸಭೆ ಅಧ್ಯಕ್ಷರು ಮತ್ತು ಇತರೆ ಸದಸ್ಯರು ತಿರುಮಲದಲ್ಲಿ ಬಿಗಿನಿಂಗ್ ಬ್ರೇಕ್ ದರ್ಶನ ಪಡೆದೆವು. ಇದಕ್ಕೆ ಅವಕಾಶ ಮಾಡಿಕೊಟ್ಟವರು ಅದೇ ಉಪ ಮುಖ್ಯಮಂತ್ರಿ



ಪವನ್ ಕಲ್ಯಾಣ್. ಅವರ ಗೆಲುವಿಗಾಗಿ ನಾವು ಪ್ರಾರ್ಥಿಸಿದ್ದೆವು. ಗೆದ್ದ ನಂತರ ನಮ್ಮ ಹರಕೆ ತೀರಿಸಲು ಅದೇ ಪವನ್ ಕಲ್ಯಾಣ್ ಸಹಕಾರ ನೀಡಿದರು.

ತಿರುಮಲದಲ್ಲಿ ಕಾಟೇಜ್ ಸಮೇತ ಕೆಲವೇ ನಿಮಿಷಗಳಲ್ಲಿ ಅದ್ಭುತವಾದ ದರ್ಶನ ಮಾಡಲು ಸಹಕಾರ ನೀಡಿದ ಪವನ್ ಕಲ್ಯಾಣ್ ಅವರಿಗೆ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಅವರ ಸೇವೆ ಆಂದ್ರ ಪ್ರದೇಶಕ್ಕೆ ಮತ್ತಷ್ಟು ಸಿಗಲಿ,


0ಅವರ ಅಧಿಕಾರ ಅವಧಿಯಲ್ಲಿ ಆಂದ್ರಪ್ರದೇಶ ಮತ್ತಷ್ಟು ಅಭಿವೃದ್ಧಿ ಸಾಧಿಸಲಿ ಎಂದು ಬಯಸುತ್ತೇನೆ. ಪುನರ್ ದರ್ಶನ ಪ್ರಾಪ್ತಿರಸ್ತು ಎಂಬ ಮಾತಿನಂತೆ ಮತ್ತೆ ಮತ್ತೆ ಪವನ್ ಅಧಿಕಾರಕ್ಕೆ ಬರಲಿ, ಮತ್ತೆ ಮತ್ತೆ ನಮಗೆ ಲಕ್ಷ್ಮೀ ವೆಂಕಟೇಶ್ವರ ದರ್ಶನ ಪ್ರಾಪ್ತಿಯಾಗಲಿ ಎಂದು ಪವನ್ ಕಲ್ಯಾಣ್ ಅವರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ ಎಂದು ನಗರಸಭೆ ಉಪಧ್ಯಕ್ಷ ನಾಗರಾಜ್. ಜೆ ತಿಳಿಸಿದರು.

# 'ಮಲ್ಲಿಕಾರ್ಜುನ್ ಏನೆಂದು ಜನರಿಗೆ ಗೊತ್ತಿದೆ'

ದಾವಣಗೆರೆ: ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಅವರನ್ನು ಬದಲಾವಣೆ ಮಾಡಬೇಕು ಎಂಬ ಚನ್ನಗಿರಿ ಶಾಸಕ ಬಸವರಾಜ್ ಶಿವಗಂಗಾ ಅವರ ಹೇಳಿಕೆಗೆ ಸಂಸದೆ ಪ್ರಭಾ ಮಲ್ಲಿಕಾರ್ಜುನ್ ತಿರುಗೇಟು ನೀಡಿದ್ದಾರೆ.

ದಾವಣಗೆರೆಯಲ್ಲಿ ಮಾಧ್ಯಮದವರ ಪ್ರಶ್ನೆಗಳಿಗೆ ಪ್ರತಿಕ್ರಿಯಿಸಿದ ಅವರು, "ಮಾತನಾಡುವವರು ಯಾವ ಉದ್ದೇಶ ಇಟ್ಟುಕೊಂಡು ದೊಡಸ್ಥಿಕೆಗೆ ಮಾತನಾಡುತ್ತಾರೆ ಅಂತ ಜನ ನೋಡುತ್ತಿದ್ದಾರೆ. ಅವರಿಗೇ ಗೊತ್ತಿದೆ ಯಾಕೆ ಮಾತನಾಡಿದ್ದಾರೆ ಅಂತ" ಎಂದರು.

''ನಾವು ನೋಡಿರುವಂತೆ ಮಲ್ಲಣ್ಣ (ಮಲ್ಲಿಕಾರ್ಜುನ) ಅಭಿವೃದ್ಧಿಯ ಹರಿಕಾರ. ಕಳೆದ 12 ವರ್ಷಗಳಿಂದ ಅದನ್ನು ನೀವು ನೋಡಿದ್ದೀರಿ. ಜಿಲ್ಲೆಯಲ್ಲಿ ಯಾವುದೇ ಕೋಮು ಸಂಘರ್ಷ ಆಗದಂತೆ ನೋಡಿಕೊಂಡಿದ್ದಾರೆ. ಕೋವಿಡ್ ಸಂದರ್ಭದಲ್ಲಿ ಅವರೇ ಮುತುವರ್ಜಿ ವಹಿಸಿ ಎಷ್ಟೊಂದು ಕೆಲಸ ಮಾಡಿದ್ದಾರೆಂದು ನೋಡಿದ್ದೇವೆ. ಇಂತವರ ಬಗ್ಗೆ ಮಾತನಾಡಲು ಯಾವ ಹಕ್ಕಿದೆ ಎಂಬುದನ್ನು ಕೇಳಬೇಕಾಗಿದೆ. ಮಲ್ಲಿಕಾರ್ಜುನ್ ಏನು ಅಂತ ನಮಗೆ ಗೊತ್ತು" ಎಂದು ಪತಿ ಮಲ್ಲಿಕಾರ್ಜುನರನ್ನು ಸಮರ್ಥಿಸಿಕೊಂಡರು.



"ಯಾರು ಆರೋಪ ಮಾಡಿದ್ದಾರೆ, ಅವರ ಉದ್ದೇಶ ಏನು ಅಂತ ತಿಳಿದುಕೊಳ್ಳಬೇಕು. ರಾಜಕೀಯ ಅಂದರೆ ಎಲ್ಲರೂ ವಿರೋಧಿಗಳು ಇರುತ್ತಾರೆ. ಅಧಿಕಾರ ಇರಲಿ, ಬಿಡಲಿ ಜನಸೇವೆ ಮಾಡಬೇಕು ಎಂಬುದು ಮಲ್ಲಿಕಾರ್ಜುನ ಅವರ ಅಜೆಂಡಾ. ಅದನ್ನು ಬೇರೆಯವರಿಂದ ಕಲಿಯಬೇಕಿಲ್ಲ" ಎಂದು ಶಾಸಕ ಬಸವರಾಜ್ ಶಿವಗಂಗಾಗೆ ಪ್ರಭಾ ಮಲ್ಲಿಕಾರ್ಜುನ್ ಟಾಂಗ್ ನೀಡಿದರು.

"ಇದರ ಬಗ್ಗೆ ಜನ ಚರ್ಚೆ ಮಾಡುತ್ತಿದ್ದಾರೆ, ಮಾಡಲಿ. ಅವರಿಗೆ ಏನು ಬೇಕೋ ಅದನ್ನು ಹೇಳಲಿ. ಮಲ್ಲಿಕಾರ್ಜುನ್ ಏನು ಮಾಡಿದ್ದಾರೆ ಅಂತ ಜನರೇ ಉತ್ತರ ಕೊಡುತ್ತಾರೆ. ನಮಗೆ ಕೆಲಸ ಮಾಡುವುದಕ್ಕೇ ಸಮಯ ಸಿಗುತ್ತಿಲ್ಲ. ಯಾರೋ ಮಾತನಾಡಿದ್ದಕ್ಕೆ ನಾವು ಉತ್ತರ ಕೊಡುವುದು ಸರಿಯಲ್ಲ" ಎಂದು ಹೇಳಿದರು.

ಇತ್ತೀಚೆಗೆ ಬೆಳಗಾವಿಯಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ್ದ ಶಾಸಕ ಬಸವರಾಜ ಶಿವಗಂಗಾ, ದಾವಣಗೆರೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಬದಲಾವಣೆ ಮಾಡಬೇಕೆಂದು ಆಗ್ರಹಿಸಿ ನಾನೇ ಬರೆದಿದ್ದೇನೆ ಎಂದು ಹೇಳಿದ್ದರು. ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿ ಅವರಿಗೆ ನಾನು ಪತ್ರ ಬರೆದಿದ್ದು ಸತ್ಯ. ಅದನ್ನು ನಾನೇ ಬರೆದಿದ್ದೇನೆ. ಮಲ್ಲಿಕಾರ್ಜುನ್ ಅವರು ಬಿಜೆಪಿಯ ಜೊತೆಗೆ ಹೊಂದಾಣಿಕೆ ಮಾಡಿಕೊಂಡಿದ್ದಾರೆ. ಆದರೆ ನಮಗೆ ಹೊಂದಾಣಿಕೆ ರಾಜಕಾರಣ ಬರುವುದಿಲ್ಲ" ಎಂದು ಕಿಡಿಕಾರಿದ್ದರು.

"ಬೇಕಾದರೆ ಇವತ್ತೇ ನನ್ನ ರಾಜಕೀಯ ಹೋಗಲಿ, ಇಂಥ ರಾಜಕೀಯ ನನಗೆ ಬೇಡ. ಈ ವಿಷಯವಾಗಿ ಸಚಿವರ ಜೊತೆಗೆ ಮಾತನಾಡಲಾಗಿದೆ. ಶಾಂತನಗೌಡರ ಮಗ ಡಿಸಿಸಿ ಬ್ಯಾಂಕ್ ನಿರ್ದೇಶಕರಿದ್ದಾರೆ. ಆತನನ್ನು ಅಫೆಕ್ಸ್ ಬ್ಯಾಂಕ್ ನಿರ್ದೇಶಕನನ್ನಾಗಿ ಮಾಡಬಹುದಿತ್ತು. ಇವರಿಗೆ ತಮ್ಮ ಮನೆಯ ಬೇಳೆಕಾಳು ಮಾತ್ರ ಬೇಯಬೇಕು. ಯಾವ ಪಕ್ಷವೂ ಬೇಕಿಲ್ಲ ಯಾವ

# ವಾಜಪೇಯಿ ಜನ್ಮ ದಿನಾಚರಣೆ; ಸಾಧನ ಸಲಕರಣೆ ವಿತರಣೆ

**ಬೆಂಗಳೂರು;** ಮಾಜಿ ಪ್ರಧಾನಿ ದಿವಂಗತ ಅಟಲ್ ಬಿಹಾರಿ ವಾಜಪೇಯಿ ಅವರ ಜನ್ಮದಿನದ ಅಂಗವಾಗಿ ಮಹಾಲಕ್ಷ್ಮಿ ಲೇಔಟ್ ವಿಧಾನಸಭಾ ಕ್ಷೇತ್ರದ ನಾಗಪುರ ದಲ್ಲಿರುವ ಶಾಸಕರ ಕಚೇರಿಯಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಅಂಗವಿಕಲರಿಗೆ ಸಾಧನಾ ಸಲಕರಣೆಗಳನ್ನು ಕೇಂದ್ರದ ರಾಜ್ಯ ಸಚಿವರಾದ ಶೋಭಾ ಕರಂದ್ಲಾಜೆ ವಿತರಿಸಿದರು.

ಬಳಿಕ ಮಾತನಾಡಿದ ಅವರು,ಮುಖ್ಯಮಂತ್ರಿ ಯಡಿಯೂರಪ್ಪ ಅವಧಿಯಲ್ಲಿ ಅಂಗವಿಕಲರಿಗೆ ಮಾಸಿಕ 1500 ರೂಪಾಯಿ ಗೌರವ ಧನವನ್ನು ಜಾರಿ ತರಲಾಯಿತು, ಕೇಂದ್ರ ಸಮಾಜ ಕಲ್ಯಾಣ ಇಲಾಖೆಯಿಂದ ಬಾರೀ ದೊಡ್ಡ ಪ್ರಮಾಣದ ಹಣವಿದ್ದು ವಿಕಲಚೇತನರಿಗೆ ಅಗತ್ಯ ಸಾಮಾಗ್ರಿಗಳನ್ನು ಕೊಡಿಸುವ ವ್ಯವಸ್ಥೆ ಮಾಡಲಾಗಿದೆ.ಬರುವ ದಿನಗಳಲ್ಲಿ ಸಮಾಜ ಕಲ್ಯಾಣ ಇಲಾಖೆಯಿಂದ ಬೆಂಗಳೂರು ಉತ್ತರ ಜಿಲ್ಲೆಯಲ್ಲಿರುವ ಅಮಗವಿಕಲರ ಪಟ್ಟಿಯನ್ನು ಮಾಡಿ ಕೇಂದ್ರ ಸಮಾಜಿಕ ನ್ಯಾಯ ಇಲಾಖೆಗೆ ಸಲ್ಲಿಸಿದರೆ ಅಗತ್ಯ ನೆರವು ನೀಡುವುದಾಗಿ ಹೇಳಿದರು.

ಶಾಸಕ ಗೋಪಾಲಯ್ಯ ಮಾತನಾಡಿ, ಈ ಕ್ಷೇತ್ರದ 450 ಅಂಗವಿಕಲ ಮಂದಿಗೆ ಸಾಧನ ಸಲಕರಣೆಗಳನ್ನು ವಿತರಿಸಲಾಗುತ್ತದೆ, ಮುಂದಿನ ದಿನಗಳಲ್ಲಿ ಈ ಕ್ಷೇತ್ರದಲ್ಲಿರುವ



ವಿಕಲ ಚೇತನರ ನೆರವಿಗೆ ಮುಂದಾಗುತ್ತೇನೆ,ದಿವಂಗತ ಮಾಜಿ ಪ್ರಧಾನಿ ವಾಜಪೇಯಿ ಅವರು ಈ ದೇಶದಲ್ಲಿ ಹೊಸ ಮನ್ವಂತರವನ್ನು ಸೃಷ್ಟಿಸಿ ಅಭಿವೃದ್ಧಿಯತ್ತ ಕೊಂಡೊಯ್ಯುವಲ್ಲಿ ತಮ್ಮದೇ ಕೊಡುಗೆ ನೀಡಿದ್ದಾರೆ,

# ಟ್ರಾವಿಸ್ ಹೆಡ್ ವಿಶ್ವದ ನಂ.1 ಬ್ಯಾಟರ್

**ಮೆಲ್ಬೋರ್ನ್:** ವಿಶ್ವದ ಅತ್ಯುತ್ತಮ ಬೌಲರ್ ಬುಮ್ರಾ ವಿರುದ್ಧ ನಿರ್ಭೀತ ವಿಧಾನದ ಬ್ಯಾಟಿಂಗ್ ಪ್ರದರ್ಶಿಸಿರುವ ಆಸ್ಟ್ರೇಲಿಯನ್ ಕ್ರಿಕೆಟಿಗ ಟ್ರಾವಿಸ್ ಹೆಡ್ ಜಗತ್ತಿನ ಅತ್ಯುತ್ತಮ ಬ್ಯಾಟರ್ ಎಂದು ಲೆಜೆಂಡರಿ ಕ್ರಿಕೆಟಿಗ ಗ್ರೇಗ್ ಚಾಪೆಲ್ ಅಭಿಪ್ರಾಯಪಟ್ಟಿದ್ದಾರೆ.

ಹೆಡ್ ಮೊದಲ ಮೂರು ಟೆಸ್ಟ್‌ಗಳಲ್ಲಿ ಎರಡು ಶತಕ ಮತ್ತು ಅರ್ಧಶತಕಗಳೊಂದಿಗೆ 409 ರನ್‌ಗಳೊಂದಿಗೆ ಬ್ಯಾಟಿಂಗ್ ಚಾರ್ಟ್‌ನಲ್ಲಿ ಪ್ರಾಬಲ್ಯ ಸಾಧಿಸಿದ್ದಾರೆ ಮತ್ತು ಟೆಸ್ಟ್ ಬ್ಯಾಟರ್ ಆಗಿ ಅವರ ಯಶಸ್ಸಿನ ಹಿಂದೆ ಅವರ ಸರಳತೆ ಮತ್ತು ಆಕ್ರಮಣಶೀಲತೆ ಇದೆ ಎಂದು ಚಾಪೆಲ್ ಹೇಳಿದ್ದಾರೆ.

ಈ ಸರಣಿಯಲ್ಲಿ ಜಸ್ಪ್ರೀತ್ ಬುಮ್ರಾ ವಿರುದ್ಧ ಹೆಡ್ ಅವರ ನಿರ್ಭೀತ ವಿಧಾನವನ್ನು ಉದಾಹರಿಸುತ್ತದೆ. ಹೆಚ್ಚಿನ ಬ್ಯಾಟ್ಸ್‌ಮನ್‌ಗಳು ಬುಮ್ರಾ ಅವರ ಅಸಾಂಪ್ರದಾಯಿಕ ಕ್ರಮ, ತೀಕ್ಷ್ಣವಾದ ವೇಗ ಮತ್ತು ಪಟ್ಟುಬಿಡದ ನಿಖರತೆಯನ್ನು ಎದುರಿಸಲು ಹೆಣಗಾಡುತ್ತಿರುವಾಗ, ಹೆಡ್ ಅವರನ್ನು ಇತರ ಬೌಲರ್‌ಗಳಂತೆ ಪರಿಗಣಿಸಿದ್ದಾರೆ ಎಂದು ಚಾಪೆಲ್ ಬರೆದಿದ್ದಾರೆ.

ತನ್ನ ಪ್ರತಿಭೆಯಿಂದ ವಿಶ್ವ ಕ್ರಿಕೆಟ್‌ನಲ್ಲಿ ಅತ್ಯಂತ ಪ್ರಬಲ ಪುರುಷ ಬ್ಯಾಟರ್‌ಗಳಲ್ಲಿ ಒಬ್ಬರಾಗಿ ಗುರುತಿಸಿಕೊಂಡಿರುವ ಟ್ರಾವಿಸ್ ಹೆಡ್ ಬಹುತೇಕ ಅಲೌಕಿಕ ಸೊಬಗಿನಿಂದ ಈ ಹಂತಕ್ಕೆ ಏರಿದ್ದಾರೆ ಎಂದು ಚಾಪೆಲ್ ಬರೆದಿದ್ದಾರೆ.

ಅವರ ಕಥೆಯು ಕೇವಲ ಸವಾಲುಗಳನ್ನು ಜಯಿಸುವುದರ ಬಗ್ಗೆ ಅಲ್ಲ ಆದರೆ ಶೈಲಿಯ ಸರಳತೆಯನ್ನು ಅಳವಡಿಸಿಕೊಳ್ಳುವುದರ ಬಗ್ಗೆ ಅವರ ವಿಶಿಷ್ಟ ಲಕ್ಷಣವಾಗಿದೆ,

ಅದು ಅವನ ಮನಸ್ಸನ್ನು ಅಸ್ತವ್ಯಸ್ತವಾಗಿರಿಸಲು ಮತ್ತು ಆತನ ಆಟವು ವಿನಾಶಕಾರಿಯಾಗಿ ಪರಿಣಮಿಸಿದೆ ಎಂದು ಅವರು ಹೇಳಿದರು. 2021–22ರ ಸರಣಿಯಲ್ಲಿ ಇಂಗ್ಲೆಂಡ್ ವಿರುದ್ಧ ಹೆಡ್ ಅವರ 152 ರನ್‌ಗಳನ್ನು ಗಳಿಸಿದ್ದು ಅವರ ಬೆಳವಣಿಗೆಗೆ ಟರ್ನಿಂಗ್ ಪಾಯಿಂಟ್ ಎಂದು ಚಾಪೆಲ್ ಬಣ್ಣಿಸಿದ್ದಾರೆ.

# 'ಅಪ್ಪಾ ನನ್ನ ಕಾಪಾಡು': ಅಂಗಲಾಚುತ್ತಿರುವ 3 ವರ್ಷದ ಬಾಲಕಿ

**ಜೈಪುರ:** ಮೂರು ದಿನಗಳಿಂದ 700 ಅಡಿ ಆಳದ ಬೋರ್ವೆಲ್‌ಗೆ ಬಿದ್ದು ಜೀವನ್ಮರಣ ಹೋರಾಟ ನಡೆಸುತ್ತಿರುವ 3 ವರ್ಷದ ಪುಟ್ಟ ಮಗುವೊಂದು ತನ್ನ ತಂದೆಗೆ ಕಾಪಾಡು ಎಂದು ಕೇಳುತ್ತಿರುವ ದೃಶ್ಯ ಹೃದ್ರಾವಕವಾಗಿದೆ.

ರಾಜಸ್ತಾನದ ಕಿರಾತಪುರದ ಬದಿಯಾಲಿ ಧಾನಿಯಲ್ಲಿ ಈ ಘಟನೆ ನಡೆದಿದ್ದು, ಮೂರು ವರ್ಷದ ಚೇತನಾ ಎಂಬ ಬಾಲಕಿ ಕೊಳವೆ ಬಾವಿಗೆ ಬಿದ್ದಿದ್ದಾಳೆ.

ಕೊಳವೆ ಬಾವಿ ಪಕ್ಕದಲ್ಲಿ ಮಗು ಚೇತನಾ ತನ್ನ ತಂದೆ ಜೊತೆ ಆಟವಾಡುತ್ತಿರುವಾಗ ಬಿದ್ದಿದ್ದಾಳೆ. ಬರೋಬ್ಬರಿ 150 ಅಡಿಯಿಂದ ಬಾಲಕಿ ತನ್ನನ್ನು ರಕ್ಷಿಸುವಂತೆ ಕೈಗಳನ್ನು ಮೇಲಕ್ಕೆತ್ತಿ ಅಂಗಲಾಚುತ್ತಿರುವ ದೃಶ್ಯ ಮನಕಲುಕುವಂತಿದ್ದು, ಈ ದೃಶ್ಯ ಇದೀಗ ಸಖತ್ ವೈರಲ್ ಆಗುತ್ತಿದೆ.

ಬಾಲಕಿ ಕೊಳವೆ ಬಾವಿಗೆ ಬೀಳುತ್ತಿದ್ದಂತೆ ತಂದೆ ಚೀರಾಡಿದ್ದಾರೆ. ಸಹಾಯಕ್ಕಾಗಿ ಕೂಗಿಕೊಂಡಿದ್ದಾರೆ. ತಕ್ಷಣವೇ ಸ್ಥಳೀಯರು ಧಾವಿಸಿದ್ದಾರೆ. ಇನ್ನು ವಿಚಾರ ತಿಳಿದ ಕೂಡಲೇ ಸ್ಥಳಕ್ಕಾಗಮಿಸಿದ ಪೊಲೀಸರು ಹಾಗೂ ರಕ್ಷಣಾ ಸಿಬ್ಬಂದಿ ಸಮರೋಪಾದಿಯಲ್ಲಿ ಬಾಲಕಿ ರಕ್ಷಣೆಗೆ ಕಾರ್ಯಾಚರಣೆ ನಡೆಸಿದ್ದಾರೆ. ಬರೋಬ್ಬರಿ 40 ಗಂಟೆಯಿಂದ ರಕ್ಷಣಾ ಕಾರ್ಯಾಚರಣೆ ಸಾಗಿದ್ದು, ಮಾಹಿತಿ ಸಿಗುತ್ತಿದ್ದಂತೆ ಜಿಲ್ಲಾಡಳಿತ ಸ್ಥಳಕ್ಕೆ ಆಗಮಿಸಿದೆ.

ಕೊಳವೆ ಬಾವಿ ಅಡಿಯಲ್ಲಿ ಸಿಲುಕಿಕೊಂಡಿರುವ ಬಾಲಕಿಗೆ ಆಮ್ಲಜನ ಪೂರೈಕೆ ಮಾಡಲಾಗಿದೆ. ಇತ್ತ ಜೆಸಿಬಿ ಹಾಗೂ ಇತರ ಯಂತ್ರಗಳ ಮೂಲಕ ಮತ್ತೊಂದು ಬದಿಯಿಂದ ಕಾರ್ಯಾಚರಣೆ ನಡೆಯುತ್ತಿದೆ. ರಕ್ಷಣಾ ಕಾರ್ಯಾಚರಣೆ ಆರಂಭದಲ್ಲೇ ಆಮ್ಲಜನ ಜೊತೆಗೆ ಕ್ಯಾಮಾರ ಹಾಕಲಾಗಿದೆ. ಈ ಕ್ಯಾಮೆರಾದಲ್ಲಿ ಬಾಲಕಿ ಸಹಾಯಕ್ಕಾಗಿ ಅಂಗಲಾಚುತ್ತಿರುವ ದೃಶ್ಯಗಳು ಸೆರೆಯಾಗಿದೆ.

ಕೈಗಳ ಮೂಲಕ ರಕ್ಷಣೆಗೆ ಅಂಗಲಾಚುತ್ತಿದ್ದಾಳೆ. ಆದರೆ ಈಗಾಗಲೇ ಕಾರ್ಯಾಚರಣೆ ಸುದೀರ್ಘ ಗಂಟೆ ತೆಗೆದುಕೊಂಡಿದೆ. ಇತ್ತ ಬಾಲಕಿ ತೀವ್ರ ಅಸ್ವಸ್ಥಗೊಂಡಿದ್ದಾಳೆ. ಎನ್‌ಡಿಆರ್‌ಎಫ್ ಹಾಗೂ ಎಸ್‌ಡಿಆರ್‌ಎಫ್ ತಂಡ ರಕ್ಷಣಾ ಕಾರ್ಯದಲ್ಲಿ ನಿರತವಾಗಿದೆ. ಆದರೆ ಇದುವರೆಗೂ ಬಾಲಕಿ ರಕ್ಷಣೆ ಸಾಧ್ಯವಾಗಿಲ್ಲ.



**ಮಾಜಿ ಪ್ರಧಾನಿ, ಭಾರತರತ್ನ ದಿ. ಅಟಲ್ ಬಿಹಾರಿ ವಾಜಪೇಯಿ ಅವರ 100ನೇ ವರ್ಷದ ಜನ್ಮದಿನದ ಸ್ಮರಣಾರ್ಥ ಹಾಗೂ ಸುಶಾಸನ ದಿನದ ನಿಮಿತ್ತ ಮಲ್ಲೇಶ್ವರದ ಬಿಜೆಪಿ ರಾಜ್ಯ ಕಾರ್ಯಾಲಯ "ಜಗನ್ನಾಥ ಭವನ"ದಲ್ಲಿ ಹಮ್ಮಿಕೊಂಡಿದ್ದ ಪ್ರದರ್ಶಿನಿ ಉದ್ಘಾಟನೆ ಹಾಗೂ ಸಭಾ ಕಾರ್ಯಕ್ರಮದಲ್ಲಿ ಪಕ್ಷದ ಹಿರಿಯರು ಮತ್ತು ಮಾಜಿ ಸಚಿವ ರಾಮಚಂದ್ರ ಗೌಡ ಅವರನ್ನು ಸನ್ಮಾನಿಸಲಾಯಿತು. ಬಿಜೆಪಿ ರಾಜ್ಯಾಧ್ಯಕ್ಷ ಮತ್ತು ಶಾಸಕ ಬಿ.ವೈ. ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ ಮತ್ತು ಶಾಸಕ ಬಿ.ವೈ. ವಿಜಯೇಂದ್ರ, ಮಾಜಿ ಮುಖ್ಯಮಂತ್ರಿಗಳು ಮತ್ತು ಕೇಂದ್ರೀಯ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ, ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ, ವಿರೋಧ ಪಕ್ಷದ ನಾಯಕ ಆರ್. ಅಶೋಕ್, ಮಾಜಿ ಮುಖ್ಯಮಂತ್ರಿ ಡಿ.ವಿ. ಸದಾನಂದ ಗೌಡ, ಮಾಜಿ ಮುಖ್ಯಮಂತ್ರಿ ಮತ್ತು ಸಂಸದ ಬಸವರಾಜ್ ಬೊಮ್ಮಾಯಿ, ಕೇಂದ್ರ ಸಚಿವೆ ಕು. ಶೋಭಾ ಕರಂದ್ಲಾಜೆ, ಸಂಸದ ಪಿ.ಸಿ. ಮೋಹನ್, ಮಾಜಿ ಸಚಿವ ಮತ್ತು ಶಾಸಕ ಎನ್. ಮುನಿರತ್ನ, ವಿಧಾನಪರಿಷತ್ ಸದಸ್ಯ ಎನ್. ರವಿಕುಮಾರ್, ರಾಜ್ಯ ಮುಖ್ಯ ವಕ್ತಾರ ಅಶ್ವತ್ಥನಾರಾಯಣ್, ಬಿಜೆಪಿ ಮಹಿಳಾ ಮೋರ್ಚಾ ರಾಜ್ಯ ಅಧ್ಯಕ್ಷೆ ಕು. ಸಿ. ಮಂಜುಳಾ, ಪಕ್ಷದ ಮುಖಂಡರು ಭಾಗವಹಿಸಿದ್ದರು.**

## ಮೊದಲ ಪುಟದಿಂದ

### ನನ್ನ ಹತ್ಯೆಗೆ ಸಂಚು

ಈ ಘಟನೆ ಸಂಭವಿಸಿದೆ" ಎಂದು ಹೇಳಿದರು.

"ಮೂರು ತಿಂಗಳ ಹಿಂದೆ ವಕೀಲರ ರೂಪದಲ್ಲಿ ಬಂದ ಅಪರಿಚಿತರು ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡದಿದ್ದರೆ ಕೊಲ್ಲುವುದಾಗಿ ಬೆದರಿಕೆ ಹಾಕಿದ್ದರು. ಅಲ್ಲದೆ ಜಾಲಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿಯೂ ನನ್ನ ಮೇಲೆ ಹಲ್ಲೆ ಯತ್ನ ನಡೆದಿತ್ತು. ಈ ಬಗ್ಗೆ ರಾಷ್ಟ್ರಪತಿ, ಪ್ರಧಾನಿಮಂತ್ರಿ ಹಾಗೂ ಎನ್‌ಐಎ ದೂರು ನೀಡಿದ್ದೇನೆ. ನನ್ನನ್ನ ಹತ್ಯೆ ಮಾಡಲು ಸಂಚು ರೂಪಿಸಿರುವುದು ಗೊತ್ತಾಗಿದೆ. ಡಿ.ಕೆ. ಸುರೇಶ್, ಆರ್.ಆರ್. ನಗರದ ಪರಾಜಿತ ಅಭ್ಯರ್ಥಿ ಕುಸುಮಾ, ಅವರ ತಂದೆ ಹನುಮಂತರಾಯಪ್ಪ ಅವರೇ ಕಾರಣರಾಗಿದ್ದಾರೆ" ಎಂದು ಆರೋಪಿಸಿದರು.

ಕೊಲೆ ಬೆದರಿಕೆ ಹಿನ್ನೆಲೆ ಗನ್‌ಮ್ಯಾನ್ ಕೇಳಿದ್ದೆ, ಆದರೂ ಕೊಡಲಿಲ್ಲ. ಈ ಘಟನೆಗೆ ಡಿಸಿಎಂ ಡಿಕೆ ಶಿವಕುಮಾರ್, ಡಿಕೆ ಸುರೇಶ್, ಹನುಮಂತರಾಯಪ್ಪ, ಕುಸುಮಾ ಅವರೇ ಕಾರಣ ಎಂದು ಮುನಿರತ್ನ ಆರೋಪಿಸಿದ್ದಾರೆ. ನನ್ನ ಶರ್ಟ್ ಹರಿದು ಹಾಕಿದರೆ 20 ಲಕ್ಷ ರೂ., ಮಸಿ ಬಳಿದರೆ 10 ಲಕ್ಷ ರೂ. ಹೀಗೆ ಒಂದೊಂದು ರೀತಿ ರೇಟ್ ಫಿಕ್ಸ್ ಮಾಡಿದ್ದಾರೆ ಎಂದು ಮುನಿರತ್ನ ಆರೋಪಿಸಿದ್ದಾರೆ.

ಏತನ್ಮಧ್ಯೆ, ಮುನಿರತ್ನ ಬೆಂಬಲಿಗರು ಹಲ್ಲೆ ಮಾಡಿದ್ದಾರೆ ಎಂದು ಕಾಂಗ್ರೆಸ್ ಕಾರ್ಯಕರ್ತರು ಆರೋಪ ಮಾಡಿದ್ದಾರೆ. ಕಾಂಗ್ರೆಸ್ ಕಾರ್ಯಕರ್ತರ ಕಾರನ್ನು ಜಖಂಗೊಳಿಸಿರುವ ಆರೋಪ ಕೇಳಿಬಂದಿದೆ.

ಸ್ಥಳದಿಂದ ಬಿಜೆಪಿ ಶಾಸಕ ಮುನಿರತ್ನ ತೆರಳಿದ ಬಳಿಕ ಕಾಂಗ್ರೆಸ್ ಕಾರ್ಯಕರ್ತರು, ಮುನಿರತ್ನ ಬೆಂಬಲಿಗರ ನಡುವೆ ಗಲಾಟೆ ನಡೆದಿದ್ದು, 2–3 ಕಾರುಗಳು ಜಖಂಗೊಂಡಿವೆ. ಹಲವರು ಗಾಯಗೊಂಡಿದ್ದಾರೆ.

ಘಟನೆ ಸಂಬಂಧ ನಂದಿನಿ ಲೇಔಟ್ ಠಾಣೆ ಪೊಲೀಸರು ಮೂವರನ್ನು ವಶಕ್ಕೆ ಪಡೆದಿದ್ದಾರೆ.

### ಮೋದಿ ಶಂಕುಸ್ಥಾಪನೆ

ಇಲ್ಲಿ ಶಂಕುಸ್ಥಾಪನೆ ನೆರವೇರಿಸಲಾಯಿತು. ಭಾರತ ರತ್ನ ಅಟಲ್ ಬಿಹಾರಿ ವಾಜಪೇಯಿ ಅವರ 100 ವರ್ಷಗಳ ಜನ್ಮದಿನವನ್ನು ಇಂದು ಆಚರಿಸಲಾಗುತ್ತಿರುವ ಈ ಯೋಜನೆಗಳಿಗಾಗಿ ನಾನು ರಾಜ್ಯದ ಜನತೆಯನ್ನು ಅಭಿನಂದಿಸುತ್ತೇನೆ ಆಡಳಿತ ಉತ್ತಮ ಆಡಳಿತವೇ ಬಿಜೆಪಿಯ ಗುರುತಾಗಿದೆ ಎಂದು ಪ್ರಧಾನಿ ಮೋದಿ ಹೇಳಿದ್ದಾರೆ.

### ಸಿಐಡಿ ಮೇಲೆ ವಿಶ್ವಾಸವಿಲ್ಲ

ಫೋನ್‌ನಲ್ಲಿ ಮಾತನಾಡುತ್ತಿದ್ದರು ಅದು ಸಹ ತನಿಖೆ ಕಮಿಷನರ್ ಯಾರ ಜೊತೆಗೆ ಮಾತನಾಡಿದ್ದು ಎಂದು ತನಿಖೆ ಆಗಬೇಕು, ಹಾಲಿ ನ್ಯಾಯಾಧೀಶರಿಂದ ಈ ಪ್ರಕರಣದ ತನಿಖೆಯಾಗಬೇಕೆಂದು ಒತ್ತಾಯಿಸಿದರು,

ವಕ್ಫ್ ಹೋರಾಟದ ಬಗ್ಗೆ ಮಾತನಾಡಿದ ಅವರು, ನಾಳೆ ಬೆಂಗಳೂರಿನಲ್ಲಿ ಸಭೆ ಸೇರಿ ನಿರ್ಧಾರ ಮಾಡುತ್ತೇವೆ, ಯತ್ನಾಳ್ ಮಾಲೀಕತ್ವದ ಚಿಂಚೋಳಿಯಲ್ಲಿನ ಕಾರ್ಖಾನೆ ವಿಚಾರದಲ್ಲಿ ಸರ್ಕಾರಕ್ಕೆ ಹಿನ್ನೆಡೆ ವಿಚಾರಕ್ಕೆ ಮಾತನಾಡಿ, ಸರ್ಕಾರ ಕಾರ್ಮಿಕರ ಜೊತೆಗೆ ಚೆಲ್ಲಾಟವಾಡಿದೆ, ಕಾಂಗ್ರೆಸ್ ಪತನ ನಿಶ್ಚಿತ, ನಾವು ಮುಂದೆ ಅಧಿಕಾರಕ್ಕೆ ಬಂದಾಗ ಅವರು ಅನುಭವಿಸಬೇಕಾಗುತ್ತದೆ ಎಂದು ಹೇಳಿದರು.

ಬೆಳಗಾವಿಯಲ್ಲಿ ಕಾಂಗ್ರೆಸ್ ಅಧಿವೇಶನ ವಿಚಾರಕ್ಕೆ ಮಾತನಾಡಿ, ಇದು ನಕಲಿ ಕಾಂಗ್ರೆಸ್‌ನ ಅಧಿವೇಶನ, ಅಧಿವೇಶನದಲ್ಲಿ ಇರೋರು ನಕಲಿ ಗಾಂಧಿಗಳು, ಗಾಂಧೀಜಿ ಹೆಸರು ಇಟ್ಟುಕೊಂಡ ಮಾತ್ರಕ್ಕೆ ಪಾವಿತ್ರ್ಯತೆ ಬರೋದಿಲ್ಲ, ಬಾಬಾ ಸಾಹೇಬ ಅಂಬೇಡ್ಕರ್ ಸ್ಮರಣೆ ಮಾಡಲ್ಲ, ಗಾಂಧಿ ಸ್ಮರಣೆ ಮಾತ್ರ ಮಾಡುತ್ತಾರೆ ಎಂದು ಕಿಡಿಕಾರಿದರು.

### ಅತಿಶಿ ಶೀಘ್ರ ಬಂಧನ

ರೂಪಿಸಲಾಗಿದೆ. ಇದಕ್ಕೂ ಮುನ್ನ ಆಪ್ ನಾಯಕರ ಮೇಲೆ ದಾಳಿ ನಡೆಸಲು ಯೋಜಿಸಲಾಗಿದೆ.
ಪಕ್ಷದ ಆಡಳಿತ ರಚನೆಯನ್ನು ಅಸ್ಥಿರಗೊಳಿಸುವ ಉದ್ದೇಶದಿಂದ ಹಿರಿಯ ಎಎಪಿ ನಾಯಕರು ಊಹಿತ ದಾಳಿಗಳನ್ನು ಎದುರಿಸಬಹುದು ಎಂದು ಹೇಳಿರುವ ಕೇಜ್ರಿವಾಲ್, ಸಾರ್ವಜನಿಕರ ಪರ ಕೆಲಸ ಮಾಡುವ ಪಕ್ಷದ ಪ್ರಯತ್ನಗಳಿಗೆ ಅಡ್ಡಿಪಡಿಸುವ ಕುತಂತ್ರಗಳು ನಡೆಯುತ್ತಿವೆ ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

ದೆಹಲಿ ವಿಧಾನಸಭಾ ಚುನಾವಣೆಗೂ ಮುನ್ನ ಎಎಪಿ ಸರ್ಕಾರ ಪ್ರಮುಖ ಕಲ್ಯಾಣ ಯೋಜನೆಯನ್ನು ಜಾರಿಗೊಳಿಸುತ್ತಿರುವ ಸಮಯದಲ್ಲಿ ಈ ಆರೋಪಗಳು ಕೇಳಿ ಬಂದಿವೆ.

### ಯೋಧರು ನಿಧನ

ನಿರ್ವಹಿಸುತ್ತಿದ್ದರು. 25 ವರ್ಷಗಳಿಂದ ಕರ್ತವ್ಯ ನಿರ್ವಹಿಸುತ್ತಿದ್ದ ದಯಾನಂದ ಇನ್ನು ಎರಡು ವರ್ಷಗಳಲ್ಲಿ ಸೇವೆಯಿಂದ ನಿವೃತ್ತಿ ಆಗಲಿದ್ದರು.

ಸಿಎಂ ಸಂತಾಪ:

ಈ ಬಗ್ಗೆ ಮುಖ್ಯಮಂತ್ರಿಗಳು ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದು, "ಜಮ್ಮು ಕಾಶ್ಮೀರದ ಪೂಂಛ್ ಬಳಿ ಸೇನಾ ವಾಹನ ಅಪಘಾತಕ್ಕೀಡಾಗಿ ಕನ್ನಡಿಗ ಯೋಧರಾದ ದಯಾನಂದ ತಿರಕಣ್ಣವರ, ಅನೂಪ್ ಹಾಗೂ ಮಹೇಶ್ ಮರಿಗೊಂಡ ಅವರು ಹುತಾತ್ಮರಾದ ಸುದ್ದಿ ತಿಳಿದು ನೋವಾಯಿತು. ಮೃತ ಯೋಧರ ಆತ್ಮಕ್ಕೆ ಚಿರಶಾಂತಿ ದೊರಕಲಿ, ಅವರ ಕುಟುಂಬವರ್ಗಕ್ಕೆ ಈ ನೋವು ಭರಿಸುವ ಶಕ್ತಿ ಸಿಗಲೆಂದು ದೇವರಲ್ಲಿ ಪ್ರಾರ್ಥಿಸುತ್ತೇನೆ. ದೇಶ ಸೇವೆಗಾಗಿ ಜೀವ ಮುಡಿಪಿಟ್ಟ ಈ ಹುತಾತ್ಮ ಯೋಧರ ತ್ಯಾಗ, ಬಲಿದಾನವನ್ನು ನಾಡು ಸದಾಕಾಲ ಸ್ಮರಿಸಲಿದೆ" ಎಂದಿದ್ದಾರೆ.

ಮಣಿಪುರದಲ್ಲಿ ಚಿಕ್ಕೋಡಿ ಯೋಧ ಮೃತ:

ಮತ್ತೊಂದು ಘಟನೆಯಲ್ಲಿ, ಮಣಿಪುರದ ಇಂಫಾಲ್‌ನಲ್ಲಿ ಚಿಕ್ಕೋಡಿ ತಾಲೂಕಿನ ಯೋಧನೋರ್ವ ಮೃತಪಟ್ಟಿದ್ದಾರೆ. ಚಿಕ್ಕೋಡಿ ತಾಲೂಕಿನ ಕುಪ್ಪಾಣವಾಡಿ ಗ್ರಾಮದ ಧರ್ಮರಾಜ ಸುಭಾಷ ಖೋತ (43) ವೀರ ಮರಣ ಹೊಂದಿದವರು. ಅವರು ಇನ್ನು 2–3 ಕೇವಲ ತಿಂಗಳಲ್ಲಿ ನಿವೃತ್ತಿ ಆಗಲಿದ್ದರು. ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿದೆ.

### ಆಪರೇಷನ್ ಯಶಸ್ವಿ

ಡಾ. ರಾಜ್‌ಕುಟುಂಬದಲ್ಲಿ ಹಾಗೂ ಶಿವರಾಜ್ ಕುಮಾರ್ ಅಭಿಮಾನಿಗಳಲ್ಲಿ ಆತಂಕಕ್ಕೆ ಕಾರಣವಾಗಿತ್ತು.

ನಟ ಶಿವರಾಜ್ ಕುಮಾರ್ ಅವರು ಸಹ ಆಪರೇಷನ್‌ನ ಬಗ್ಗೆ ಸಣ್ಣ ಆತಂಕ ಇದೆ ಎಂದು ಹೇಳಿದ್ದರು. ಈಗ ಆ ಆತಂಕಗಳು ಕೊನೆಯಾಗಿವೆ. ನಿನ್ನೆ ಸಂಜೆ ಅಮೆರಿಕದಲ್ಲಿ ಯಶಸ್ವಿ ಶಸ್ತ್ರಚಿಕಿತ್ಸೆ ನಡೆದಿದೆ

ಅಮೆರಿಕದ ಪ್ರತಿಷ್ಠಿತ ಫ್ಲೋರಿಡಾದ್ಲಿರುವ ಮಿಯಾಮಿ ಕ್ಯಾನ್ಸರ್ ಇನ್‌ಸ್ಟಿಟ್ಯೂಟ್‌ನಲ್ಲಿ ಸರ್ಜರಿ ನಡೆದಿದ

### "ಜೈ ಬಾಪು, ಜೈ ಭೀಮ್, ಜೈ ಸಂವಿಧಾನ' ಸಮಾವೇಶ

ಈ ದೇಶಕ್ಕೆ ಮಾರ್ಗದರ್ಶನ ನೀಡಿದ್ದರು.

ಈ ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟು ಮಹಾತ್ಮರಾದರು. ಇದನ್ನು ಸ್ಮರಿಸಲು ನಾವು ಕಾರ್ಯಕ್ರಮ ರೂಪಿಸಿದ್ದೇವೆ. ಇದು ಕೇವಲ ಕಾಂಗ್ರೆಸ್ ಪಕ್ಷದ ಕಾರ್ಯಕ್ರಮವಲ್ಲ, ಎಲ್ಲರ ಕಾರ್ಯಕ್ರಮ. ಇಂದಿನ ಪರಿಸ್ಥಿತಿಯಲ್ಲಿ ದೇಶವನ್ನು ಯಾವ ದಿಕ್ಕಿನಲ್ಲಿ ಮುನ್ನಡೆಸಬೇಕು. ದೇಶಕ್ಕೆ ಯಾವ ರೀತಿ ಶಕ್ತಿ ತುಂಬಬೇಕು ಎಂದು ಈ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಚರ್ಚೆ ಮಾಡಲಿದ್ದೇವೆ" ಎಂದು ತಿಳಿಸಿದರು.

"ಈ ಕಾರ್ಯಕ್ರಮದಲ್ಲಿ ಪಕ್ಷದ ಕಾರ್ಯಕಾರಿ ಸಮಿತಿ ಸದಸ್ಯರು, ದೇಶದ ವಿವಿಧ ರಾಜ್ಯಗಳ ಕಾಂಗ್ರೆಸ್ ಪಕ್ಷದ ಹಾಲಿ ಮುಖ್ಯಮಂತ್ರಿಗಳು, ಮಾಜಿ ಮುಖ್ಯಮಂತ್ರಿಗಳು, ಎಲ್ಲಾ ರಾಜ್ಯಗಳ ಶಾಸಕಾಂಗ ಪಕ್ಷದ ನಾಯಕರು, ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷರು, ಎಲ್ಲಾ ಸಂಸತ್ ಸದಸ್ಯರು, ಶಾಸಕರು, ರಾಜ್ಯದುದ್ದಗಲದ ಕಾರ್ಯಕರ್ತರು ಹಾಗೂ ಸಾರ್ವಜನಿಕರಿಗೆ ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ಆಹ್ವಾನ ನೀಡಿದ್ದೇವೆ" ಎಂದು ಹೇಳಿದರು.

**ಕಾರ್ಯಕ್ರಮದ ವಿವರಗಳು:** "1924ರ ಅಧಿವೇಶನದ ದಾಖಲೆಗಳನ್ನು ಸಂಗ್ರಹಿಸಿದ್ದು, ಅದನ್ನು ಪುಸ್ತಕ ಮಾಡಿ ನಾಳೆ ಬಿಡುಗಡೆ ಮಾಡುತ್ತಿದ್ದೇವೆ. 26ರಂದು ಬೆಳಗ್ಗೆ 10 ಗಂಟೆಗೆ ವೀರ ಸೌಧದಲ್ಲಿ ಗಾಂಧಿ ಅವರ ಪುತ್ಥಳಿ ಅನಾವರಣ ಮಾಡಲಾಗುವುದು. ಜತೆಗೆ ಛಾಯಾಚಿತ್ರ ಪ್ರದರ್ಶನಕ್ಕೆ ಚಾಲನೆ ನೀಡಲಾಗುವುದು. ಬೆಳಗ್ಗೆ 10.45ಕ್ಕೆ ಖಾದಿ ಮೇಳವನ್ನು ಉದ್ಘಾಟನೆ ಮಾಡಲಾಗುವುದು. 11.15ಕ್ಕೆ ಗಂಗಾಧರ ದೇಶಪಾಂಡೆ ಅವರ ಸ್ಮಾರಕವನ್ನು ನಾನು ಹಾಗೂ ಮುಖ್ಯಮಂತ್ರಿಗಳು ಅನಾವರಣ ಮಾಡಲಿದ್ದೇವೆ. ನಂತರ ಗಂಗಾಧರ ದೇಶಪಾಂಡೆ ಅವರ ಛಾಯಾಚಿತ್ರ ಪ್ರದರ್ಶನಕ್ಕೆ ಚಾಲನೆ ನೀಡಲಾಗುವುದು. ಮಧ್ಯಾಹ್ನ 3 ಗಂಟೆಗೆ ಕಾರ್ಯಕಾರಿ ಸಮಿತಿ ಸಭೆ ನಡೆಯಲಿದ್ದು, ರಾತ್ರಿ 7ಕ್ಕೆ ಎಐಸಿಸಿ ಅಧ್ಯಕ್ಷರಿಂದ ಭೋಜನಕೂಟ ಏರ್ಪಡಿಸಲಾಗಿದೆ.

27ರಂದು ಬೆಳಗ್ಗೆ 10.30ಕ್ಕೆ ಸುವರ್ಣಸೌಧದಲ್ಲಿ ಗಾಂಧಿ ಪ್ರತಿಮೆಯನ್ನು ಮಲ್ಲಿಕಾರ್ಜುನ ಖರ್ಗೆ ಹಾಗೂ ರಾಹುಲ್ ಗಾಂಧಿ ಅವರು ಅನಾವರಣಗೊಳಿಸಲಿದ್ದಾರೆ. ಮುಖ್ಯಮಂತ್ರಿಗಳು ಈ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದು, ಸಭಾಧ್ಯಕ್ಷರಾದ ಯು.ಟಿ ಖಾದರ್ ಹಾಗೂ ಸಭಾಪತಿಗಳಾದ ಬಸವರಾಜ ಹೊರಟ್ಟಿ ಅವರ ಮುಖಂಡತ್ವದಲ್ಲಿ ಈ ಕಾರ್ಯಕ್ರಮ ನಡೆಯಲಿದ್ದು, ಎಲ್ಲಾ ಪಕ್ಷದ ನಾಯಕರಿಗೆ ಆಹ್ವಾನ ನೀಡಲಾಗುವುದು. ಸ್ಥಳೀಯ ನಾಯಕರು, ರಾಜ್ಯದ ಎಲ್ಲಾ ಸಂಸದರನ್ನು ನಾವು ಕಾರ್ಯಕ್ರಮಕ್ಕೆ ಆಹ್ವಾನಿಸಿದ್ದೇವೆ. 12 ಗಂಟೆಗೆ ಮುಖ್ಯಮಂತ್ರಿಗಳಿಂದ ಔತನಕೂಟ, ಮಧ್ಯಾಹ್ನ 1 ಗಂಟೆಗೆ ಸಾರ್ವಜನಿಕ ಸಮಾವೇಶ ನಡೆಯಲಿದೆ" ಎಂದು ತಿಳಿಸಿದರು.

**ಬೆಳಗಾವಿಯಲ್ಲಿ ದೀಪಾಲಂಕಾರ:** "ಬೆಳಗಾವಿ ಅಧಿವೇಶನದ ಶತಮಾನೋತ್ಸವ ಹಿನ್ನೆಲೆಯಲ್ಲಿ ಎಸ್ಕಾಂನವರು ಬೆಳಗಾವಿ ನಗರದಲ್ಲಿ ದೀಪಾಲಂಕಾರ ಮಾಡಿದ್ದು, ಬಹಳ ಉತ್ತಮವಾಗಿ ಅಲಂಕಾರ ಮಾಡಿದ್ದಾರೆ. ರಾಜ್ಯದ ಜನತೆ ಅದರಲ್ಲೂ ಕಿತ್ತೂರು ಕರ್ನಾಟಕ ಭಾಗದ ಜನ ಈ ದೀಪಾಲಂಕಾರವನ್ನು ಕಣ್ತುಂಬಿಕೊಳ್ಳಬೇಕು ಎಂದು ಮನವಿ ಮಾಡುತ್ತೇನೆ. 1904ರಲ್ಲಿ ಶಿವನಸಮುದ್ರದಲ್ಲಿ ವಿದ್ಯುತ್ ಉತ್ಪಾದನೆ ಆರಂಭವಾಗಿದ್ದು, 1924ರಲ್ಲಿ ಬೆಳಗಾವಿ ಅಧಿವೇಶನದ ಸಂದರ್ಭದಲ್ಲಿ ಬೆಳಗಾವಿಯಲ್ಲಿ ದೀಪಾಲಂಕಾರ ಮಾಡಲಾಗಿತ್ತು. ಅದರ ಫೋಟೋಗಳು ನಮ್ಮ ಬಳಿ ಇದೆ. ವಿಜಯನಗರದ ವಿರೂಪಾಕ್ಷ ದೇಗುಲ ಮಾದರಿಯ ದೀಪಾಲಂಕಾರದ ಫೋಟೋ ಲಭ್ಯವಾಗಿದೆ. ಅದೇ ರೀತಿ ಈ ಬಾರಿಯೂ ದೀಪಾಲಂಕಾರ ಮಾಡಲಾಗಿದೆ" ಎಂದು ತಿಳಿಸಿದರು.

"ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸದಸ್ಯರನ್ನು ಸೇವಾದಳದ ಕಾರ್ಯಕರ್ತರು ಪಾದಯಾತ್ರೆ ಮೂಲಕ ಸಭೆಯ ಜಾಗಕ್ಕೆ ಗೌರವಯುತ ಪಥಸಂಚಲನದ ಮೂಲಕ ಕರೆದೊಯ್ಯಲಿದ್ದಾರೆ. ನಂತರ ಸಭೆಯಲ್ಲಿ ನಮ್ಮ ನಾಯಕರು ವಿವಿಧ ವಿಚಾರಗಳ ಬಗ್ಗೆ ಚರ್ಚೆ ಮಾಡಿ ತೀರ್ಮಾನ ಮಾಡಲಿದ್ದಾರೆ" ಎಂದರು.

**ವರ್ಷಪೂರ್ತಿ ಗಾಂಧಿ ಭಾರತ ಕಾರ್ಯಕ್ರಮ:**

"ಸರ್ಕಾರ ಹಾಗೂ ಪಕ್ಷದ ವತಿಯಿಂದ ರಾಜ್ಯಾದ್ಯಂತ ಈ ಶತಮಾನೋತ್ಸವ ಗಾಂಧಿ ಭಾರತ ಕಾರ್ಯಕ್ರಮ ಆಚರಿಸಲಾಗುವುದು. ಶಾಲಾ ಕಾಲೇಜುಗಳಲ್ಲಿ ಚರ್ಚಾಸ್ಪರ್ಧೆ ನಡೆಸಲಾಗುವುದು. ಗಾಂಧಿ ತತ್ವ, ಆಚಾರ ವಿಚಾರಗಳ ಬಗ್ಗೆ ಚರ್ಚೆಗೆ ಅವಕಾಶ ನೀಡಲಾಗುವುದು. ಪಕ್ಷ ಹಾಗೂ ಸರ್ಕಾರದ ವತಿಯಿಂದ ಈಗಾಗಲೇ ಗಾಂಧಿ ಜಯಂತಿ ಅಂಗವಾಗಿ ಕಳೆದ ಅಕ್ಟೋಬರ್ 2ರಂದು ಗಾಂಧಿ ನಡಿಗೆ ಪಾದಯಾತ್ರೆ ಮಾಡಿದ್ದೇವೆ, ವಿಧಾನಸೌಧದಲ್ಲಿ ಶಾಲಾ ಮಕ್ಕಳ ಜತೆ ಸಂವಾದ ಕಾರ್ಯಕ್ರಮ ಮಾಡಲಾಗಿದೆ" ಎಂದು ತಿಳಿಸಿದರು.

# ಮ.ಬೆಟ್ಟ ಕಲುಷಿತಗೊಂಡ ಕಲ್ಯಾಣಿ ಕೊಳ, ಅಲಕ್ಷ್ಯಕ್ಕೊಳಗಾದ ಅಂತರಗಂಗೆ..!

## ಭಕ್ತರ ಪ್ರಾಣದ ಜತೆ ಚೆಲ್ಲಾಟವಾಡುತ್ತಿರುವ ಪ್ರಾಧಿಕಾರ । ಕೋಟಿ ಕೋಟಿ ಆದಾಯ ತರುವ ಭಕ್ತರಿಗೆ ಕನಿಷ್ಟ ಮೂಲಸೌಕರ್ಯ ಕಾಣದೆ ಕಂಗಾಲು ಕಾಲುಜಾರಿ ಬಿದ್ದು ಗಾಯಗೊಂಡ ಭಕ್ತರು..!

**ಚಾಮರಾಜನಗರ:** ಚಾಮರಾಜನಗರ ಜಿಲ್ಲೆಯ ಹನೂರು ಮಲೆ ಮಹದೇಶ್ವರ ಬೆಟ್ಟ ಅಭಿವೃದ್ಧಿ ಪ್ರಾಧಿಕಾರದ ದುರಾಡಳಿತದಿಂದ ಕೋಟಿ ಕೋಟಿ ಆದಾಯ ತರುವ ಭಕ್ತರಿಗೆ ಕನಿಷ್ಟ ಮೂಲಸೌಕರ್ಯ ಕಾಣದೆ ಕಂಗಾಲಾಗಿದ್ದಾರೆ.

ಮಲೆ ಮಹದೇಶ್ವರ ಬೆಟ್ಟದ ಕಲ್ಯಾಣಿ ಕೊಳ ಕಲುಷಿತಗೊಂಡಿದ್ದರೆ ಅಂತರಗಂಗೆ ಅಲಕ್ಷ್ಯಕ್ಕೊಳಗಾಗಿ ಗಬ್ಬೆದ್ದು ನಾರಿ ಕಲ್ಯಾಣಿ ಕೊಳದಲ್ಲಿ ಪಾಚಿ ಕಟ್ಟಿರುವ ಪರಿಣಾಮ ಮಲೆ ಮಾದಪ್ಪನ ಧರ್ಶನವನ್ನು ಪಡೆಯಲು ಬಂದಿದ್ದ ಹಲವಾರು ಭಕ್ತರು ಸೋಮವಾರ ಕೊಳದಲ್ಲಿ ಸ್ನಾನಕ್ಕಿಳಿದಾಗ ಜಾರಿ ಬಿದ್ದು ಪೆಟ್ಟಾಗಿ ಆಸ್ಪತ್ರೆಗೆ ದಾಖಲಾಗಿರುವ ಘಟನೆ ನಡೆದಿದೆ.

ಪ್ರಸಿದ್ದ ಧಾರ್ಮಿಕ ಯಾತ್ರಾ ಸ್ಥಳಗಳಲ್ಲಿ ಒಂದಾದ ಮಲೆ ಮಹದೇಶ್ವರ ಸ್ವಾಮಿ ದೇವಾಲಯವು ಇತ್ತೀಚಿನ ದಿನಗಳಲ್ಲಿ ಅತೀ ಹೆಚ್ಚು ಪ್ರಚಲಿತವನ್ನು ಹೊಂದುತಿದ್ದು, ಈ ಪವಾಡ ಪುರು?ನ ಪುಣ್ಯಸ್ಥಳಕ್ಕೆ ಪಾಪ ಕಳೆಯಲೆಂದು ಬರುವವರೆಷ್ಟೋ? ಅಲ್ಲದೆ ಪ್ರತಿ ನಿತ್ಯಾ ಸಹಸ್ರಾರು ಸಂಖ್ಯೆಯಲ್ಲಿ ತಮ್ಮ ಜೀವನ ಪಾವನವಾಗಲಿ ಎಂದು ಅಂತರಗಂಗೆ ಕಲ್ಯಾಣಿ ಕೊಳದಲ್ಲಿ ಮುಳುಗಿ ಸ್ನಾನ ಮಾಡುವವರೆ?ೋ..?

ಭಕ್ತರು ದೇವರಲ್ಲಿ ಪ್ರಾರ್ಥಿಸುತ್ತಾ ಯಾವುದೇ ರೀತಿಯಾದ ಸಂಕ?ಗಳು ಬಾರದೆ ಆರೋಗ್ಯದ ಜೀವನವನ್ನು ಕರುಣಿಸು ಎಂದು ಬಂದವರು ಸೋಮವಾರ ಅಂತರಗಂಗೆಯಲ್ಲಿರುವ ಕಲ್ಯಾಣಿ ಕೊಳದಲ್ಲಿ ಸ್ನಾನಕ್ಕೆ ತೆರಳುವ ಸಂದರ್ಭದಲ್ಲಿ ಕಾಲುಜಾರಿ ಬಿದ್ದು ಪೆಟ್ಟು ತಿಂದು ಆಸ್ಪತ್ರೆಗೆ ತೆರಳಿ ಚಿಕಿತ್ಸೆಯನ್ನು ಪಡೆದು ಸ್ವಗ್ರಾಮಕ್ಕೆ ತೆರಳಿದ್ದಾರೆ.

ಮೈಸೂರಿನಿಂದ ಮಲೆ ಮಹದೇಶ್ವರ ಸ್ವಾಮಿ ದೇವಾಲಯಕ್ಕೆ ಬಂದಿದ್ದ ಭಕ್ತರು ಹಾಗೂ ತಮಿಳುನಾಡಿನಿಂದ ಬಂದಿದ್ದ ಭಕ್ತರು ಸೋಮವಾರ ಬೆಳಿಗ್ಗೆ 10 ಗಂಟೆಯ ಸಂದರ್ಭದಲ್ಲಿ ಅಂತರ ಗಂಗೆಯ ಬಳಿ ಇರುವ ಕಲ್ಯಾಣಿಕೊಳದಲ್ಲಿ ಸ್ನಾನಕ್ಕೆಂದು ತೆರಳುವಾಗ ಕಲ್ಯಾಣಿ ಕೊಳದ ಸುತ್ತಲೂ ಇರುವ ಮೆಟ್ಟಲಿನಲ್ಲಿ ಪಾಚಿ ಕಟ್ಟಿದ್ದು ಇದರ ಮೇಲೆ ಕಾಲಿಟ್ಟ ಸಂದರ್ಭದಲ್ಲಿ ಕಾಲು ಜಾರಿ ಬಿದ್ದಿದ್ದಾರೆ.



ಇವರಲ್ಲಿ ಒಬ್ಬರಿಗೆ ತಲೆಗೆ ಪೆಟ್ಟಾದರೆ ಮತ್ತೊಬ್ಬರಿಗೆ ಕಾಲಿಗೆ ಪೆಟ್ಟಾಗಿ ಸ್ಥಳೀಯ ಆರೋಗ್ಯ ಕೇಂದ್ರದಲ್ಲಿ ಚಿಕಿತ್ಸೆಯನ್ನು ಪಡೆದಿದ್ದಾರೆ. ಅಲ್ಲದೆ ಹುಣಸೂರು ತಾಲೂಕಿನ ಹೆಮ್ಮಿಗೆಯಿಂದ ಶಬರಿಮಲೆಗೆ ತೆರಳಿದ್ದ ತಂಡ ಮಾಲೆ ಬಿಚ್ಚಲು ಮಹದೇಶ್ವರ ಬೆಟ್ಟಕ್ಕೆ ಬಂದು ಸ್ನಾನಕ್ಕೆಂದು ಇಳಿಯುವಾಗ ಕುಮಾರ್ ಎಂಬುವವರು ಕಾಲು ಜಾರಿ ಬಿದ್ದು ತಲೆಗೆ ತೀವ್ರಪೆಟ್ಟು ಬಿದ್ದು ಪ್ರಥಮ ಚಿಕಿತ್ಸೆಯನ್ನು ಪಡೆದು ಸ್ವಗ್ರಾಮಕ್ಕೆ ತೆರಳಿರುವ ಘಟನೆ ಜರುಗಿದೆ.

ಈ ಬಗ್ಗೆ ಮಹದೇಶ್ವರ ಬೆಟ್ಟಕ್ಕೆ ಬಂದ್ದಿದ್ದ ಭಕ್ತ ಕುಮಾರ್ ಪ್ರತಿಕ್ರಿಯಿಸಿ ನಾವು ಪ್ರತೀ ವ?ರ್ವೂ ಸಹ ಶಬರಿಮಲೆಗೆ ತೆರಳಿ ಕೊನೆಯದಾಗಿ ಮಾಲೆಯನ್ನು ಬಿಚ್ಚಲು ಮಾದಪ್ಪನ ಸನ್ನಿಧಿಗೆ ಬರುತ್ತೇವೆ ಅದರಂತೆ ಮಾಲೆ ಬಿಚ್ಚುವ ಸಂದರ್ಭದಲ್ಲಿ ಈ ಅವಘಡ ಸಂಭವಿಸಿದೆ.

ಇದರಿಂದ ನಮ್ಮ ಮನಸ್ಸಿಗೆ ಅಶಾಂತಿ ಉಂಟಾಗುವುದರ ಜತೆಗೆ ದೈಹಿಕವಾಗಿಯೂ ಪೆಟ್ಟು ಬಿದ್ದಿದ್ದು ಆಘಾತವಾಗಿದೆ. ಅಲ್ಲದೆ ಕಲ್ಯಾಣಿ ಕೊಳದಲ್ಲಿ ಇರುವ ನೀರು ಅಶುಚಿತ್ವದಿಂದ ಕೂಡಿದ್ದು, ಸ್ನಾನ ಮಾಡಲು ಕೂಡ ಯೋಗ್ಯವಿಲ್ಲ ಈ ನೀರಿನಲ್ಲಿ ಸ್ನಾನ ಮಾಡಿದರೆ ಸಾಂಕ್ರಾಮಿಕ ರೋಗಗಳು ಬರುವುದು ಖಂಡಿತ. ಶತಸಿದ್ಧ ಸ್ವ ಗ್ರಾಮದಿಂದ ಮಹದೇಶ್ವರ ಬೆಟ್ಟದವರೆಗೆ ಶಬರಿ ಮಲೆ ಯಾತ್ರೆಯಲ್ಲಿ ಕೊನೆಯದಿನ ಈ ರೀತಿ ಪೆಟ್ಟಾಗಿದೆ.

ಸದ್ಯ ಪ್ರಾಣಾಪಾಯದಿಂದ ಪಾರಾಗಿದ್ದು, ಪ್ರಾಣಹಾನಿ ಏನಾದರು ಸಂಭವಿಸಿದ್ದರೆ ಯಾರು ಹೊಣೆಗಾರರಾಗುತ್ತಾರೆ. ಮಹದೇಶ್ವರ ಬೆಟ್ಟದ ಪ್ರಾಧಿಕಾರದ ಅಧಿಕಾರಿಗಳು ಇತ್ತಕಡೆ ಗಮನವನ್ನರಿಸಿ ದೇವಾಲಯಕ್ಕೆ ಬರುವ ಭಕ್ತರ ಹಿತದೃಷ್ಠಿಯಿಂದ ಸ್ನಾನ ಘಟ್ಟ ಹಾಗೂ ಇನ್ನಿತರ ಮೂಲಬೂತ ಸೌಲಭ್ಯವನ್ನು ಕಲ್ಪಿಸುವುದರ ಜೊತೆಗೆ ಅವರ ಹಿತ ದೃಷ್ಠಿಗೆ ಧಕ್ಕೆಯಾಗದಂತೆ ವ್ಯವಸ್ಥೆಯನ್ನು ಕಲ್ಪಿಸಬೇಕು ಎಂದು ಹರಿಹಾಯ್ದಿದ್ದಾರೆ.

ಅಂತರ ಗಂಗೆಯಲ್ಲಿ ಅಶುತಿತ್ವ ತಾಂಡವ :

ಮಲೆ ಮಹದೇಶ್ವರ ಪುಣ್ಯಕ್ಷೇತ್ರಕ್ಕೆ ತೆರಳುವ ಭಕ್ತರು ಮುಡಿಸೇವೆ ಮಾಡಿಸಿಕೊಂಡು, ಸ್ನಾನಕ್ಕಾಗಿ ಅಂತರಗಂಗೆ ಕೊಳಕ್ಕೆ ಬರುವರು. ಆದರೆ ಅಂತರಗಂಗೆಯಲ್ಲಿ ಕೊಳಚೆ ನೀರಿನಲ್ಲಿ ಸ್ನಾನ ಮಾಡುತ್ತಿರುವುದು ಪ್ರಾಧಿಕಾರದ ಕಣ್ಣಿಗೆ ಕಾಣುತ್ತಿಲ್ಲವೇ...? ಪ್ರಾಧಿಕಾರ ಕೇವಲ ಆದಾಯ ನೋಡಿದರೆ ಸಾಲದು, ಭಕ್ತರಿಗೆ ಅಗತ್ಯವಾದ ಮೂಲಸೌಕರ್ಯವನ್ನು ಕಲ್ಪಿಸಿಕೊಡಬೇಕೆಂದು ಭಕ್ತಾದಿಗಳು ಆಗ್ರಹಿಸಿದ್ದಾರೆ. ಮಲೆ ಮಾದಪ್ಪನ ಬೆಟ್ಟದಲ್ಲಿ ತಿಂಗಳಿಗೆ ಕೋಟಿ ಕೋಟಿಯ?ು ಆದಾಯವನ್ನು ನೋಡುತ್ತಿದೆ ಹೊರತು ಭಕ್ತರಿಗೆ ಮೂಲಭೂತ ಸೌಕರ್ಯ ಕಲ್ಪಿಸುವಲ್ಲಿ ವಿಫಲವಾಗಿದೆ. ಪ್ರಸಿದ್ಧ ದೇವಾಲಯಗಳಲ್ಲಿ ಸ್ವಚ್ಚ ಸುಂದರವಾದ ಕೊಳ ಇರುವುದು ನೋಡಿದ್ದೇವೆ, ಮಲೆ ಮಾದಪ್ಪನ ಸನ್ನಿಧಿಯಲ್ಲಿ ಕಲ್ಯಾಣಿಕೊಳ ಅಂತರಗಂಗೆಯಲ್ಲಿ ಪಾಚಿ ಕಟ್ಟಿ ಹುಳ ತುಂಬಿ ತುಳುಕುತ್ತಿದೆ. ಗಬ್ಬೆದ್ದು ನಾರುತ್ತಿದೆ ಇದು ಪ್ರಾಧಿಕಾರದ ಕಣ್ಣಿಗೆ ಕಾಣಿಸುತ್ತಿಲ್ಲವಾ ಎಂಬುದು ಭಕ್ತರ ಆಕ್ರೋಶಭರಿತ ನುಡಿಯಾಗಿದೆ.

ಭಕ್ತರಿಗೆ ಸಕಲ ರೀತಿಯ ಮೂಲ ಸೌಕರ್ಯ ಕಲ್ಪಿಸುವಲ್ಲಿ ಪ್ರಾಧಿಕಾರ ಯಶಸ್ವಿಯಾಗಿದೆ ಎಂದು ಕೆಲ ಮಾಧ್ಯಮಗಳಲ್ಲಿ ಪುಂಗುವ ಕಾರ್ಯದರ್ಶಿ ಎಇ ರಘುರವರ ಕಾರ್ಯವೈಖರಿಗೆ ಹಿಡಿದ ಕನ್ನಡಿ ಇದಾಗಿದ್ದು, ಭಕ್ತರಿಗೆ ಪ್ರಮುಖವಾಗಿ ಬೇಕಾದ ಕಲ್ಯಾಣಿ ಕೊಳ, ಅಂತರ ಗಂಗೆಯಲ್ಲಿ ಕಲುಷಿತಗೊಂಡು ಗಬ್ಬೆದ್ದು ನಾರುತ್ತಿರುವುದೇ ಅಭಿವೃದ್ಧಿಯೇ..? ಭಕ್ತರ ಧಾರ್ಮಿಕ ಭಾವನೆಗೆ ದಕ್ಕೆ ತಂದಿರುವುದರ ಜತೆಗೆ ಭಕ್ತರ ಪ್ರಾಣದ ಜತೆ ಚೆಲ್ಲಾಟವಾಡುತ್ತಿರುವುದು ಸುರಕ್ಷತೆಯೇ..? ಇದಕ್ಕೆ ಪ್ರಾಧಿಕಾರದ ಅಧಿಕಾರಿಗಳೇ ಉತ್ತರ ನೀಡಬೇಕಾಗಿದ್ದು ಅನಾರೋಗ್ಯ ಪ್ರಾಣಾಪಾಯ ಸೇರಿದಂತೆ ಯಾವುದೇ ಅವಘಡಗಳು ಸಂಭವಿಸಿದರೆ ಅದಕ್ಕೆ ಪ್ರಾಧಿಕಾರವೆ ನೇರ ಹೊಣೆ ಎಂದು ಭಕ್ತರು ಆಕ್ರೋಶ ವ್ಯಕ್ತಪಡಿಸಿದ್ದಾರೆ.



# ಧರ್ಮಸ್ಥಳಗ್ರಾಮಾಭಿವೃದ್ಧಿ ಯೋಜನೆಯ ಮೂಲಕ ಆರ್ಥಿಕ ಸಬಲೀಕರಣ

**ಶಿಡ್ಲಘಟ್ಟ:** ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಮೂಲಕ ಆರ್ಥಿಕ ಸಬಲೀಕರಣದೊಂದಿಗೆ ಈ ರೀತಿಯ ಸಮಾಜಮುಖಿ ಕಾರ್ಯಕ್ರಮಗಳು ನಡೆಯುತ್ತಿರುವುದು ಶ್ಲಾಘನೀಯ ಎಂದು ನಗರಸಭಾ ಸದಸ್ಯರಾದ ಅನಿಲ್ ಕುಮಾರ್ ತಿಳಿಸಿದರು.

ಧರ್ಮಸ್ಥಳದ ಪೂಜ್ಯ ಧರ್ಮಾಧಿಕಾರಿಗಳು ಸಮಾಜದ ನಿರ್ಗತಿಕ ವರ್ಗದವರಿಗೆ ಮಾಶಾಸನ ವಿತರಣೆ, ದಿನ ಬಳಕೆ ವಸ್ತುಗಳ ವಿತರಣೆ, ಮನೆಗಳ ನಿರ್ಮಾಣ ಮುಂತಾದ ಕಾರ್ಯಕ್ರಮಗಳ ಮೂಲಕ ಅವರ ಜೀವನ ನಿರ್ವಹಣೆಗೆ ದಾರಿ ದೀಪವಾಗಿದ್ದಾರೆ ಎಂದರು.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಡಿ ತಾಲ್ಲೂಕಿನಲ್ಲಿ ಒಟ್ಟು 139 ಮಂದಿ ನಿರ್ಗತಿಕರಿಗೆ ರೂ.1000 ಗಳಂತೆ ಪ್ರತಿ ತಿಂಗಳು ಒಟ್ಟು ರೂ. 139000/- ಮಾಶಾಸನ ಮೊತ್ತ ವಿತರಿಸಲಾಗುತ್ತಿದೆ, ಇದರಲ್ಲಿ ಆಯ್ದ ಫಲಾನುಭವಿಗಳಿಗೆ ಇಂದು ವಾತ್ಸಲ್ಯ ಕಾರ್ಯಕ್ರಮದಡಿಯಲ್ಲಿ ಫಲಾನುಭವಿಗಳಿಗೆ ದಿನನಿತ್ಯ ಅಡುಗೆ ಮಾಡಲು ಅಗತ್ಯವಿರುವ ಪಾತ್ರೆ ಸಾಮಗ್ರಿಗಳು, ದಿನನಿತ್ಯ ಧರಿಸುವ ಬಟ್ಟೆಗಳು, ಚಾಪೆ,ಹೊದಿಕೆ,ದಿಂಬು, ಸಿರಿಧಾನ್ಯಗಳ ಮಿಶ್ರಣ, ಮುಂತಾದ ವಸ್ತುಗಳನ್ನೊಳಗೊಂಡ ಕಿಟ್ ಗಳನ್ನು ತಾಲ್ಲೂಕಿನ ಯೋಜನಾಧಿಕಾರಿಗಳಾದ ಎಸ್. ಸುರೇಶ್ ಗೌಡ ಫಲಾನುಭಾವಿಗಳಿಗೆ ಅವರು ವಿತರಿಸಿದರು.

ಈ ಸಂದರ್ಭದಲ್ಲಿ ಗ್ರಾಮಾಭಿವೃದ್ಧಿ ಯೋಜನೆಯ ವಲಯ ಮೇಲ್ವಿಚಾರಕರಾದ ಮಂಜುನಾಥ್, ಜ್ಞಾನವಿಕಾಸ ಸಮನ್ವಯಾಧಿಕಾರಿ ಅರುಣಾ,ಸ್ಥಳೀಯ ಸೇವಾಪ್ರತಿನಿಧಿಗಳು, ಸ್ವ ಸಹಾಯ ಸಂಘದ ಸದಸ್ಯರು ಪಾಲ್ಗೊಂಡಿದ್ದರು.

# ಪುರಸಭೆ ವ್ಯಾಪ್ತಿಯ ಅಂಗಡಿ ಮುಂಗಟ್ಟುಗಳ ಮೇಲ್ಚಾವಣಿ ತೆರವುಗೊಳಿಸಲು ಸೂಚನೆ

**ಗುಂಡ್ಲುಪೇಟೆ:** ಗುಂಡ್ಲುಪೇಟೆ ಪುರಸಭೆ ವ್ಯಾಪ್ತಿಯ ಮುಖ್ಯ ರಸ್ತೆಗಳಲ್ಲಿ ಪಾದಚಾರಿ ಮಾರ್ಗಗಳಿಗೆ ಹೊಂದಿಕೊಂಡಿರುವ ಸ್ವತ್ತುಗಳಲ್ಲಿ ಅಂಗಡಿ ಮುಂಗಟ್ಟುಗಳ ಮೇಲ್ಚಾವಣಿ ಮುಂಚಾಚಿಕೊಂಡಿರುವುದರಿಂದ ಸಾರ್ವಜನಿಕರ ಸುಗಮ ಸಂಚಾರಕ್ಕೆ ತೊಂದರೆಯಾಗುತ್ತಿದ್ದು, ಇದನ್ನು ತೆರವುಗೊಳಿಸುವಂತೆ ಪುರಸಭೆ ತಿಳಿಸಿದೆ.

ಅಂಗಡಿ ಮಾಲೀಕರು ತಮ್ಮ ಸ್ವತ್ತಿನ ಅಳತೆ ವ್ಯಾಪ್ತಿಯಲ್ಲಿ ಅಂಗಡಿ ಮುಂಗಟ್ಟುಗಳ ಮೇಲ್ಚಾವಣಿ ನಿರ್ಮಿಸಿಕೊಳ್ಳದೇ ಪಾದಚಾರಿ ಮಾರ್ಗವನ್ನು ಒತ್ತುವರಿ ಮಾಡಿ ಮೇಲ್ಚಾವಣಿ ಮುಂಚಾಚಿಕೊಂಡಿರುವುದು ಹಾಗೂ ಮುಂಗಟ್ಟುಗಳನ್ನು ಪಾದಚಾರಿ ಮಾರ್ಗದಲ್ಲಿ ಇಟ್ಟುಕೊಂಡಿರುವುದು ಕಂಡು ಬಂದಿದೆ. ಇದರಿಂದ ಸಾರ್ವಜನಿಕರ ಸುಗಮ ಸಂಚಾರಕ್ಕೆ ತೊಂದರೆಯಾಗುತ್ತಿದೆ. ಒತ್ತುವರಿ ಮಾಡಿರುವ ಪಾದಚಾರಿ ಮಾರ್ಗವನ್ನು ಹಾಗೂ ಮೇಲ್ಚಾವಣಿ ಮುಂಚಾಚಿಕೊಂಡಿರುವುದನ್ನು ಡಿಸೆಂಬರ್ 30ರೊಳಗೆ ತಾವೇ ಸ್ವತಃ ತೆರವುಗೊಳಿಸಿಕೊಂಡು ಸಾರ್ವಜನಿಕರ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಬೇಕು. ಒಂದು ವೇಳೆ ತೆರವು ಮಾಡುವುದನ್ನು ನಿರ್ಲಕ್ಷಿಸಿದಲ್ಲಿ ಆಸ್ತಿ ಮಾಲೀಕರ ವಿರುದ್ದ ಪುರಸಭೆ ಕಾಯ್ದೆ 1964ರಂತೆ ಕ್ರಮವಹಿಸಲಾಗುವುದು ಎಂದು ಪುರಸಭೆ ಮುಖ್ಯಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ರೈಲಿಗೆ ತಲೆಕೊಟ್ಟು ಆತ್ಮಹತ್ಯೆ

**ಶಿಡ್ಲಘಟ್ಟ:** ರೈಲ್ವೆ ನಿಲ್ದಾಣದ ಸಮೀಪದ ರೈಲ್ವೆ ಹಳಿಗಳ ಮೇಲೆ ರುಂಡ- ಮುಂಡ ಬೇರೆ ಬೇರೆಯಾಗಿ ವ್ಯಕ್ತಿಯೊಬ್ಬರ ಮೃತ ದೇಹ ಇಂದು ಪತ್ತೆಯಾಗಿದ್ದು, ಪಾಳಿಯ ರೈಲಿಗೆ ತಲೆಗೆ ಕೊಟ್ಟುಜೀವ ಕಳೆದುಕೊಂಡಿರುವುದು ಬೆಳಕಿಗೆ ಬಂದಿದೆ.

ಮೃತದೇಹ ರೈಲು ಹಳಿಗಳ ಮೇಲೆ ಕಂಡು ಬಂದಿದ್ದು ಸಾರ್ವಜನಿಕರು ಗಮನಿಸಿ ತಕ್ಷಣವೇ ಸ್ಥಳೀಯ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಪೊಲೀಸರು ಸ್ಥಳಕ್ಕೆ ಬೇಟಿ ನೀಡಿ ಪರಿಶೀಲನೆ ನಡೆಸಿ ಮಾಹಿತಿ ಕಲೆ ಹಾಕಿದ್ದು, ಶಿಡ್ಲಘಟ್ಟ ಬೈಪಾಸ್ ರಸ್ತೆಯ ನಿವಾಸಿ ಶೋಭನ್ ಬಾಬು(35 ವ?ರ್) ಬಿನ್ ಸತ್ಯನಾರಾಯಣಪ್ಪ ಎಂದು ತಿಳಿದು ಬಂದಿದ್ದು, ಮೃತರು ಇಬ್ಬರು ಚಿಕ್ಕ ಹೆಣ್ಣು ಮಕ್ಕಳು, ಹೆಂಡತಿ, ಮತ್ತು ನಾಲ್ಕು ಅಣ್ಣ ತಮ್ಮಂದಿರನ್ನು ಹೊಂದಿದ್ದಾರೆ.

ಬೆಂಗಳೂರಿನಿಂದ - ಚಿಕ್ಕಬಳ್ಳಾಪುರ, ಶಿಡ್ಲಘಟ್ಟ ಮಾರ್ಗವಾಗಿ ಬಂಗಾರ ಪೇಟೆ, ಕೋಲಾರಕ್ಕೆ ತೆರಳುವ ರೈಲಿಗೆ ತಲೆಕೊಟ್ಟು ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ಪ್ರಾಥಮಿಕವಾಗಿ ತಿಳಿದು ಬಂದಿದೆ.

ಮೃತ ವ್ಯಕ್ತಿ ಮರಗೆಲಸ (ಕಾರ್ಪೆಂಟರ್) ಮಾಡುತ್ತಿದ್ದು, ಸುಮಾರು15 ರಿಂದ 20 ಲಕ್ಷದವರೆಗೂ ಸಾಲ ಮಾಡಿಕೊಂಡಿದ್ದ ಎನ್ನಲಾಗಿದೆ.

ಕುಟುಂಬದವರು ಜಮೀನು ಮಾರಾಟ ಮಾಡಿ ಸಾಲ ತೀರಿಸುವುದಾಗಿ ತಿಳಿಸಿದ್ದರು ಎನ್ನಲಾಗಿದ್ದು, ಆದರೆ ಸಾಲಗಾರರ ಕಿರುಕುಳದಿಂದ ಮನನೊಂದು ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎನ್ನಲಾಗಿದೆ ಪೊಲೀಸರ ತನಿಖೆಯಿಂದ ಪ್ರಕರಣದ ಸತ್ಯಾಸತ್ಯತೆ ತಿಳಿದು ಬರಬೇಕಾಗಿದೆ ಪೊಲೀಸರು ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ.


# ನಮ್ಮ ಕರ್ನಾಟಕ ಸೇನೆಯ ನೂತನ ಸಾರಥಿ ಮಾದನಹಟ್ಟಿ ರವಿಕುಮಾರ್

**ಮಾಲೂರು:** ನಮ್ಮ ಕರ್ನಾಟಕ ಸೇನೆಯ ನೂತನ ಅಧ್ಯಕ್ಷರಾಗಿ ಮಾದನಹಟ್ಟಿ ರವಿಕುಮಾರ್, ಕಾರ್ಯ ಅಧ್ಯಕ್ಷರಾಗಿ ಜ್ವಾಲಾಮುಖಿ ಸತೀಶ್ ಅವರು ಅವಿರೋಧವಾಗಿ ಆಯ್ಕೆಯಾದರು.

ಪಟ್ಟಣದ ಕಸಾಪ ಕಚೇರಿಯಲ್ಲಿ ನಮ್ಮ ಕರ್ನಾಟಕ ಸೇನೆಯ ರಾಜ್ಯಾಧ್ಯಕ್ಷ ಬಸವರಾಜ್ ಪಡುಕೋಟೆ ಅವರ ಅದೇಶದಲ್ಲಿ ಪ್ರದಾನ ಕಾರ್ಯದರ್ಶಿ ಚಾಕನಹಳ್ಳಿ ನಾಗರಾಜ್ ಅವರ ನಿರ್ದೇಶನದಂತೆ ಜಿಲ್ಲಾಧ್ಯಕ್ಷ ಎಸ್.ಎಂ.ರಾಜು ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ನೂತನ ಪದಾಧಿಕಾರಿಗಳನ್ನು ಸರ್ವಾನುಮತದಿಂದ ಆಯ್ಕೆ ಮಾಡಿ ಘೋ?ಣೆ ಮಾಡಿದರು.

ತಾಲ್ಲೂಕು ಅಧ್ಯಕ್ಷರಾಗಿ ಮಾದನಹಟ್ಟಿ ರವಿಕುಮಾರ್, ಪೋ?ಕರಾಗಿ ಮುನೇಂದ್ರಪ್ಪ, ಕಾರ್ಯಾಧ್ಯಕ್ಷರಾಗಿ ಜ್ವಾಲಾಮುಖಿ ಸತೀಶ್, ತಾಲ್ಲೂಕು ಆಟೋ ಘಟಕ ಉಪಾಧ್ಯಕ್ಷರಾಗಿ ಸಿ.ಎನ್.ಮಂಜುನಾಥ್ ಅವರು ಆಯ್ಕೆಯಾದರು.

ಈ ಸಂದರ್ಭದಲ್ಲಿ ಮಾತನಾಡಿದ ರಾಜ್ಯ ಪ್ರಧಾನ ಕಾರ್ಯದರ್ಶಿ ಚಾಕನಹಳ್ಳಿ ನಾಗರಾಜ್ ನಮ್ಮ ಕರ್ನಾಟಕ ಸೇನೆಯು ರಾಜ್ಯದಲ್ಲಿ ರಾಜ್ಯಾಧ್ಯಕ್ಷ ಬಸವರಾಜ್ ಪಡಕೋಟೆ ಅವರ ನೇತೃತ್ವದಲ್ಲಿ ಕನ್ನಡಪರ ಹಾಗೂ ಜನಪರ ಹೋರಾಟಗಳನ್ನು ಹಮ್ಮಿಕೊಂಡು ಕ್ರಿಯಾಶೀಲವಾಗಿ ಕಾರ್ಯನಿರ್ವಹಿಸುತ್ತಿದೆ ರಾಜ್ಯದ ಎಲ್ಲಾ ಜಿಲ್ಲೆಗಳು ಹಾಗೂ ತಾಲೂಕುಗಳಲ್ಲಿಯೂ ಸಹ ನಮ್ಮ ಕರ್ನಾಟಕ ಸೇನೆಯು ಘಟಕಗಳನ್ನು ಪ್ರಾರಂಭಿಸಿದ್ದು ನಾಡು ನುಡಿ ಜಲ ಭಾ? ಸೇರಿದಂತೆ ಸ್ಥಳೀಯ ಜ್ವಲಂತ ಸಮಸ್ಯೆಗಳಿಗೆ ಕುತ್ತು ಬಂದಾಗ ಹೋರಾಟವನ್ನು ರೂಪಿಸುತ್ತದೆ.



ಇಲ್ಲಿನ ತಾಲೂಕು ಘಟಕಕ್ಕೆ ನೂತನವಾಗಿ ಕಾರ್ಯಕರ್ತ ಮಾದನಹಟ್ಟಿ ರವಿಕುಮಾರ್ ಅವರನ್ನು ಅಧ್ಯಕ್ಷರಾಗಿ ಆಯ್ಕೆ ಮಾಡಿದ್ದು ನೂತನ ಅಧ್ಯಕ್ಷರು ಸಂಘಟನೆಗೆ ಎಲ್ಲಾ ಪದಾಧಿಕಾರಿಗಳ ಒಗ್ಗಟ್ಟಾಗಿ ಕರೆದೊಯ್ಯುವ ಸಂಘಟನೆಯನ್ನು ಬಲಿ? ಗೊಳಿಸಿ ಜನಪರ ಹಾಗೂ ಕನ್ನಡಪರ ಹೋರಾಟಗಳನ್ನು ರೂಪಿಸುವಂತೆ ಹೇಳಿದರು.

ಜಿಲ್ಲಾಧ್ಯಕ್ಷ ಎಸ್ಎಂ ರಾಜು ಮಾತನಾಡಿ, ನಮ್ಮ ಕರ್ನಾಟಕ ಸೇನೆಯು ರಾಜ್ಯದಲ್ಲಿ ಹಲವು ರೀತಿಯ ಸಮಸ್ಯೆಗಳ ವಿರುದ್ಧವಾಗಿ ಹೋರಾಟ ನಡೆಸಿ ಸಮಸ್ಯೆಗಳನ್ನು ಬಗೆಹರಿಸುವ ಕೆಲಸ ಮಾಡಿದೆ ಜೊತೆಗೆ ನಾಡು ನುಡಿ ಗಡಿಗೆ ಸಂಬಂಧಿಸಿದ ಯಾವುದೇ ಸಮಸ್ಯೆಗಳು ಉದ್ಭವಿಸಿದಾಗ ಎದೆಗುಂದದೆ ರಾಜ್ಯ ಜಿಲ್ಲೆ ಮತ್ತು ತಾಲೂಕುಗಳಲ್ಲಿ ಹೋರಾಟಗಳನ್ನು ನಿರಂತರವಾಗಿ ನಡೆಸುತ್ತಾ ಬಂದಿದೆ ಇಲ್ಲಿನ ಮಾಲೂರು ತಾಲೂಕಿನಲ್ಲಿ ಸಂಘಟನೆಯನ್ನು ಬಲಿ? ಗೊಳಿಸುವ ಸಲುವಾಗಿ ತಾಲೂಕು ಘಟಕಕ್ಕೆ ನೂತನವಾಗಿ ಸಂಘಟನೆಯ ಕಾರ್ಯಕರ್ತ ಮಾದನಹಟ್ಟಿ ರವಿಕುಮಾರ್ ಅವರನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಗಿದೆ ಜೊತೆಗೆ ನಗರ ಕಾರ್ಯದರ್ಶಿಯಾಗಿ ಜ್ವಾಲಾಮುಖಿ ಸತೀಶ್ ಆಟೋ ಘಟಕದ ಉಪಾಧ್ಯಕ್ಷರಾಗಿ ಸಿಎನ್ ಮಂಜುನಾಥ್ ಅವರನ್ನು ಆಯ್ಕೆ ಮಾಡಲಾಗಿದೆ ನೂತನವಾಗಿ ಆಯ್ಕೆಯಾದ ಅಧ್ಯಕ್ಷರು ಸೇರಿದಂತೆ ಪದಾಧಿಕಾರಿಗಳು ಸಂಘಟನೆಯ ಹೋರಾಟಗಳು ಹಾಗೂ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಮೂಲಕ ಸಂಘಟನೆಯನ್ನು ಕಟ್ಟುವಂತೆ ಹೇಳಿದರು.


ನೂತನ ಅಧ್ಯಕ್ಷ ಎಂ ರವಿಕುಮಾರ್ ಮಾತನಾಡಿ, ನಮ್ಮ ಕರ್ನಾಟಕ ಸೇನೆಯ ಜಿಲ್ಲಾ ಅಧ್ಯಕ್ಷ ಹಾಗೂ ರಾಜ್ಯ ಉಪಾಧ್ಯಕ್ಷ ಸೇರಿದಂತೆ ಎಲ್ಲಾ ಪದಾಧಿಕಾರಿಗಳು ಒಗ್ಗಟ್ಟಾಗಿ ನನ್ನನ್ನು ತಾಲೂಕು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿದ್ದು ಸಂಘಟನೆಯ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರನ್ನು ಒಗ್ಗಟ್ಟಾಗಿ ಕರೆದೊಯ್ಯುವ ಮೂಲಕ ಕನ್ನಡಪರ ಹಾಗೂ ಸ್ಥಳೀಯ ಸಮಸ್ಯೆಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ಹೋರಾಟಗಳನ್ನು ರೂಪಿಸಿ ಸಂಘಟನೆಯನ್ನು ಬಲಿ? ಗೊಳಿಸಲಾಗುವುದು ತಾಲೂಕಿನ ಎಲ್ಲಾ ಹೋಬಳಿ ಘಟಕಗಳಲ್ಲಿ ಸಂಘಟನೆಗೆ ಪದಾಧಿಕಾರಿಗಳ ನೇಮಕ ಮಾಡುವುದರ ಮೂಲಕ ಸಂಘಟನೆಯನ್ನು ವಿಸ್ತರಿಸಲಾಗುವುದು

ಇತ್ತೀಚಿನ ದಿನಗಳಲ್ಲಿ ಪಟ್ಟಣದಲ್ಲಿ ಆಂಗ್ಲ ಭಾ?ಯ ನಾಮಫಲಕಗಳು ಅಂಗಡಿ ಮುಂಗಟುಗಳಲ್ಲಿ ಕಾಣುತ್ತಿದ್ದೂ ಆಂಗ್ಲ ಭಾ?ಯ ನಾಮಪಲಕಗಳನ್ನು ತೆರೆವುಗೊಳಿಸಿ ಕನ್ನಡಭಾ?ಯಲ್ಲಿ ನಾಮಫಲಕಗಳನ್ನು ಅಳವಡಿಸುವಂತೆ ಕರಪತ್ರಗಳ ಮೂಲಕ ಪ್ರತಿ ಅಂಗಡಿ ಹೋಟೆಲ್ ಗಳಿಗೆ ತೆರಳಿ ಶಾಂತ ರೀತಿಯಲ್ಲಿ ಜಾಗೃತಿ ಮೂಡಿಸಲಾಗುವುದು

ಪಟ್ಟಣದ ಸರ್ಕಾರಿ ಕಚೇರಿಗಳಲ್ಲಿ ಕನ್ನಡ ಭಾ?ಯನ್ನು ಕಡ್ಡಾಯವಾಗಿ ಮಾತನಾಡುವಂತೆ ಕರಪತ್ರಗಳನ್ನು ನೀಡಿ ಮನವಿ ಮಾಡಲಾಗುವುದು ಎಂದರು

ಈ ಸಂದರ್ಭದಲ್ಲಿ ದಲಿತ ನಾಗರೀಕ ಸಮಿತಿ ರಾಜ್ಯಾಧ್ಯಕ್ಷ ಕೋಡೂರು ಗೋಪಾಲ್, ರಾಜ್ಯ ಆಟೋಘಟಕ ಉಪಾಧ್ಯಕ್ಷ ಆಟೋ ಶ್ರೀನಿವಾಸ್, ತಾಲ್ಲೂಕು ಪ್ರಧಾನ ಕಾರ್ಯದರ್ಶಿ ಕೆ.ಎನ್. ಜಗದೀಶ್, ಕಾರ್ಯಾಧ್ಯಕ್ಷ ಡಿ.ಎನ್.ಗೋಪಾಲ್, ಉಪಾಧ್ಯಕ್ಷ ಚನ್ನಕೃ? , ಶ್ಯಾಮೇಗೌಡ, ಜಿಲ್ಲಾ ಉಪಾಧ್ಯಕ್ಷ ಮಂಗಾಪುರ ಸ್ವಾಮಿ, ತಾಲ್ಲೂಕು ಮಹಿಳಾ ಅಧ್ಯಕ್ಷೆ ಮುನಿರತ್ನಮ್ಮ, ಕಾರ್ಮಿಕ ಘಟಕ ದಸ್ತಗಿರಿ, ಯುವ ಮುಖಂಡ ಮಾದನಹಟ್ಟಿ ಪ್ರಸನ್ನ ಯಾದವ್, ಮಹೇಶ್ ಯಾದವ್ , ಕಾರ್ಮಿಕ ಘಟಕದ ಅಧ್ಯಕ್ಷ ಅಜಾದ್ ಭಾ?ಾ, ಸೇರಿದಂತೆ ಹಲವಾರು ಕಾರ್ಯಕರ್ತರು ಹಾಜರಿದ್ದರು.

# ತಪ್ಪದೇ ಎಲ್ಲರೂ ಕಂದಾಯ ಕಟ್ಟಿ ಶಾಸಕ ಕೆ.ವೈ.ನಂಜೇಗೌಡ ಮನವಿ



**ಮಾಲೂರು:** ಕರ್ನಾಟಕ ರಾಜ್ಯದಲ್ಲಿನ ಎಲ್ಲಾ ಜಿಲ್ಲೆ ತಾಲ್ಲೂಕಿನಲ್ಲಿರುವ ಗ್ರಾಮ ಪಂಚಾಯ್ತಿಗಳಲ್ಲಿ ಕಂದಾಯ ವಸೂಲಾತಿ ಅಂದೋಲನ ನಡೆಯುತ್ತಿದ್ದು ಅದಕ್ಕೆ ಪೂರಕವಾಗಿ ಮಾಲೂರು ತಾಲ್ಲೂಕಿನ ಟೇಕಲ್‌ನ ನೂಟುವೆ ಗ್ರಾ.ಪಂ. ವ್ಯಾಪ್ತಿ ಕೊಮ್ಮನಹಳ್ಳಿ ಗ್ರಾಮದ ನಿವಾಸಿ ಹಾಗೂ ಶಾಸಕ ಕೆ.ವೈ.ನಂಜೇಗೌಡರು ತಮ್ಮ ಮನೆಯ ಕಂದಾಯವನ್ನು ಕಟ್ಟಿ ನಂತರ ರಸೀದಿ ಪಡೆದು ಜನರಿಗೆ ಮಾದರಿಯಾಗಿದ್ದಾರೆ.

ಈ ಸಂದರ್ಭದಲ್ಲಿ ಅವರು ಮಾತನಾಡಿದ ಅವರು, ಪ್ರತಿಯೊಬ್ಬರು ಗ್ರಾಮ ಪಂಚಾಯ್ತಿಯವರು ತಮ್ಮ ಮನೆ ಬಳಿ ಬಂದಾಗ ಗೌರವಯುತವಾಗಿ ಮಾತನಾಡಿ, ನಿಮ್ಮ ಮನೆಯ ಕಂದಾಯ ಕಟ್ಟಿ ಎಂದು ಮನವಿ ಮಾಡಿದರು.

ತಾವುಗಳು ಕಂದಾಯವನ್ನು ಪಂಚಾಯ್ತಿಗೆ ಕಟ್ಟುವುದರಿಂದ ಗ್ರಾಮಗಳ ಅಭಿವೃದ್ಧಿಗೆ ಹೆಚ್ಚು ಸಹಕಾರಿಯಾಗುತ್ತದೆ. ತಾವೇ ನೇರವಾಗಿ ಗ್ರಾ.ಪಂ.ಗೆ ಹೋಗಿ ನಮ್ಮ ಕೆಲಸ ಕಾರ್ಯ ಮಾಡಿಸಿಕೊಳ್ಳಬಹುದು.

ಇದರಿಂದ ಪಂಚಾಯ್ತಿಗೆ ಅನುಕೂಲವಾಗುತ್ತದೆ. ಗ್ರಾಮದ ಚರಂಡಿ ವ್ಯವಸ್ಥೆ, ಸ್ವಚ್ಛತೆ ಕುಡಿಯುವ ನೀರಿನ ವ್ಯವಸ್ಥೆ ಇತರೆ ಕೆಲಸಗಳನ್ನು ಮಾಡಿಸಲು ನಿಮ್ಮ ಕಂದಾಯದ ಹಣ ಬಳಸಲು ಸಹಕಾರಿಯಾಗುತ್ತದೆ ಎಂದರು.

ಪ್ರತಿಯೊಬ್ಬ ಇಂದೆ ನಿಮ್ಮ ಗ್ರಾ.ಪಂ.ಬೇಟಿ ನೀಡಿ ಕಂದಾಯದ ಹಣವನ್ನು ಕಟ್ಟಿ ರಸೀದಿ ಪಡೆರಿಯಿರಿ ಎಂಧರು.

ಇದೇ ವೇಳೆ ಶಾಸಕರು ತಮ್ಮ ಕುಟುಂಬಗಳ ಎಲ್ಲಾ ಕಂದಾಯ ಕಟ್ಟಿ 17,800 ರೂಪಾಯಿಗೆ ಬಿಲ್‌ಕಲೆಕ್ಟರ್‌ರಾದ ಮಂಜುನಾಥರವರಿಂದ ರಸೀದಿ ಪಡೆದರು. ಈ ಸಂದರ್ಭದಲ್ಲಿ ನೂಟುವೆ ಗ್ರಾ.ಪಂ. ಅಭಿವೃದ್ಧಿ ಅಧಿಕಾರಿ ಗೇಮು ಚವ್ಹಾಣ್, ಕೃಷಿಕ ಸಮಾಜ ಅಧ್ಯಕ್ಷ ಹನುಮಂತಪ್ಪ, ಉಪಸ್ಥಿತರಿದ್ದರು.

# ಮತದಾರರ ಪಟ್ಟಿ ಪರಿಷ್ಕರಣಾ ಕಾರ್ಯ

**ಚಾಮರಾಜನಗರ:** ಜಿಲ್ಲಾ ಮತದಾರರ ಪಟ್ಟಿ ವೀಕ್ಷಕರು ಹಾಗೂ ಸಮಾಜ ಕಲ್ಯಾಣ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳಾಗಿರುವ ಮೇಜರ್ ಪಿ. ಮಣಿವಣ್ಣನ್ ಜಿಲ್ಲೆಗೆ ಭೇಟಿ ನೀಡಿ ಭಾವಚಿತ್ರವಿರುವ ಮತದಾರರ ಪಟ್ಟಿಯ ವಿಶೇಷ ಸಂಕ್ಷಿಪ್ತ ಪರಿಷ್ಕರಣಾ ಕಾರ್ಯಗಳ ಪರಿಶೀಲನೆ ನಡೆಸಿದರು.



ಕೊಳ್ಳೇಗಾಲ ತಾಲೂಕಿನ ಸತ್ತೇಗಾಲ ಗ್ರಾ.ಪಂ.ಕಚೇರಿ ಸಭಾಂಗಣದಲ್ಲಿ ಮತದಾರರ ಪಟ್ಟಿ ವಿಶೇಷ ಸಂಕ್ಷಿಪ್ತ ಪರಿಷ್ಕರಣೆ ಸಂಬಂಧ ಪರಿಶೀಲನೆ ನಡೆಸಿ ಸಭೆ ನಡೆಸಿದರು. ಮತದಾರರ ಪಟ್ಟಿ ವಿಶೇಷ ಸಂಕ್ಷಿಪ್ತ ಪರಿಷ್ಕರಣೆ ಕುರಿತಂತೆ ಹಕ್ಕು ಮತ್ತು ಆಕ್ಷೇಪಣೆಗಳ ಅವಧಿಯಲ್ಲಿ ಸ್ವೀಕೃತವಾಗಿರುವ ಅರ್ಜಿಗಳ ವಿಲೇವಾರಿ ಸಂಬಂಧ ಪರಿಶೀಲಿಸಿದರು.

ಜಿಲ್ಲೆಯ ಚಾಮರಾಜನಗರ, ಗುಂಡ್ಲುಪೇಟೆ, ಕೊಳ್ಳೇಗಾಲ, ಹನೂರು ವಿಧಾನಸಭಾ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ನಮೂನೆ 6, 7 ಮತ್ತು 8ರ ಅರ್ಜಿಗಳನ್ನು ಪರಿಶೀಲಿಸಿದರು. ಸಂಬಂಧಪಟ್ಟ ಆಯಾ ಕ್ಷೇತ್ರದ ಚುನಾವಣಾ ಅಧಿಕಾರಿಗಳು ಹಾಗೂ ಸಹಾಯಕ ಚುನಾವಣಾ ಅಧಿಕಾರಿಗಳಿಂದ ಮತದಾರರ ಪಟ್ಟಿ ಪರಿಷ್ಕರಣೆ ಕಾರ್ಯಗಳ ಸಂಬಂಧ ವಿವರ ಪಡೆದುಕೊಂಡರು.

ನಿಯಮಾನುಸಾರ ಪ್ರಕ್ರಿಯೆ ಪೂರ್ಣಗೊಳಿಸಿ ಅಂತಿಮ ಪಟ್ಟಿ ಪ್ರಕಟಿಸಲು ಅಗತ್ಯ ಸಿದ್ದತೆ ಮಾಡಿಕೊಳ್ಳ ಬೇಕೆಂದು ಮತದಾರರ ಪಟ್ಟಿ ವೀಕ್ಷಕರಾದ ಪಿ. ಮಣಿವಣ್ಣನ್ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು. ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್, ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ, ಉಪವಿಭಾಗಾಧಿಕಾರಿ ಬಿ.ಆರ್. ಮಹೇಶ್, ತಹಶೀಲ್ದಾರರಾದ ಬಸವರಾಜು, ಜಯಪ್ರಕಾಶ್, ಗುರುಪ್ರಸಾದ್, ಗಿರಿಜಾ, ರಮೇಶ್ ಬಾಬು, ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳಾದ ಉಮೇಶ್, ಶ್ರೀನಿವಾಸ್, ಷಣ್ಮುಗಂ, ಇತರೆ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

# ಕುಟುಂಬದ ವೈಯಕ್ತಿಕ ಸರ್ವೇಕ್ಷಣ

**ಮಾಲೂರು:** ಸಮಾಜದಲ್ಲಿರುವ ಅತಿ ದುರ್ಬಲ ಮತ್ತು ಅಸಹಾಯಕ ಸ್ಥಿತಿಯಲ್ಲಿರುವ ಕುಟುಂಬದ ವೈಯಕ್ತಿಕ ಸರ್ವೇಕ್ಷಣ ನಡೆಸಿ ಅವರಿಗೆ ಬೇಕಾಗುವ ಅತಿ ಅಗತ್ಯ ಸೌಲಭ್ಯಗಳನ್ನು ಒದಗಿಸಲಾಗುತ್ತದೆ ಎಂದು ತಾಲೂಕಿನ ಯೋಜನಾಧಿಕಾರಿ ಸತೀಶ್ ಸತೀಶ್. ಹೆಚ್. ತಿಳಿಸಿದರು

ತಾಲೂಕಿನ ಹಾರೋಹಳ್ಳಿ ಗ್ರಾಮದಲ್ಲಿ ಪುಟ್ಟಮ್ಮ ಎಂಬ ಬಡ ಮಹಿಳೆಗೆ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ .ಬಿ.ಸಿ ಟ್ರಸ್ಟ್ ವತಿಯಿಂದ ಶ್ರೀ ಕ್ಷೇತ್ರ ಧರ್ಮಸ್ಥಳ ಡಾ.ಹೇಮಾವತಿ .ವಿ. ಹೆಗ್ಗಡೆಯವರ ಮಾರ್ಗದರ್ಶನದಂತೆ ಕಿಟ್ ವಿತರಿಸಿ ಮಾತನಾಡಿದರು.

ಬಡ ಮಹಿಳೆ ಪುಟ್ಟಮ್ಮ ಅವರಿಗೆ ದಿನನಿತ್ಯ ಬಳಕೆ ಮಾಡಲು ಬೇಕಾಗಿರುವ ಹೊದಿಕೆ ಅಗತ್ಯ ಸಾಮಾಗ್ರಿಗಳಾದ ಕಿಟ್ ನ್ನು ಜಿಲ್ಲಾ ಜನಜಾಗೃತಿ ವೇದಿಕೆ ಸದಸ್ಯರಾದ ಪಿ.ಎನ್.ಪರಮೇಶ್ ಮತ್ತು ರಾಮಸ್ವಾಮಿರೆಡ್ಡಿ ವಿತರಿಸಿದರು.

ಈ ಸಂದರ್ಭದಲ್ಲಿ ಕೃಷಿ ಅಧಿಕಾರಿ ಮಧುರಾಜ್, ಮೇಲ್ವಿಚಾರಕರು ರಮೇಶ್ , ಸೇವಾ ಪ್ರತಿನಿಧಿ ವಿಜಯ ಕುಮಾರಿ ಭಗವಹಿಸಿದ್ದರು

# ಕ್ರಷರ್ ನಿಲ್ಲಿಸುವಂತೆ ಒತ್ತಾಯಿಸಿ ಕರವೇ ಪ್ರತಿಭಟನೆ

**ಕೊರಟಗೆರೆ:** ಕ್ರಷರ್ ಲಾರಿಗಳಿಂದ ಜಂಪೇನಹಳ್ಳಿಯಿಂದ ತೋವಿನಕೆರೆ ವರೆಗೆ ರಸ್ತೆಗಳು ಸಂಪೂರ್ಣ ಹಾಳಾಗಿದ್ದನ್ನ ವಿರೋಧಿಸಿ ಕರ್ನಾಟಕರಕ್ಷಣಾ ವೇದಿಕೆ (ಪ್ರವೀಣ್ ಶಟ್ಟಿ ಬಣ) ವತಿಯಿಂದ ಜಂಪೇನಹಳ್ಳಿ ಕೈಮರದಲ್ಲಿ ಸೋಮವಾರ ಲಾರಿತಡೆದು ಪ್ರತಿಭಟನೆ ಮಾಡಲಾಯಿತ್ತು. ತಾಲೂಕಿನ ಸಿ.ಎನ್.ದುರ್ಗ ಹೋಬಳಿಯ ಜಂಪೇನಹಳ್ಳಿ ಕೈಮರದಲ್ಲಿಕರ್ನಾಟಕರಕ್ಷಣಾ ವೇದಿಕೆ (ಪ್ರವೀಣ್ ಶಟ್ಟಿ ಬಣ)ದ ಸದಸ್ಯರಿಂದ ಪ್ರತಿಭಟನೆಯನ್ನ ಹಮ್ಮೀಕೊಳ್ಳಲಾಗಿತ್ತು, ಕೈಮರದಿಂದತೋವಿನಕೆರೆಯವರೆಗೂಕ್ರಷರ್ ಲಾರಿಗಳ ಹಾವಳಿಯಿಂದ ರಸ್ತೆ ಸಂಪೂರ್ಣ ಹಾಳಾಗಿದ್ದು, ಎಷ್ಟು ಬಾರಿ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲಎಂದು ಸಂಘದ ಪದಾಧಿಕಾರಿಗಳು ಆಕ್ರೋಶ ವ್ಯಕ್ತಪಡಿಸಿದರು.

ಇದೆ ಸಂದರ್ಭದಲ್ಲಿಕರ್ನಾಟಕರಕ್ಷಣಾ ವೇದಿಕೆ (ಪ್ರವೀಣ್ ಶಟ್ಟಿ ಬಣ)ದತಾಲೂಕುಅಧ್ಯಕ್ಷ ಹರೀಶ್ ಮಾತನಾಡಿಸಿ.ಎನ್.ದುರ್ಗಾ ಹೋಬಳಿಯಲ್ಲಿ ಸುಮಾರು 6ಕ್ಕೂ ಹೆಚ್ಚು ಕಲ್ಲುಗಣಿಗಾರಿಕೆ ಮಾಡಲಾಗುತ್ತಿದ್ದು, ಗಣಿಗಾರಿಕೆಯಿಂದಅಕ್ಕಪಕ್ಕದ ಗ್ರಾಮಗಳಲ್ಲಿರುವ ಮಕ್ಕಳು ವೃದ್ದರಿಗೆ ಕಾಯಿಲೆಗಳು ಕಾಣಿಸಿಕೊಂಡು ಆಸ್ಪತ್ರೆಗೆದಾಖಲಾಗಿದ್ದಾರೆ. ಕಲ್ಲುತುಂಬಿಕೊಂಡು ಹೋಗುವ ಲಾರಿಗಳು ರಸ್ತೆಯಲ್ಲಿ ಸಂಚಾರ ಮಾಡುವ ಪಾದಚಾರಿಗಳ ಮೇಲೆ ಬರುವಂತೆ ಹೋಗುತ್ತಾರೆ.ಪ್ರತಿನಿತ್ಯ ನೂರಾರು ಲಾರಿಗಳು ಸಂಚಾರ ಮಾಡುತ್ತಿರುವುದರಿಂದ ರಸ್ತೆಗಳು ಗುಂಡಿ ಬಿದ್ದು, ರಸ್ತೆ ಸಂಪೂರ್ಣ ಹಾಳಾಗಿದೆ ಎಂದುಕ್ರಷರ್ ಮಾಲೀಕರ ವಿರುದ್ದಆಕ್ರೋಶ ವ್ಯಕ್ತಪಡಿಸಿದರು.

ಸಂಘದಉಪಾಧ್ಯಕ್ಷ ಶ್ರೀನಿವಾಸ್ ಮಾತನಾಡಿಕೊರಟಗೆರೆ 'ತಾಲೂಕಿನಲ್ಲಿಅತಿಹೆಚ್ಚುಕ್ರಷರ್ ಪ್ರಾರಂಭವಾಗಿವೆ. ಕ್ರಷರ್ ಹಾವಳಿಯಿಂದಾಗಿ ವಿಪರೀತ ದೂಳು ಹಾಗೂ ಶಬ್ದ ಮಾಲಿನ್ಯ ಹೆಚ್ಚಾಗಿ ಕಣ್ಣು, ಹಾಗೂ ಕಿವಿಗಳು ಕೇಳಿಸದಂತೆ ಆಗಿವೆ. ಜಲ್ಲಿ, ಕಲ್ಲುತುಂಬಿಕೊಂಡು ಹೋಗುವ ಲಾರಿಗಳು ರಸ್ತೆ ಬಾರಕ್ಕಿಂತ ಹೆಚ್ಚು ಲೋಡ್ ಹಾಕಿಕೊಂಡು ಮೇಲೆ ವದಿಕೆನೂ ಹಾಕದೇ ಸಂಚಾರ ಮಾಡುತ್ತಾರೆ, ಇದರಿಂದ ರಸ್ತೆಗಳು ಹಾಳಾಗಿ ಗುಂಡಿಗಳು ಬಿದ್ದಿವೆ. ಇಲ್ಲಿಗೆ ವಾಯು ಮಾಲಿನ್ಯ ಅಧಿಕಾರಿಗಳು, ಆರ್‌ಟಿಒ, ಗಣಿ ಮತ್ತು ಭೂ ವಿಜ್ಞಾನಇಲಾಖೆಯ ಅಧಿಕಾರಿಗಳು ಯಾರುಕೂಡ ಬರುವುದಿಲ್ಲ, ಅದರಿಂದಇಲ್ಲಿ ಸಾರ್ವಜನಿಕರ ಮೇಲೆ ದಬ್ಬಾಳಿಕೆ ಮಾಡುತ್ತಿದ್ದಾರೆಎಂದುದೂರಿದರು.

ಉಪಾಧ್ಯಕ್ಷ ನರಸಿಂಹರಾಜು ಮಾತನಾಡಿಕೈಮರದಿಂದತೆ ೞವಿನಕೆರೆ ವರೆಗೂರಸ್ತೆಗುಂಡಿ ಬಿದ್ದಿದ್ದು ಮಳೆ ಬಂದರೆ ಗುಂಡಿಗಳು ಕಾಣಿಸುವುದಿಲ್ಲ ಇದರಿಂದ ಅನೇಕ ಬಾರಿ ಅಪಘಾತಗಳು ಸಂಭವಿಸಿ ಜನರುಆಸ್ಪತ್ರೆಗೆ ಸೇರಿದ್ದಾರೆ.




ತಹಸೀಲ್ದಾರ್ ಅವರಿಗೆ ಅನೇಕ ಬಾರಿ ಮನವಿಯನ್ನ ಸಲ್ಲಿಸಿದರೂ ಏನು ಪ್ರಯೋಜವಾಗಿಲ್ಲ. ಕ್ರಷರ್‌ಗಳನ್ನ ಮುಚ್ಚಬೇಕು ಇಲ್ಲಾಂದರೆ ಮುಂದಿನ ದಿನಗಳಲ್ಲಿ ಉಗ್ರ ಹೋರಾಟ ಮಾಡಲಾಗುವುದುಎಂದುಎಚ್ಚರಿಕೆ ನೀಡಿದರು.

ಪ್ರತಿಭಟನೆಯಲ್ಲಿಕರ್ನಾಟಕರಕ್ಷಣಾ ವೇದಿಕೆ (ಪ್ರವೀಣ್ ಶಟ್ಟಿ ಬಣ)ದಪದಾಧಿಕಾರಿಗಳಾದ ರವಿಕುಮಾರ್, ಶ್ರೀನಿವಾಸ್, ಕೃಷ್ಣಮೂರ್ತಿ, ನರಸಿಂಹರಾಜು, ನಟರಾಜು, ವೀರಕ್ಯಾತಯ್ಯ, ರಮೇಶ್, ಪುಟ್ಟರಾಜು, ಮಲ್ಲೇಶ್, ಕಿರಣ್, ಲೋಕೇಶ್, ಪುಟ್ಟಶಾಮಯ್ಯ, ನರಸಿಂಹಮೂರ್ತಿ, ಸುರೇಶ್, ಗಂಗರಾಜು, ನಾಗೇಶ್, ಸೇರಿದಂತೆಇತರರು ಇದ್ದರು.

# ಭಾರತೀಯರು ಉತ್ಸವ ಪ್ರಿಯರು




**ಕುಕನೂರು:** ಭಾರತೀಯರು ಮೂಲತಃ ಉತ್ಸವ ಪ್ರಿಯರು. ಉತ್ಸವ ಇದ್ದಲ್ಲಿ ಸಂಸ್ಕೃತಿ ಇರುತ್ತದೆ. ಸಾಂಕೇತಿಕ ಉದ್ದೇಶಗಳೂ, ಮೌಲ್ಯಗಳೂ, ಸಂದೇಶಗಳೂ ಇರುತ್ತವೆ ಎಂದು ಹಿರಿಯ ಸಾಹಿತಿ ಡಾ. ಕೆ. ಬಿ ಬ್ಯಾಳಿ ಹೇಳಿದರು.

ಇಲ್ಲಿನ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ಮಾನಸ ಸಮಗ್ರ ಗ್ರಾಮೀಣ ಅಭಿವೃದ್ಧಿ ಸಂಸ್ಥೆ ಏರ್ಪಡಿಸಲಾಗಿದ್ದ ಕುಂತಳೋತ್ಸವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಅಪರಿಮಿತ ಸಂಪತ್ತು ಇರುತ್ತದೆಯೋ ಅಲ್ಲಿ ಉತ್ಸವ ನಡೆಯುತ್ತದೆ. ಪರ್ವ ಎಂದರೆ ಹಬ್ಬ. ಸಂತೋಷ ಕೊಡುವ ದಿನ. ಹಬ್ಬ ಆಚರಿಸುವ ಇನ್ನೊಂದು ಅಂಗ ವ್ರತ. ನಿಯಮದಲ್ಲಿದ್ದುಕೊಂಡು ಕಾರ್ಯಾನುಷ್ಠಾನ ಮಾಡುವ ವ್ರತ ದೇಹ, ಮನಸ್ಸು, ಇಂದ್ರಿಯ, ಬುದ್ಧಿಗಳನ್ನು ಸಂಸ್ಕಾರಗೊಳಿಸುತ್ತದೆ. ಈ ಎಲ್ಲ ತತ್ವದರ್ಶಗಳನ್ನು ತಿಳಿದುಕೊಂಡು ಹಬ್ಬದಾಚರಣೆ ಮಾಡಬೇಕು ಎಂದರು.

ಪಟ್ಟಣ ಪಂಚಾಯಿತಿ ಮುಖ್ಯ ಅಧಿಕಾರಿ ರವಿ ಬಳೂಟಗಿ ಮಾತನಾಡಿ, ಐತಿಹಾಸಿಕ ಪ್ರಸಿದ್ಧವಾದ ಕುಂತಳಾಪುರದ ಕುಂತೋತ್ಸವ ಕಾರ್ಯಕ್ರಮ ಮಾಡುತ್ತಿರುವುದು ಸಮಯೋಚಿತವಾಗಿದೆ. ಸಂಘಗಳು ಸ್ವಯಂ ಸ್ಪೂರ್ತಿಯಿಂದ ಇಂತಹ ಸಂಸ್ಕೃತಿಕ ಕಾರ್ಯಕ್ರಮ ಹಮ್ಮಿಕೊಳ್ಳುತ್ತಿರುವುದು ಶ್ಲಾಘನೀಯ ಕಾರ್ಯ ಎಂದರು.

ಪ್ರಾಚಾರ್ಯ ಈಶಪ್ಪ ಮಳಗಿ ಹಾಗೂ ವೈದ್ಯ ಜಂಬೂನಾಥ್ ಅಂಗಡಿ ಮಾತನಾಡಿದರು.

ಅಮೋಘಸಿದ್ದೇಶ್ವರ ಭಜನಾ ಸಂಘದ ವತಿಯಿಂದ ಬಜನಾ ಕಾರ್ಯಕ್ರಮ ನೆರವೇರಿತು. ಸಂಗೀತ ಶಿಕ್ಷಕ ಮುರಾರಿ ಭಜಂತ್ರಿ ಸಂಗಡಗರಿಂದ ಸುಗಮ ಸಂಗೀತ ಕಾರ್ಯಕ್ರಮ ನೆರವೇರಿತು. ಯುವ ಗಾಯಕ ಬರಮಪ್ಪ ಸಾಬಳ್ಳಿ ಅವರು ಕುಂತಳೋತ್ಸವ ಬಗ್ಗೆ ಸ್ವರಚಿತ ಗಾಯನ ಹಾಡಿದರು. ಸಮೂಹ ನೃತ್ಯ ಪ್ರದರ್ಶನಗೊಂಡವು. ಗಾಯಕ ಮುರಾರಿ ಭಜಂತ್ರಿ, ಉಪನ್ಯಾಸಕ ಮಾರುತಿ ಹೆಚ್, ಸಂಸ್ಥೆಯ ಅಧ್ಯಕ್ಷ ಮಂಜುನಾಥ್ ಎಸ್. ಅಂಗಡಿ, ಬರಮಪ್ಪ ನೋಟಗಾರ್, ಬರಮಪ್ಪ ಸಾಬಳ್ಳಿ, ಮಹಾಂತೇಶ್ ಹಂಡಿ, ಜೀವನ್ ಸಾಬ್, ಅಶೋಕ್ ಚನ್ನಪ್ಪನಹಳ್ಳಿ, ಮುತ್ತುರಾಜ್ ದೇವರಮುನಿ ಇದ್ದರು.

# ದೈಹಿಕ ಮತ್ತು ಮಾನಸಿಕ ಆರೋಗ್ಯ ಸುಧಾರಣೆ




**ಕೆಆರ್‌ಪುರ:** ಯುವಕರು ಕ್ರೀಡೆಯಲ್ಲಿ ತೊಡಗಿಸಿಕೊಳ್ಳುವುದರಿಂದ ದೈಹಿಕ ಮತ್ತು ಮಾನಸಿಕ ಆರೋಗ್ಯ ಸುಧಾರಣೆಯಾಗಲಿದೆ ಎಂದು ಮಾಜಿ ಸಚಿವ ಹೆಚ್.ನಾಗೇಶ್ ತಿಳಿಸಿದರು.

ಮಹದೇವಪುರ ಕ್ಷೇತ್ರದ ಗುಂಜೂರಿನ ಅಟಲ್ ಬಿಹಾರಿ ವಾಜಪೇಯಿ ಕ್ರೀಡಾಂಗಣದಲ್ಲಿ ಆಯೋಜಿಸಿದ ಮಹದೇವಪುರ ಪ್ರಿಮಿಯರ್ ಲೀಗ್ ಸೀಸನ್–2 ಕ್ರಿಕೆಟ್ ಪಂದ್ಯಾವಳಿಯಲ್ಲಿ ವಿಜೇತರಿಗೆ ಬಹುಮಾನ ವಿತರಿಸಿ ಮಾತನಾಡಿದರು.

ಇಂದಿನ ಯುವ ಸಮುದಾಯ ಉತ್ತಮ ಹಾಸ್ಯಗಳನ್ನು ರೂಢಿಸಿಕೊಂಡು, ಕ್ರೀಡೆಯಲ್ಲಿ ಆಸಕ್ತಿ ಹೊಂದುವುದರಿಂದ ಉತ್ತಮ ಆರೋಗ್ಯ ಸಿಗಲಿದೆ ಎಂದರು.

ಗುಂಜೂರು ಫ್ರೆಂಡ್ಸ್ ಮತ್ತು ಟೀಮ್ ಇಂಡಿಯಾ ಸಹಯೋಗ ಹಾಗೂ ಜಿ.ಟಿ.ನಾಗೇಶ್, ಬಿ.ವಿ.ಸುನೀಲ್ ಕುಮಾರ್, ಬಾಬು ನೇತೃತ್ವದಲ್ಲಿ ಆಯೋಜನೆಗೊಂಡಿದ್ದ ನಾಲ್ಕು ದಿನಗಳ ಹೊನಲು ಬೆಳಕಿನ ಕ್ರೀಡಾಕೂಟದಲ್ಲಿ ಪೊಲೀಸರ 8 ತಂಡಗಳು ಹಾಗೂ ಮಹದೇವಪುರದ 10 ತಂಡಗಳು ಭಾಗವಹಿಸಿ ಪ್ರಶಸ್ತಿಗಾಗಿ ಸೆಣಸಾಟ ನಡೆಸಿದವು.

ಪ್ರಿಮಿಯರ್ ಲೀಗ್‌ನಲ್ಲಿ ವಿಜೇತರಾದ ಉಜ್ವಲ್ ಟೀಮ್ ಪ್ರಥಮ, ದ್ವಿತೀಯ ಸ್ಥಾನವನ್ನು ಬಾಬು ಇಲವೆನ್, ತೃತೀಯ ಸ್ಥಾನ ಸುನೀಲ್ ಆಚಿವರ್ಸ್ ಪಡೆದರು. ಇನ್ನೂ ಪೊಲೀಸ್ ಠಾಣೆಗಳ ವಿಭಾಗದಲ್ಲಿ ಜೀವನ್ ಭೀಮಾ ನಗರ ಸಂಚಾರಿ ಠಾಣೆ ಪ್ರಥಮ, ವರ್ತೂರು ಪೊಲೀಸ್ ದ್ವಿತೀಯ ಸ್ಥಾನ ಪಡೆದುಕೊಂಡಿತು. ಈ ಸಂದರ್ಭದಲ್ಲಿ ವಿಜೇತ ತಂಡಗಳಿಗೆ ಸ್ವಾಬಿಮಾನಿ ಬಳಗದ ಮುಖಂಡ ಕುಪ್ಪಿ ಮಂಜುನಾಥ್, ಮುಖಂಡರಾದ ಜಗದೀಶ್ ರೆಡ್ಡಿ, ಬಸವರಾಜ್ ಪ್ರಶಸ್ತಿಗಳನ್ನು ಪ್ರಧಾನ ಮಾಡಿದರು.

# ವಿಶ್ವ ವಿಶೇಷ ಚೇತನರ ದಿನಾಚರಣೆ, ಪರಿಸರ ನಿರ್ಮಾಣ ಕಾರ್ಯಕ್ರಮ

**ಮುಳಬಾಗಿಲು:** ಮುಳಬಾಗಿಲು ನಗರದ ನೇತಾಜಿ ಕ್ರೀಡಾಂಗಣ ಬಳಿ ಇರುವ ಗುರುಭವನದಲ್ಲಿ ನಡೆದ ವಿಶ್ವವಿಶೇಷ ಚೇತನರು ಹಾಗೂ ಪರಿಸರ ನಿರ್ಮಾಣ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಕ್ಷೇತ್ರ ಸಮನ್ವಯ ಅಧಿಕಾರಿಗಳಾದ ಪಿ. ಸೋಮೇಶ್ ವಿಕಲಚೇತನರು ಮತ್ತು ಪೋಷಕರು ಸರ್ಕಾರದ ಸೌಲಭ್ಯಗಳನ್ನು ಸದ್ಬಳಕೆ ಮಾಡಿಕೊಳ್ಳಲು ಕರೆ ನೀಡಿದರು

ಶಾಲಾ ಶಿಕ್ಷಣ ಇಲಾಖೆ ವತಿಯಿಂದ ಸರ್ಕಾರಿ ಬಾಲಕಿಯರ ಪ್ರೌಢಶಾಲೆ ಗುರುಭವನ ಮುಳಬಾಗಿಲಿನಲ್ಲಿ ನಡೆದ ಬ್ಲಾಕ್ ಹಂತದ ವಿಶ್ವ ವಿಶೇಷ ಚೇತನರ ದಿನಾಚರಣೆ ಹಾಗೂ ಸರ್ಕಾರದಿಂದ ಅನೇಕ ಸೌಲಭ್ಯಗಳನ್ನು ವಿಶೇಷ ಚೇತನರಿಗೆ ಒದಗಿಸುತ್ತಿದ್ದು ಅವುಗಳನ್ನು ವಿಶೇಷ ಚೇತನರು ಹಾಗೂ ಅವರ ಪೋಷಕರು ಸದ್ಬಳಕೆ ಮಾಡಿಕೊಂಡು ಸಮಾಜದಲ್ಲಿ ಸಾಮಾನ್ಯರಂತೆ ಬದುಕುವಂತೆ ಕರೆ ನೀಡಿದರು

ಸರ್ಕಾರಿ ನೌಕರರ ಸಂಘದ ಖಜಾಂಚಿ ಹಾಗೂ ತಾಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಪ್ರಧಾನ ಕಾರ್ಯದರ್ಶಿಗಳಾದ ಶ್ರೀಯುತ ಸುಬ್ರಮಣ್ಯ ಎಮ್ ರವರು ಕಾರ್ಯಕ್ರಮದಲ್ಲಿ ಭಾಗವಹಿಸಿದಂತಹ ವಿಶೇಷ ಚೇತನ ಮಕ್ಕಳಿಗೆ ಮತ್ತು ಪೋಷಕರಿಗೆ ಕ್ರೀಡಾಕೂಟಗಳನ್ನು ನಡೆಸಿ ಬಹುಮಾನಗಳನ್ನು ವಿತರಿಸುತ್ತಿರುವುದು ಸಂತೋಷ ತಂದಿದೆ ಇಂತಹ ಮಕ್ಕಳನ್ನು ಸಮಾಜದ ಮುಖ್ಯ ವಾಹಿನಿಗೆ ಬರಲು



ಸಮಾಜದ ಸಹಕಾರ ಅಗತ್ಯವಿದೆ ಎಂದರು

ಕಾರ್ಯಕ್ರಮದಲ್ಲಿ ಇಂದು ವಿಶೇಷವಾಗಿ ವಿಶೇಷ ಚೇತನ ಶಿಕ್ಷಕರಾದ ಶ್ರೀ ಹೈದರ್ ಸಾಬ್ ಸರ್ಕಾರಿ ಪದವಿ ಪೂರ್ವ ಕಾಲೇಜು, ತಾಯಲೂರು ಸಮಾಜ ವಿಜ್ಞಾನ ಶಿಕ್ಷಕರನ್ನು ಸನ್ಮಾನಿಸಿ ಗೌರವಿಸಲಾಯಿತು.

ತಾಲೂಕು ದೈಹಿಕ ಶಿಕ್ಷಣದ ಪರಿವೀಕ್ಷಕರಾದ ರಹೀಂ ಶರೀಫ್ ರವರು ಪ್ರಸ್ತಾವಿಕವಾಗಿ ಮಾತನಾಡಿ ನಮ್ಮ ಸರ್ಕಾರಿ ಶಾಲೆಗಳಲ್ಲಿ ವಿಶೇಷ ಚೇತನರನ್ನು ಸಾಮಾನ್ಯ ಮಕ್ಕಳೊಂದಿಗೆ ಸೇರಿಸಿಕೊಂಡು ಸಮನ್ವಯ ಶಿಕ್ಷಣವನ್ನು ಒದಗಿಸುತ್ತಿದ್ದು ಎಲ್ಲಾ ವಿಶೇಷ ಚೇತನರು ತಪ್ಪದೆ ಸಾಮಾನ್ಯ ಶಾಲೆಗಳಲ್ಲಿಯೇ ದಾಖಲಾಗಿ ಶಿಕ್ಷಣವನ್ನು ಪಡೆದು ಸಾಮಾನ್ಯ ಮಕ್ಕಳಂತೆಯೇ ಬಾಳಬೇಕೆಂದು ಕರೆ ನೀಡಿದರು.

ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾ ಉಪಾಧ್ಯಕ್ಷರಾದ ಶ್ರೀಯುತ ಓಬಳ ರೆಡ್ಡಿ ಮಾತನಾಡಿ ವಿಶೇಷ ಚೇತನರಿಗೆ ಅನುಕಂಪ ತೋರಿಸದೆ ಅವಕಾಶ ಒದಗಿಸಿದಾಗ ಉತ್ತಮ ಸಾಧನೆ ಮಾಡಬಲ್ಲರು ಎಂದು ಅನೇಕ ಸಾಧಕರ ಬಗ್ಗೆ ಉದಾಹರಣೆಗಳೊಂದಿಗೆ ವಿವರಿಸಿದರು

ಕಾರ್ಯಕ್ರಮದಲ್ಲಿ ವಿಶೇಷ ಚೇತನ ಮಕ್ಕಳಿಗೆ ಹಾಗೂ ಪೋಷಕರಿಗೆ ಕ್ರೀಡಾಕೂಟ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳನ್ನು ಏರ್ಪಡಿಸಿ ಎಲ್ಲಾ ಮಕ್ಕಳಿಗೂ ಬಹುಮಾನ ಹಾಗೂ ಪ್ರಶಸ್ತಿ ಪತ್ರಗಳನ್ನು ವಿತರಿಸಲಾಯಿತು. ಎಲ್ಲರಿಗೂ ಉಪಹಾರದ ವ್ಯವಸ್ಥೆಯನ್ನು ಮಾಡಲಾಗಿತ್ತು

ಕಾರ್ಯಕ್ರಮದಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಪದಾಧಿಕಾರಿಗಳಾದ ಜೆ ಎಸ್ ಮಂಜುನಾಥ್, ಸಹ ಕಾರ್ಯದರ್ಶಿಯಾದ ಹೆಚ್ ಮಂಜುನಾಥ್, ಆವಣಿ ಕೃ?ಮೂರ್ತಿ, ನಿಕಟಪೂರ್ವ ಬಿಐಇಆರ್‌ಟಿ ಹಾಗೂ ನಿವೃತ್ತ ಮುಖ್ಯ ಶಿಕ್ಷಕ ಎಂ ನಾರಾಯಣಸ್ವಾಮಿ, ಪದವೀಧರ ಪ್ರಾಥಮಿಕ ಶಿಕ್ಷಕರ ಸಂಘದ ತಾಲೂಕು ಅಧ್ಯಕ್ಷರಾದ ಶ್ರೀ ಮಂಜುನಾಥ, ದೈಹಿಕ ಶಿಕ್ಷಣ ಶಿಕ್ಷಕಿ ರಾಜೇಶ್ವರಿ ಮತ್ತು ಉರ್ದು ಬಾಂಗ್ಲಾ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕಿ ಜಬೀನಾ ಬೇಗಮ್ ಭಾಗವಹಿಸಿದ್ದರು.

ಕಾರ್ಯಕ್ರಮವನ್ನು ಶಿವಕುಮಾರ್ ಮತ್ತು ಸುಜಾತಮ್ಮ ರವರು ಉತ್ತಮವಾಗಿ ಆಯೋಜಿಸಿದ್ದರು. ಶಾಲಾ ಸಿದ್ಧತಾ ಕೇಂದ್ರದ ಸಿಬ್ಬಂದಿಯವರಾದ ಫಿಜಿಯೋಥೆರಪಿಸ್ಟ್ ಭವಿ?ಯ ಹಾಗೂ ಸಹಾಯಕಿ ಗೌರಿ ರವರು ಉಪಸ್ಥಿತರಿದ್ದರು



# ದೇಶದ ಭವಿಷ್ಯ ರೂಪಿಸುವಲ್ಲಿ ಗುರುವಿನ ಪಾತ್ರ ಮಹತ್ತರವಾದದ್ದು

**ಚೇಳೂರು:** ಗುರುವಿನ ಮೂಲದ್ರವ್ಯ ಪ್ರೀತಿ, ಪ್ರೀತಿಯಿಲ್ಲದವನು ಗುರುವಾಗಲಾರ, ಗುರು ತನ್ನ ಶಿ?ಯರನ್ನು ಕತ್ತಲೆಯಿಂದ ಬೆಳಕಿನ ಕಡೆಗೆ ಕರೆದೊಯ್ಯುವ ಮಾರ್ಗದರ್ಶಕನಾಗಿದ್ದು, ವಿದ್ಯಾರ್ಥಿಗಳ ಬದುಕನ್ನು ಹಾಗೂ ದೇಶದ ಭವಿ?ಯವನ್ನು ರೂಪಿಸುವಲ್ಲಿ ಗುರುವಿನ ಪಾತ್ರ ಮಹತ್ತರವಾದದ್ದು ಎಂದು ನಿವೃತ್ತ ಶಿಕ್ಷಕ ಎಸ್. ಎಂ. ವೆಂಕಟಸ್ವಾಮಿ ಪ್ರತಿಪಾದಿಸಿದರು.

1995–96 ಪ್ರಾಥಮಿಕ 1997–98 ಪ್ರೌಢಶಾಲೆಯ ಹಳೇ ವಿದ್ಯಾರ್ಥಿಗಳಿಂದ ಚೇಳೂರು ಗಾಯತ್ರಿ ಕನ್ವೆನಂ?ನ್ ಹಾಲ್‌ನಲ್ಲಿ ಏರ್ಪಡಿಸಲಾಗಿದ್ದ ಗುರುವಂದನಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡುತ್ತಾ, ಒಂದು ದೇಶ' ಸುಸಂಸ್ಕೃತವಾಗಿ ನಿರ್ಮಿಸಿ, ಅಭಿವೃದ್ಧಿ ಪಥದಲ್ಲಿ ಸಾಗಬೇಕಾದರೆ ಅಥವಾ ಒಂದು ದೇಶ ಅನಾಗರೀಕವಾಗಿ ಸಾಗುತ್ತಾ ನಾಶವಾಗಬೇಕಾದರೆ ಗುರುವೇ ಕಾರಣವಾಗುತ್ತಾನೆ. ದೇಶದಲ್ಲಿನ ವಿದ್ಯಾರ್ಥಿಗಳಿಗೆ ಒಳ್ಳೆಯ ನಡುವಳಿಕೆಗಳನ್ನು ಒಳ್ಳೆಯ ವಿದ್ಯೆಯನ್ನು ಗುರು ಬೋದಿಸಿದರೆ ದೇಶ



ತಾನೇ ತಾನಾಗಿ ಸರ್ವತೋಮುಖವಾಗಿ ಅಭಿವೃದ್ಧಿ ಪಥದಲ್ಲಿ ಸಾಗುತ್ತದೆ. ಅದೇ ರೀತಿಯಲ್ಲಿ ಒಂದು ದೇಶ ಅನಾಗರೀಕವಾಗಬೇಕಾದರೆ ಗುರುವೇ ಕಾರಣವಾಗುತ್ತಾನೆ. ಆದ್ದರಿಂದ ಇಡೀ ಜಗತ್ತೇ ಗುರುವಿನ ಮಾರ್ಗದರ್ಶನದಲ್ಲಿ ನಡೆಯುತ್ತಿದೆ ಎಂದರು.

ಒಬ್ಬ ಶಿಲ್ಪಿ ಬಂಡೆಯನ್ನು ಕಡೆದು ಸುಂದರವಾದ ವಿಗ್ರಹವನ್ನು ಮಾಡುವ ರೀತಿಯಲ್ಲಿ, ಮುಗ್ಧವಾದ ಮಕ್ಕಳಿಗೆ ಅಪಾರವಾದ ಜ್ಞಾನವನ್ನು ತುಂಬಿ ಮೇದಾವಿಗಳನ್ನಾಗಿ ತಯಾರು ಮಾಡುವಲ್ಲಿ ಗುರುವಿನ ಪಾತ್ರ ಅಪಾರವಾದದ್ದು. ದೇಶದಲ್ಲಿ ವಿಜ್ಞಾನಿಗಳನ್ನು ಇಂಜಿನಿಯರ್‌ಗಳನ್ನು ವೈದ್ಯರನ್ನು, ಬುದ್ದಿಜೀವಿಗಳನ್ನು ತಯಾರು ಮಾಡುವಲ್ಲಿ ಮುಖ್ಯ ಪಾತ್ರ ವಹಿಸಿ, ಬಲಿ? ದೇಶವನ್ನಾಗಿ ಮಾಡಲು ಗುರುವಿನ ಪಾತ್ರ ಮಹತ್ತರವಾದದ್ದು ಎಂದರು.

ಯಾವುದೇ ಅಪೇಕ್ಷೆ ಇಲ್ಲದೆ ಶಿ?ರ ಭವಿ? ರೂಪಿಸುತ್ತಾರೆ. ಜೀವನಕ್ಕೆ ಮಾರ್ಗ ದರ್ಶಕರಾಗುತ್ತಾರೆ. ಆದರೆ ಇಂದಿನ ಶಿಕ್ಷಣ ಪದ್ಧತಿ ಸಾಕ?ು ಬದಲಾಗಿದೆ. ಮಕ್ಕಳಿಗೆ ದಂಡಿಸದೆ, ಶಿಕ್ಷಿಸದೆ ಪಾಠ ಮಾಡಬೇಕು ಎಂದು ಪಾಲಕರೇ ತಾಕೀತು ಮಾಡುತ್ತಾರೆ. ಇದು ಬೇಸರದ ಸಂಗತಿ ಎಂದು ಅವರು ಹೇಳಿದರು. ವಿದ್ಯಾರ್ಥಿಗಳ ಕಲಿಕೆ ಶ್ರೇ? ಮಟ್ಟದಲ್ಲಿ ಇರಬೇಕು ಎಂಬುದಕ್ಕಾಗಿ ಗುರುಗಳು ದಂಡಿಸುತ್ತಾರೆ. ಬಾಲ್ಯದಲ್ಲಿ ತಿದ್ದದೇ, ತಪ್ಪಿಗೆ ಶಿಕ್ಷೆ ನೀಡದೇ ಕಲಿಸುವ ಶಿಕ್ಷಣವು ನಿಜವಾದ ಶಿಕ್ಷಣವೇ ಅಲ್ಲ. ವಿದ್ಯಾರ್ಥಿಗಳ ಬದುಕು ಹಸನಾಗಲಿ ಎಂದು ಮಾತ್ರ ಶಿಕ್ಷಕರು ಬಯಸುತ್ತಾರೆ. ಈ ನಿಟ್ಟಿನಲ್ಲಿ ಇಂದಿನ ಶಿಕ್ಷಕ– ಪಾಲಕರ ಸಂಬಂಧ ಉನ್ನತೀಕರಣಗೊಳ್ಳಬೇಕು ಎಂದರು. ಪ್ರತಿಯೊಬ್ಬರೂ ಗುರು ಋಣ ಮತ್ತು ಪಿತೃಋಣಗಳನ್ನು ಸಾಕ?ು ತೀರಿಸುವ ಕಾರ್ಯ ಮಾಡಬೇಕು. ಇದರಿಂದ ಉತ್ತರೋತ್ತರ ಸಾರ್ಥಕತೆಯನ್ನು ಸಂಭ್ರಮಿಸಬಹುದು ಎಂದು ಹೇಳಿದರು.

ಈ ಸಂದರ್ಭದಲ್ಲಿ ಶಿಕ್ಷಕರಾದ.ಟಿ.ವಿ.ಲಕ್ಷೀನಾರಾಯಣ.ಸಿ .ನಂಜುಂಡಪ್ಪ.ಮಹಮದ್ ಗೌಸ್.ರಾಧಮಣಿ, ಎ.ಎನ್. ಆದಿನಾರಾಯಣಪ್ಪ ವೆಂಕಟರವಣಪ್ಪ, ಮದ್ದಿರೆಡ್ಡಿ, ವೆಂಕಟರವಣಪ್ಪ, ಎಚ್.ಡಿ.ವೆಂಕಟೇಶ್. ಹುಚ್ಚಾರೆಡ್ಡಿ, ಅರ್.ವಿ ವೆಂಕಟರವಣ, ಮುಖ್ಯ ಅತಿಥಿಗಳಾಗಿ ಚೇಳೂರು ಪ್ರೌಢಶಾಲಾ ಮುಖ್ಯ ಶಿಕ್ಷಕರಾದ ಜಿಲಾನ್ ಬಾ?, ಶಿಕ್ಷಕರಾದ ಪಿ.ಜಿ.ವೆಂಕಟರಾಮರೆಡ್ಡಿ, ವಿ.ಸತ್ಯನಾರಾಯಣ ಹಾಗೂ 2017–18 ನೇಸಾಲಿನ ವಿದ್ಯಾರ್ಥಿಗಳು ಹಾಜರಿದ್ದರು

# ಯುನೆಸ್ಕೊ ಪಟ್ಟಿಗೆ ಮಹದೇವ ದೇವಾಲಯ ಸೇರ್ಪಡೆಗೆ ಒತ್ತಾಯ

**ಕುಕನೂರು:** ಕೊಪ್ಪಳ ಜಿಲ್ಲೆಯ ಕುಕನೂರು ತಾಲೂಕಿನ ಇಟಗಿಯ ಇತಿಹಾಸ ಪ್ರಸಿದ್ದ ದೇವಾಲಯಗಳ ಚಕ್ರವರ್ತಿ ಎಂದು ಹೆಸರಾದ ಮಹೇಶ್ವರ ದೇವಾಲಯವನ್ನು ಜಾಗತಿಕ ಮಟ್ಟದ ಪ್ರವಾಸೋದ್ಯಮ ಯುನೆಸ್ಕೊ ಪಟ್ಟಿಗೆ ಸೇರಿಸಲು ಒತ್ತಾಯ ಕೇಳಿಬಂದಿದ್ದು ಈ ಕುರಿತಂತೆ ಸರ್ಕಾರ ಅಗತ್ಯ ಕ್ರಮ ಕೈಕೊಳ್ಳಲು ಒತ್ತಾಯಿಸಿ ಸಿ ಎಂ ಸಿದ್ದರಾಮಯ್ಯ ಅವರಿಗೆ ಮನವರಿಕೆ ಮಾಡಲು ಸ್ಥಳೀಯ ಮಟ್ಟದ ಹೋರಾಟಗಾರರ ನಿಯೋಗ ಸಿದ್ಧತೆ ನಡೆಸಿದೆ.

ಪ್ರಸ್ತುತ ದೇವಸ್ಥಾನ ವೀಕ್ಷಿಸಲು ಪ್ರತಿವ?ರ್ ಲಕ್ಷಾಂತರ ಪ್ರವಾಸಿಗರು ಇಲ್ಲಿಗೆ ಬರುತ್ತಾರೆ. 1112 ರಲ್ಲಿ ಕಲ್ಯಾಣ ಚಾಲುಕ್ಯರ ವಿಕ್ರಮಾದಿತ್ಯ ರಾಜನ ಮಹದೇವ ದಂಡನಾಯಕ ಈ ದೇವಾಲಯದ ನಿರ್ಮಾಣ ಕರ್ತೃ. ಕಲ್ಯಾಣ ಚಾಲುಕ್ಯರ ವಾಸ್ತು ಶಿಲ್ಪದ ನಾಗರ ಶೈಲಿ, ದ್ರಾವಿಡ ಶೈಲಿಯ ಕೆತ್ತನೆಯ ನಕ್ಷತ್ರಕರಾದ ದೇವಸ್ಥಾನ ಇದಾಗಿದೆ. ಇಂತಹ ಕೆತ್ತನೆಯ ಪ್ರಪಂಚದ ಯಾವ ದೇವಾಲಯದಲ್ಲಿಯೂ



ಕಾಣ ಸಿಗುವುದಿಲ್ಲ. ಆದರೆ ಈ ದೇವಾಲಯಕ್ಕೆ ಇಲ್ಲಿಯವರಿಗೆ ಸಿಗಬೇಕಾದ ಪ್ರಾಮುಖ್ಯತೆ ಸಿಕ್ಕಿಲ್ಲ. ಮೂಲ ಸೌಕರ್ಯ, ಉತ್ತಮ ರಸ್ತೆ ನಿರ್ಮಾಣ ಸೇರಿದಂತೆ ಪ್ರವಾಸಿಗರಿಗೆ ಬೇಕಾದ ಸೌಲಭ್ಯ, ಸವಲತ್ತುಗಳನ್ನು ಸರ್ಕಾರ ಮಾಡಿಕೊಡಬೇಕು. ದೇವಸ್ಥಾನವನ್ನು ವಿಶ್ವ ಪರಂಪರೆ ಪಟ್ಟಿಯಲ್ಲಿ ಸೇರಲು ಕ್ರಮ ಕೈಗೊಳ್ಳಲು ಮುಂದಾಗಬೇಕೆಂದು ವಿವಿಧ ಸಂಘ, ಸಂಸ್ಥೆಗಳು ಒತ್ತಾಯಿಸಿವೆ.

ಈಗಾಗಲೇ ಸ್ಥಳೀಯ ಲೋಕಸಭೆ ಸದಸ್ಯ ರಾಜಶೇಖರ್ ಹಿಟ್ನಾಳ್, ಸಚಿವ ಎಚ್ ಕೆ ಪಾಟೀಲ್ ಮತ್ತು ಶಾಸಕ ಬಸವರಾಜ್ ರಾಯರಡ್ಡಿ ಅವರಿಗೆ ಮನವಿ ಸಲ್ಲಿಸಲಾಗಿದ್ದು ಈ ಎಲ್ಲರ ಸಹಕಾರದೊಂದಿಗೆ ಸಿ ಎಂ ಸಿದ್ದರಾಮಯ್ಯ ಅವರಲ್ಲಿ ಮನವಿ ಮಾಡಲು ಶೀಘ್ರದಲ್ಲಿ ಸ್ಥಳೀಯ ಹೋರಾಟಗಾರರ ನಿಯೋಗ ಮುಖ್ಯಮಂತ್ರಿ ಭೇಟಿ ಮಾಡಲಿದೆ. ಇಂದಿನ ಮಾಧ್ಯಮಗೋಷ್ಠಿಯಲ್ಲಿ ಬಿ ಎಂ ಹಳ್ಳಿ, ರಾಮಣ್ಣ ಬಜೇಂತ್ರಿ, ರವಿತೇಜ ಅಬ್ಬಿಗೇರಿ, ವೀರಣ್ಣ ಅಣ್ಣಿಗೇರಿ, ಚನ್ನಬಸಪ್ಪ ಹಳ್ಳಿಕೇರಿ, ಬಿ ಎಂ ಖಾಸಿಂ, ಅಂದಪ್ಪ ಹುರಳಿ, ಕಳಕಪ್ಪ ಕುಂಬಾರ ಇತರರು ಇದ್ದರು.

# ಧರ್ಮಸ್ಥಳ ಗ್ರಾಮೀಣಾಭಿವೃದ್ಧಿಯಿಂದ ವಾತ್ಸಲ್ಯ ಕಿಟ್ ವಿತರಿಸಿದ

**ಮುಳಬಾಗಿಲು:** ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ವತಿಯಿಂದ ಮಾಶಾಸನ ಪಡೆಯುತ್ತಿರುವ ಮುಳಬಾಗಿಲು ತಾಲ್ಲೂಕಿನ ಮಂಜೂರಾಗಿ ಬಂದಿರುವ ವಾತ್ಸಲ್ಯ ಕಿಟ್‌ಗಳನ್ನು ಹರೀಶ್ ಕುಮಾರ್ ರವರು ಮತ್ತು ಗ್ರಾಮ ಪಂಚಾಯಿತಿ ಅಧ್ಯಕ್ಷರು ಹಾಗೂ ಪಂಚಾಯತಿ ಸದಸ್ಯರು ಸೇರಿದಂತೆ ಗಣ್ಯರು ವಿತರಣೆ ಮಾಡಿದರು.

ಶ್ರೀ ಕ್ಷೇತ್ರ ಧರ್ಮಸ್ಥಳದ ಪೂಜ್ಯ ವಿರೇಂದ್ರ ಹೆಗ್ಗಡೆ ಅವರು ಹಾಗೂ ಹೇಮಾವತಿ ಅಮ್ಮನವರು ನಿರ್ಗತಿಕರಿಗೆ ಅಗತ್ಯ ವಸ್ತುಗಳನ್ನುಮತು ಮಾಶಾಸನ ಕುಟುಂಬಗಳಿಗೆ ವಾತ್ಸಲ್ಯ ಕಿಟ್ ನೀಡಲಾಗುತ್ತಿದೆ ಎಂದರು.

ರಾಜ್ಯದಲ್ಲಿ ತೀರಾ ಬಡ ಕುಟುಂಬದವರು ನೆಮ್ಮದಿಯ ಜೀವನ ಕಟ್ಟಿಕೊಳ್ಳಬೇಕು ಎಂಬ ದೃಷ್ಟಿಯಿಂದ ವಾತ್ಸಲ್ಯ ಕಿಟ್ ವಿತರಣೆ ಮಾಡಲಾಗುತ್ತಿದೆ. ಸ್ಥಳೀಯ ಗಣ್ಯರಿಂದ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ಮೊದಲಿನಿಂದಲೂ ಅನೇಕ ಒಳ್ಳೆಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡು



ಬರುತ್ತಿದ್ದಾರೆ, ವೃದ್ಧರಿಗೆ, ವಿದ್ಯಾರ್ಥಿಗಳಿಗೆ, ಮಹಿಳೆಯರಿಗೆ ಸೇರಿದಂತೆ ಸಮಾಜಕ್ಕೆ ಅನೇಕ ಕೊಡುಗೆಗಳನ್ನು ನೀಡುತ್ತಿದಾರೆ ಎಂದು ಅವರ ಅನಿಸಿಕೆಯನ್ನು ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಯೋಜನಾಧಿಕಾರಿಗಳಾದ ಹರೀಶ್ ಕುಮಾರ್ ಗ್ರಾಮ ಪಂಚಾಯಿತಿ ಸದಸ್ಯರಾದ ಧರ್ಮಣ್ಣ. ಒಕ್ಕೂಟದ ಅಧ್ಯಕ್ಷರುಗಳು ಹಾಗೂ ಪದಾಧಿಕಾರಿಗಳು. ವಲಯದ ಮೇಲ್ವಿಚಾರಕರಾದ ಅಶ್ವಿನಿ ಹಾಗೂ ಜ್ಞಾನ ವಿಕಾಸ ಸಮನ್ವಯ ಅಧಿಕಾರಿ ರೇಣುಕಾ, ಸ್ಥಳೀಯ ಸೇವಾ ಪ್ರತಿನಿಧಿಗಳು ಹಾಗೂ ಸಾರ್ವಜನಿಕರು ಇದ್ದರು

# ಮಾಜಿ ಪ್ರಧಾನಿ ವಾಜಪೇಯಿಗೆ ನಮನ ಸಲ್ಲಿಸಿದ ಪ್ರಧಾನಿ ಮೋದಿ

**ನವದೆಹಲಿ:** ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರ ಶತಮಾನೋತ್ಸವದ ನಿಮಿತ್ತ ಶ್ರದ್ಧಾಂಜಲಿ ಸಲ್ಲಿಸಲಾಯಿತು. ರಾಷ್ಟ್ರಪತಿ ದ್ರೌಪದಿ ಮುರ್ಮು, ಉಪರಾಷ್ಟ್ರಪತಿ ಜಗದೀಪ್ ಧನಕರ್, ಪ್ರಧಾನಿ ನರೇಂದ್ರ ಮೋದಿ, ಲೋಕಸಭೆ ಸ್ಪೀಕರ್ ಓಂ ಬಿರ್ಲಾ, ಹಲವು ಕೇಂದ್ರ ಸಚಿವರು ಮತ್ತು ಆಂಧ್ರಪ್ರದೇಶ ಸಿಎಂ ಚಂದ್ರಬಾಬು ನಾಯ್ಡು ಅವರು ಬುಧವಾರ ಬೆಳಗ್ಗೆ ವಾಜಪೇಯಿ ಅವರ ಸಮಾಧಿ ಇರುವ ರಾಷ್ಟ್ರೀಯ ಸ್ಮೃತಿ ಸ್ಥಳದಲ್ಲಿ ನಿರ್ಮಿಸಿರುವ ಸ್ಮಾರಕ 'ಸದೈವ ಅಟಲ್' ಪುಷ್ಪ ನಮನ ಸಲ್ಲಿಸಿದರು.






ಇನ್ನು ಈ ಬಗ್ಗೆ ಮಾತನಾಡಿರುವ ಪ್ರಧಾನಿ ಮೋದಿ, ಅಟಲ್ ಬಿಹಾರಿ ವಾಜಪೇಯಿ ಅವರು 21ನೇ ಶತಮಾನದ ಭಾರತದ ಪರಿವರ್ತನೆಯ ಶಿಲ್ಪಿ ಎಂದು ಬಣ್ಣಿಸಿದ್ದಾರೆ. ಕ್ರೋನಿಸಂ ಮತ್ತು ನಿಶ್ಚಲತೆಯ ಆರ್ಥಿಕ ತತ್ತ್ವಶಾಸ್ತ್ರ ತೊರೆದು, ಭಾರತದ ಆರ್ಥಿಕತೆಯ ಉನ್ನತಿಗೆ ವೇದಿಕೆ ಕಲ್ಪಿಸುವ ಸುಧಾರಣೆಗಳನ್ನು ಆರಂಭಿಸಿದ ದೀಮಂತ ಎಂದು ಮೋದಿ ಗುಣಗಾನ ಮಾಡಿದ್ದಾರೆ.

ವಾಜಪೇಯಿ ಅವರ 100 ನೇ ಜನ್ಮದಿನದಂದು ಹಲವಾರು ಪತ್ರಿಕೆಗಳಲ್ಲಿ ಪ್ರಕಟವಾದ ಲೇಖನದಲ್ಲಿ ಮೋದಿ ಅವರು, ತಮ್ಮ ಸುದೀರ್ಘ ಸಂಸದೀಯ ಅಧಿಕಾರವನ್ನು ವಾಜಪೇಯಿ ಅವರು ಹೆಚ್ಚಾಗಿ ವಿರೋಧ ಪಕ್ಷದಲ್ಲೇ ಕಳೆದರು. ಕಾಂಗ್ರೆಸ್ ಅವರನ್ನು ದೇಶದ್ರೋಹಿ ಎಂದು ಕರೆದರೂ ಅವರೆಂದೂ ಯಾವುದೇ ಕಹಿ ಭಾವನೆ ಹೊಂದಿರಲಿಲ್ಲ ಎಂಬುದನ್ನು ನೆನಪಿಸಿಕೊಂಡಿದ್ದಾರೆ.

ಅಸಂಖ್ಯಾತ ಜನರಿಗೆ ಸ್ಫೂರ್ತಿ ನೀಡುತ್ತಿರುವ ರಾಜನೀತಿಜ್ಞ: ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರು, ಅಸಂಖ್ಯಾತ ಜನರಿಗೆ ಸ್ಫೂರ್ತಿ ನೀಡುತ್ತಿರುವ ರಾಜನೀತಿಜ್ಞರಾಗಿ ಎತ್ತರದಲ್ಲಿ ನಿಂತಿದ್ದಾರೆ ಎಂದು ಮೋದಿ ಬಣ್ಣಿಸಿದ್ದಾರೆ. ಸುಮಾರು ಒಂಬತ್ತು ವರ್ಷಗಳಲ್ಲಿ ನಾಲ್ಕು ಲೋಕಸಭೆ ಚುನಾವಣೆಗಳು ನಡೆದಿದ್ದ 90ರ ದಶಕದ ರಾಜಕೀಯ ಅಸ್ಥಿರತೆಯಿಂದಾಗಿ ಜನರು ಅಸಹನೆ ಮತ್ತು ಸರ್ಕಾರದ ಸಾಮರ್ಥ್ಯದ ಬಗ್ಗೆ ಸಂಶಯ ವ್ಯಕ್ತಪಡಿಸುತ್ತಿದ್ದರು. ಈ ಸಮಯದಲ್ಲಿ ವಾಜಪೇಯಿ ಅವರು ಸ್ಥಿರ ಮತ್ತು ಪರಿಣಾಮಕಾರಿ ಆಡಳಿತವನ್ನು ನೀಡಿದರು ಎಂದು ಪ್ರಧಾನಿ ನೆನಪು ಮಾಡಿಕೊಂಡಿದ್ದಾರೆ.

ವಿನಮ್ರ ಬೇರುಗಳಿಂದ ಬಂದ ವಾಜಪೇಯಿ ಅವರು ಸಾಮಾನ್ಯ ನಾಗರಿಕರ ಹೋರಾಟಗಳನ್ನು ಮತ್ತು ಪರಿಣಾಮಕಾರಿ ಆಡಳಿತದ ಪರಿವರ್ತಕ ಶಕ್ತಿಯನ್ನು ಅರಿತುಕೊಂಡಿದ್ದರು, ಅವರ ನಾಯಕತ್ವದ ದೀರ್ಘಾವಧಿಯ ಪ್ರಭಾವವು ಹಲವಾರು ಕ್ಷೇತ್ರಗಳಲ್ಲಿ ಇಂದು ನಮ್ಮ ನಿಮ್ಮೆಲ್ಲರಿಗೂ ಗೋಚರಿಸುತ್ತಿದೆ ಎಂದು ಮೋದಿ ಹೇಳಿದ್ದಾರೆ. ಅವರ ಯುಗವು ಮಾಹಿತಿ ತಂತ್ರಜ್ಞಾನ, ದೂರಸಂಪರ್ಕ ಮತ್ತು ಸಂವಹನ ಜಗತ್ತಿನಲ್ಲಿ ದೈತ್ಯಾಕಾರದ ಪ್ರಗತಿಗೆ ಮೇಲ್ಪಂಕ್ತಿ ಹಾಕಿ ಹೋಗಿದೆ ಎಂದು ಪ್ರಧಾನಿ ಹೇಳಿದ್ದಾರೆ.

**ನೆನಪಿನಲ್ಲಿ ಉಳಿಯುವ ಸುವರ್ಣ ಚತುಷ್ಪಥ ಯೋಜನೆ:** ಅಟಲ್ ಜಿ ನೇತೃತ್ವದ ಎನ್‌ಡಿಎ ಸರ್ಕಾರವು ನಾಗರಿಕರಿಗೆ ತಂತ್ರಜ್ಞಾನ ಪ್ರವೇಶಿಸಲು ಮೊದಲ ಪ್ರಯತ್ನ ಮಾಡಿತು. ಅದೇ ಸಮಯದಲ್ಲಿ ಭಾರತವನ್ನು ಸಂಪರ್ಕಿಸುವಲ್ಲಿ ದೂರದೃಷ್ಟಿ ಇತ್ತು. ಇಂದಿಗೂ, ಹೆಚ್ಚಿನ ಜನರು ಭಾರತದ ಉದ್ದ ಮತ್ತು ಅಗಲವನ್ನು ಸಂಪರ್ಕಿಸುವ ಸುವರ್ಣ ಚತುಷ್ಪಥ ಯೋಜನೆಯನ್ನು ನೆನಪಿಸಿಕೊಳ್ಳುತ್ತಾರೆ ಎಂದು ನರೇಂದ್ರ ಮೋದಿ ಹೇಳಿದರು.

**ಜನಮನಸೂರೆಗೊಂಡ ಗ್ರಾಮ್ ಸಡಕ್ ಯೋಜನೆ:** ಅವರು ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ ಮತ್ತು ದೆಹಲಿ ಮೆಟ್ರೋಗಾಗಿ ವ್ಯಾಪಕವಾದ ಕೆಲಸವನ್ನು ಮಾಡುವ ಮೂಲಕ ಮೆಟ್ರೋ ಸಂಪರ್ಕಕ್ಕಾಗಿ ಶ್ರಮಿಸಿದರು. ಇದೀಗ ವಿಶ್ವದರ್ಜೆಯ ಮೂಲಸೌಕರ್ಯ ಯೋಜನೆಯಾಗಿ ಎದ್ದು ಕಾಣುವಂತೆ ಮಾಡಿದೆ. ವಾಜಪೇಯಿ ಸರ್ಕಾರ ಆರ್ಥಿಕ ಬೆಳವಣಿಗೆಗೆ ಉತ್ತೇಜನ ನೀಡಿದ್ದಲ್ಲದೇ ದೂರದ ಪ್ರದೇಶಗಳನ್ನು ಹತ್ತಿರಕ್ಕೆ ತಂದು ಏಕತೆ ಮತ್ತು ಏಕತೆಯನ್ನು ಬೆಳೆಸಿತು ಎಂದು ಇದೇ ವೇಳೆ ಪ್ರಧಾನಿ ಗುಣಗಾನ ಮಾಡಿದರು.

**ಸರ್ವಶಿಕ್ಷಾ ಅಭಿಯಾನ:** ಸರ್ವಶಿಕ್ಷಾ ಅಭಿಯಾನದಂತಹ ಉಪಕ್ರಮದ ಮೂಲಕ ವಾಜಪೇಯಿ ಅವರು ಆಧುನಿಕ ಶಿಕ್ಷಣವನ್ನು ರಾಷ್ಟ್ರದಾದ್ಯಂತ ಜನರಿಗೆ ತಲುಪಿಸಲು ಶ್ರಮಿಸಿದರು. ವಿಶೇಷವಾಗಿ ಬಡ ಮತ್ತು ಅಂಚಿನಲ್ಲಿರುವ ವರ್ಗಗಳಿಗೆ ಪ್ರವೇಶಿಸಬಹುದಾದ ಭಾರತವನ್ನು ಹೇಗೆ ನಿರ್ಮಿಸುವ ಕನಸು ಕಂಡಿದ್ದರು ಎಂಬುದನ್ನು ಈ ಯೋಜನೆ ಎತ್ತಿ ತೋರಿಸುತ್ತದೆ ಎಂದು ಅವರು ಹೇಳಿದರು.

**ವಿಶ್ವಕ್ಕೆ ಭಾರತದ ಶಕ್ತಿ ತೋರಿಸಿದ ಧೀಮಂತ:** ಪರಮಾಣು ಪರೀಕ್ಷೆಗಳನ್ನು ನಡೆಸುವ ಮೂಲಕ ಅವರು ತಮ್ಮ ಸರ್ಕಾರದ ನಿರ್ಧಾರ ಮತ್ತು ನಂತರದ ಪರಿಣಾಮಗಳನ್ನು ನಿಭಾಯಿಸುವುದು ಹೇಗೆ ಎಂಬುದನ್ನು ತಮ್ಮ ನಾಯಕತ್ವದ ಮೂಲಕ ತೋರಿಸಿಕೊಟ್ಟಿದ್ದಾರೆ. ಇದು ನಮ್ಮ ನಿಮ್ಮೆಲ್ಲರ ಮುಂದಿರುವ ಜೀವಂತ ಉದಾಹರಣೆಯಾಗಿದೆ ಎಂದು ಮೋದಿ ಹೊಗಳಿದರು.

**ಭಾರತದ ಬಲ ತೋರಿಸಿದ ಪರಮಾಣು ಪರೀಕ್ಷೆ:** ಮೇ 11, 1998ರ ಪರೀಕ್ಷೆಗಳು ವೈಜ್ಞಾನಿಕ ಕೌಶಲ್ಯವನ್ನು ತೋರಿಸಿದರೆ, ಮೇ 13 ರಂದು ನಡೆದ ಪರೀಕ್ಷೆಗಳು ನಿಜವಾದ ನಾಯಕತ್ವವನ್ನು ತೋರಿಸಿವೆ ಎಂದು ಅವರು ಹೇಳಿದರು. ಭಾರತವು ಬೆದರಿಕೆ ಅಥವಾ ಒತ್ತಡಕ್ಕೆ ಸಿಲುಕುವ ದಿನಗಳು ಯಾವತ್ತೋ ಮುಗಿದು ಹೋಗಿವೆ ಎಂದು ಜಗತ್ತಿಗೆ ಅವರು ನೀಡಿರುವ ಸಂದೇಶವಾಗಿದೆ ಎಂದು ಅವರು ಹೇಳಿದರು. ಅಂತಾರಾಷ್ಟ್ರೀಯ ನಿರ್ಬಂಧಗಳನ್ನು ಎದುರಿಸುತ್ತಿದ್ದರೂ, ಎನ್‌ಡಿಎ ಸರ್ಕಾರವು ದೃಢವಾಗಿ ನಿಂತಿದೆ. ತನ್ನ ಸಾರ್ವಭೌಮತ್ವವನ್ನು ಕಾಪಾಡುವ ಭಾರತದ ಹಕ್ಕನ್ನು ಸ್ಪಷ್ಟಪಡಿಸುತ್ತದೆ ಮತ್ತು ಏಕಕಾಲದಲ್ಲಿ ವಿಶ್ವಶಾಂತಿಯ ಪ್ರಬಲ ಪ್ರತಿಪಾದಕವಾಗಿದೆ ಎಂದು ಮೋದಿ ಹೇಳಿದ್ದಾರೆ. ವಾಜಪೇಯಿ ಅವರು ಭಾರತೀಯ ಪ್ರಜಾಪ್ರಭುತ್ವವನ್ನು ಅರ್ಥಮಾಡಿಕೊಂಡಿದ್ದರು ಮತ್ತು ಅದನ್ನು ಬಲಿಷ್ಠಗೊಳಿಸುವ ಅಗತ್ಯವನ್ನು ಸಹ ಅರಿತುಕೊಂಡಿದ್ದರು ಎಂದು ಮೋದಿ ಹೇಳಿದರು.

**ಸಂಸದೀಯ ತೇಜಸ್ಸು:** ಅಟಲ್ ಜೀ ಅವರ ಸಂಸದೀಯ ತೇಜಸ್ಸು ಅವರ ರಾಜಕೀಯ ಪಯಣದುದ್ದಕ್ಕೂ ಕಂಡುಬಂದಿದೆ. ಅವರು ಅಂದು ಬೆರಳೆಣಿಕೆಯಷ್ಟು ಸಂಸದರನ್ನು ಹೊಂದಿರುವ ಪಕ್ಷಕ್ಕೆ ಸೇರಿದವರಾಗಿದ್ದರು. ಆದರೆ ಅವರ ಮಾತುಗಳು ಆ ಸಮಯದಲ್ಲಿ ಸರ್ವಶಕ್ತ ಕಾಂಗ್ರೆಸ್ ಪಕ್ಷದ ಬಲವನ್ನು ಕೆಣಕಲು ಸಾಕಾಗಿತ್ತು ಎಂದು ಮೋದಿ ವಾಜಪೇಯಿ ಶಕ್ತಿಯನ್ನು ಅನಾವರಣಗೊಳಿಸಿದರು.

ಅವಕಾಶವಾದಿ ರಾಜಕೀಯ ಮಾಡಲಿಲ್ಲ ಅಟಲ್: ವಾಜಪೇಯಿ ಅವರು ಅವಕಾಶವಾದಿ ಮಾರ್ಗಗಳ ಮೂಲಕ ಅಧಿಕಾರಕ್ಕೆ ಅಂಟಿಕೊಂಡವರಲ್ಲ. ಅವರು ಕುದುರೆ ವ್ಯಾಪಾರ ಮತ್ತು ಕೊಳಕು ರಾಜಕೀಯದ ಹಾದಿಯನ್ನು ಅನುಸರಿಸುವ ಬದಲು 1996 ರಲ್ಲಿ ರಾಜೀನಾಮೆ ನೀಡಲು ಆದ್ಯತೆ ನೀಡಿದರು, 1999 ರಲ್ಲಿ ಅವರ ಸರ್ಕಾರವು ಒಂದು ಮತದಿಂದ ಪತನವಾಯಿತು ಎಂಬುದನ್ನು ಇದೇ ವೇಳೆ ಪ್ರಧಾನಿ ಸ್ಮರಿಸಿದರು.

**ವಾಜಪೇಯಿ ವಿದೇಶಾಂಗ ನೀತಿ:** ವಿದೇಶಾಂಗ ವ್ಯವಹಾರಗಳ ಸಚಿವರಾಗಿ ಅಟಲ್ ಬಿಹಾರಿ ವಾಜಪೇಯಿ ಅವರು ವಿಶ್ವಸಂಸ್ಥೆಯಲ್ಲಿ ಹಿಂದಿಯಲ್ಲಿ ಮಾತನಾಡಿದ ಮೊದಲ ಭಾರತೀಯ ನಾಯಕರಾಗಿದ್ದಾರೆ. ಈ ಮೂಲಕ ಭಾರತೀಯ ಸಂಸ್ಕೃತಿಯಲ್ಲಿ ಎಷ್ಟು ಆಳವಾಗಿ ಬೇರೂರಿದ್ದರು ಎಂಬುದನ್ನು ದೇಶಕ್ಕೆ ಆ ಮೂಲಕ ವಿಶ್ವಕ್ಕೆ ತೋರಿಸಿಕೊಟ್ಟಿದ್ದಾರೆ ಎಂಬುದನ್ನ ದೇಶದ ಜನರಿಗೆ ನೆನಪಿಸಿದರು ಮೋದಿ.

## ಡಿ.26ರಂದು ಮಂಡಲ ಪೂಜೆಗೆ ಶಬರಿಮಲೆ ಸಜ್ಜು

**ಕೇರಳ:** ಶಬರಿಮಲೆ ಅಯ್ಯಪ್ಪ ದೇವಸ್ಥಾನಕ್ಕೆ ವಾರ್ಷಿಕ ಯಾತ್ರೆಯ ಮೊದಲ ಹಂತದ ಮುಕ್ತಾಯ ಸೂಚಿಸುವ ಪ್ರಮುಖ ಆಚರಣೆಯಾದ ಮಂಡಲ ಪೂಜೆಯು ಡಿಸೆಂಬರ್ 26 ರಂದು ನಡೆಯಲಿದೆ.



ದೇವಸ್ಥಾನದ ಪ್ರಧಾನ ಅರ್ಚಕ ಕಂದರಾರು ರಾಜೀವರು ಅವರು ಅಪರಾಹ್ನ 12.30 ರ ನಡುವೆ ಧಾರ್ಮಿಕ ವಿಧಿಗಳನ್ನು ನೆರವೇರಿಸಲಿದ್ದಾರೆ ಎಂದು ತಿರುವಾಂಕೂರು ದೇವಸ್ವಂ ಮಂಡಳಿ (ಟಿಡಿಬಿ) ಅಧ್ಯಕ್ಷ ಪಿ ಎಸ್ ಪ್ರಶಾಂತ್ ಮಂಗಳವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ವಿವರಗಳನ್ನು ನೀಡಿದ್ದಾರೆ.

ಪತ್ತನಂತಿಟ್ಟದ ಅರನ್ಮುಲ ಪಾರ್ಥಸಾರಥಿ ದೇವಸ್ಥಾನದಿಂದ ಭಾನುವಾರ ಆರಂಭವಾದ ವಿಧ್ಯುಕ್ತವಾದ ತಂಕ ಅಂಕಿ ಮೆರವಣಿಗೆ ಬುಧವಾರ ಮಧ್ಯಾಹ್ನದ ವೇಳೆಗೆ ಪಂಬಾ ತಲುಪಲಿದೆ ಎಂದು ಅವರು ಇದೇ ವೇಳೆ ತಿಳಿಸಿದರು.

ಪಾರ್ಥಸಾರಥಿ ದೇವಸ್ಥಾನದಿಂದ ಹೊರಟಿರುವ ಮೆರವಣಿಗೆಯನ್ನು ಪಂಬಾದಲ್ಲಿ ದೇವಸ್ವಂ ಸಚಿವ ವಿ ಎನ್ ವಾಸವನ್ ಸ್ವಾಗತಿಸಲಿದ್ದಾರೆ, ನಂತರ ಸಂಜೆ ದೇವಾಲಯದ ಸಂಕೀರ್ಣವಾಗಿರುವ ಸನ್ನಿಧಾನಂನಲ್ಲಿ ಟಿಡಿಬಿ ಅಧ್ಯಕ್ಷರು ಮತ್ತು ಸದಸ್ಯರು ಮೆರವಣಿಗೆಗೆ ಸ್ವಾಗತ ಕೋರಲಿದ್ದಾರೆ.

ನಂತರ, ತಂಕ ಅಂಕಿ ಪವಿತ್ರ ಉಡುಪನ್ನು ಆರತಿಯ ಮೊದಲು ಪ್ರಧಾನ ದೇವತೆಯ ವಿಗ್ರಹದ ಮೇಲೆ ಹೊದಿಸಲಾಗುತ್ತದೆ. ಮಂಡಲ ಪೂಜೆ ಮತ್ತು ನೆಯ್ಯಭಿಷೇಕದ ನಂತರ ಅಯ್ಯಪ್ಪ ದೇವಾಲಯದ ದ್ವಾರಗಳನ್ನು ಡಿಸೆಂಬರ್ 26 ರಂದು ರಾತ್ರಿ 11 ಗಂಟೆಗೆ ಮುಚ್ಚಲಾಗುತ್ತದೆ. ಇದು ವಾರ್ಷಿಕ ಯಾತ್ರೆಯ ಮೊದಲ ಪಾದದ ಮುಕ್ತಾಯವನ್ನು ಸೂಚಿಸುತ್ತದೆ ಎಂದು ಸುದ್ದಿಗೋಷ್ಠಿಯಲ್ಲಿ ವಿವರಿಸಿದರು.

**ಮಕರವಿಳಕ್ಕು ಉತ್ಸವಕ್ಕಾಗಿ ಡಿಸೆಂಬರ್ 30 ಓಪನ್:** ಮಕರವಿಳಕ್ಕು ಉತ್ಸವಕ್ಕಾಗಿ ಶಬರಿಮಲೆಯನ್ನು ಡಿಸೆಂಬರ್ 30 ರಂದು ಸಂಜೆ ಮತ್ತೆ ಓಪನ್? ಮಾಡಲಾಗುತ್ತದೆ. ಜನವರಿ 14 ರಂದು ಪ್ರಮುಖ ಹಾಗೂ ಮಹತ್ವದ ಆಚರಣೆ ನಡೆಯಲಿದೆ ಎಂದು ಪ್ರಶಾಂತ್ ಹೇಳಿದರು.

**ಬುಕಿಂಗ್ ಗಳನ್ನು ಸೀಮಿತಿಗೊಳಿಸಿದ ಮಂಡಳಿ:** ಕ್ರೌಡ್ ಮ್ಯಾನೇಜ್‌ಮೆಂಟ್‌ನ ಭಾಗವಾಗಿ ಡಿಸೆಂಬರ್ 25 ಮತ್ತು 26 ರಂದು ಈವೆಂಟ್‌ಗಳಿಗಾಗಿ ವರ್ಚುಯಲ್ ಕ್ಯೂ ಬುಕಿಂಗ್‌ಗಳನ್ನು 50,000 ಮತ್ತು 60,000 ಗೆ ಸೀಮಿತಗೊಳಿಸಲಾಗಿದೆ. ಈ ಮಿತಿಯು ಹೈಕೋರ್ಟ್ ನಿರ್ದೇಶನಕ್ಕೆ ಅನುಗುಣವಾಗಿರುತ್ತದೆ ಎಂದು ಟಿಡಿಬಿ ಅಧ್ಯಕ್ಷರು ತಿಳಿಸಿದ್ದಾರೆ.

ಮಕರವಿಳಕ್ಕು ಹಬ್ಬದ ಅಂಗವಾಗಿ ಜನವರಿ 13 ಮತ್ತು 14 ರಂದು ವರ್ಚುಯಲ್ ಕ್ಯೂ ಬುಕ್ಕಿಂಗ್ ಸಂಖ್ಯೆಯನ್ನು 50,000 ಮತ್ತು 40,000 ಕ್ಕೆ ನಿಗದಿಪಡಿಸಲಾಗಿದೆ ಎಂದು ಅವರು ಹೇಳಿದರು.

ಈ ವರ್ಷ ಇಷ್ಟು ಭಕ್ತರು ಶಬರಿಮಲೆಗೆ ಭೇಟಿ: ಪ್ರಸಕ್ತ ಸಾಲಿನಲ್ಲಿ ಡಿಸೆಂಬರ್ 23 ರವರೆಗೆ ಒಟ್ಟು 30,87,049 ಯಾತ್ರಾರ್ಥಿಗಳು ಭಗವಾನ್ ಅಯ್ಯಪ್ಪ ದೇವಾಲಯಕ್ಕೆ ಭೇಟಿ ನೀಡಿದ್ದಾರೆ ಎಂದು ಟಿಡಿಬಿ ಅಧ್ಯಕ್ಷರು ಮಾಹಿತಿ ನೀಡಿದ್ದಾರೆ. ಕಳೆದ ವರ್ಷಕ್ಕೆ ಹೋಲಿಸಿದರೆ ಈ ಬಾರಿ 4.46 ಲಕ್ಷ ಹೆಚ್ಚು ಭಕ್ತರು ಬಂದಿದ್ದಾರೆ.

2018 ರ ಪ್ರವಾಹದ ನಂತರ ನಿಲ್ಲಿಸಲಾದ ಆಧ್ಯಾತ್ಮಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮವಾದ "ಪಂಬಾ ಸಂಗಮಂ" ಅನ್ನು ಮರುಪ್ರಾರಂಭಿಸಲು ಖಆಃ ನಿರ್ಧರಿಸಿದೆ ಎಂದು ಪ್ರಶಾಂತ್ ಹೇಳಿದರು. ಇದು ಮುಂದಿನ ವರ್ಷ ಜನವರಿ 12 ರಿಂದ ನಡೆಯಲಿದೆ. ಮುಂಬರುವ ಮಕರವಿಳಕ್ಕು ಉತ್ಸವಕ್ಕೆ ಅಯ್ಯಪ್ಪ ದೇವರ ಚಿನ್ನದ ಲಾಕೆಟ್‌ಗಳನ್ನು ಹೊರತರಲು ಮಂಡಳಿ ನಿರ್ಧರಿಸಿದೆ.

## ಚುನಾವಣಾ ನಿಯಮಗಳ ತಿದ್ದುಪಡಿ ವಿರುದ್ಧ ಸುಪ್ರೀಂಕೋರ್ಟ್ ಮೊರೆ ಹೋದ ಕಾಂಗ್ರೆಸ್

**ನವದೆಹಲಿ:** 1961ರ ಚುನಾವಣಾ ನಿಯಮಗಳನ್ನು ತಿದ್ದುಪಡಿ ಮಾಡಿದ್ದನ್ನು ಪ್ರಶ್ನಿಸಿ ಕಾಂಗ್ರೆಸ್ ಸುಪ್ರೀಂ ಕೋರ್ಟ್‌ನಲ್ಲಿ ಮಂಗಳವಾರ ರಿಟ್ ಅರ್ಜಿ ಸಲ್ಲಿಸಿದೆ. ಚುನಾವಣಾ ಪ್ರಕ್ರಿಯೆಯ ಸಮಗ್ರತೆಯನ್ನು ಪುನಃಸ್ಥಾಪಿಸಲು ಕೋರ್ಟ್?ಸಹಾಯ ಮಾಡುತ್ತದೆ ಎಂದು ಭರವಸೆ ವ್ಯಕ್ತಪಡಿಸಿದೆ.



ಜನರು ಮಾಡುವ ಮತದಾನದ ಪ್ರಕ್ರಿಯೆಯನ್ನು ದಾಖಲು ಮಾಡುವ ಸಿಸಿಟಿವಿ ಕ್ಯಾಮೆರಾ, ವೆಬ್‌ಕಾಸ್ಟಿಂಗ್ ಹಾಗೂ ಅಭ್ಯರ್ಥಿಗಳ ವಿಡಿಯೋ ರೆಕಾರ್ಡ್‌ಗಳಂತಹ ಕೆಲವು ಎಲೆಕ್ಟ್ರಾನಿಕ್ ದಾಖಲೆಗಳನ್ನು ಸಾರ್ವಜನಿಕ ತಪಾಸಣೆಗೆ ನೀಡುವುದನ್ನು ತಡೆಯಲು ಕೇಂದ್ರ ಸರ್ಕಾರ ಚುನಾವಣಾ ನಿಯಮಗಳನ್ನು ತಿದ್ದುಪಡಿ ಮಾಡಿದೆ.

ಕಾಂಗ್ರೆಸ್ ಆರೋಪವೇನು: ಎಐಸಿಸಿ ಪ್ರಧಾನ ಕಾರ್ಯದರ್ಶಿ ಜೈರಾಂ ರಮೇಶ್ ಅವರು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿ ಮಾತನಾಡಿ, ಚುನಾವಣಾ ಪ್ರಕ್ರಿಯೆಯ ಸಮಗ್ರತೆಗೆ ಧಕ್ಕೆಯಾಗುತ್ತಿದೆ. ಇದನ್ನು ಕೇಂದ್ರ ಸರ್ಕಾರ ತನ್ನ ಮೂಗಿನ ನೇರಕ್ಕೆ ಬದಲಾವಣೆ ಮಾಡುತ್ತಿದೆ. ಈ ಹಿಂದಿನ ನಿಯಮಗಳನ್ನು ಪುನಃಸ್ಥಾಪಿಸಲು ಮತ್ತು ಮತದಾನದ ಪಾರದರ್ಶಕತೆಯನ್ನು ಕಾಪಾಡಲು ಸುಪ್ರೀಂ ಕೋರ್ಟ್ ಕ್ರಮ ಕೈಗೊಳ್ಳಬೇಕು ಎಂದು ಹೇಳಿದರು.

1961ರ ಚುನಾವಣಾ ನಿಯಮಗಳಿಗೆ ಕೇಂದ್ರ ಸರ್ಕಾರ ಇತ್ತೀಚಿಗೆ ತಿದ್ದುಪಡಿ ಮಾಡಿದೆ. ಇದನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ ರಿಟ್ ಅರ್ಜಿ ಸಲ್ಲಿಸಲಾಗಿದೆ ಎಂದು ಅವರು ಎಕ್ಸ್ ಖಾತೆಯಲ್ಲಿ ಪೋಸ್ಟ್ ಹಂಚಿಕೊಂಡಿದ್ದಾರೆ. ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣೆ ನಡೆಸುವ ಹೊಣೆ ಹೊತ್ತಿರುವ ಸಾಂವಿಧಾನಿಕ ಸಂಸ್ಥೆಯಾದ ಚುನಾವಣಾ ಆಯೋಗವು ಏಕಪಕ್ಷೀಯವಾಗಿ ಮತ್ತು ಸಾರ್ವಜನಿಕ ಅಭಿಪ್ರಾಯ ಪಡೆಯದೆ, ಮಹತ್ವದ ನಿಯಮಗಳಿಗೆ ಅತಿ ಕನಿಷ್ಠ ರೀತಿಯಲ್ಲಿ ತಿದ್ದುಪಡಿ ಮಾಡಲು ಅನುಮತಿಸಬಾರದಿತ್ತು ಎಂದು ಜೈರಾಮ್ ರಮೇಶ್ ಕಿಡಿಕಾರಿದ್ದಾರೆ.

ಏನೆಲ್ಲಾ ತಿದ್ದುಪಡಿ: ಚುನಾವಣೆಗೆ ಸಂಬಂಧಿಸಿದ ದಾಖಲೆಗಳಾದ ಸಿಸಿಟಿವಿ ದೃಶ್ಯಗಳು, ವೆಬ್‌ಕಾಸ್ಟಿಂಗ್ ತುಣುಕುಗಳು, ಅಭ್ಯರ್ಥಿಗಳ ವಿಡಿಯೋಗಳು, ಅಭ್ಯರ್ಥಿಗಳ ನಾಮಪತ್ರ, ಏಜೆಂಟ್‌ಗಳ ವಿವರ ಸೇರಿದಂತೆ ಎಲ್ಲ ದಾಖಲೆಗಳನ್ನು ಸಾರ್ವಜನಿಕರು ಆಯೋಗದಿಂದ ಪಡೆದುಕೊಳ್ಳಬಹುದಿತ್ತು.

ಆದರೆ, ಈ ದಾಖಲೆಗಳನ್ನು ಪಡೆದುಕೊಂಡ ಬಳಿಕ ಕೆಲವರು ದುರುಪಯೋಗ ಮಾಡಿಕೊಳ್ಳುತ್ತಿರುವ ಹಿನ್ನೆಲೆಯಲ್ಲಿ ಈ ದಾಖಲೆಗಳನ್ನು ಜನರಿಗೆ ನೀಡುವ ಬಗ್ಗೆ ನಿರ್ಬಂಧ ಹೇರಬೇಕು ಎಂದು ಕೋರಿ ಚುನಾವಣಾ ಆಯೋಗ ಕೇಂದ್ರ ಕಾನೂನು ಸಚಿವಾಲಯಕ್ಕೆ ಶಿಫಾರಸು ಮಾಡಿತ್ತು. ಅದರಂತೆ ನಿಯಮಗಳಿಗೆ ತಿದ್ದುಪಡಿ ಮಾಡಲಾಗಿದ್ದು, ಎಲೆಕ್ಟ್ರಾನಿಕ್ ದಾಖಲೆಗಳ ಬದಲು ಕಾಗದ ಪತ್ರಗಳನ್ನು ಮಾತ್ರ ಜನರಿಗೆ ನೀಡಲು ಕೇಂದ್ರ ಅನುಮತಿಸಿದೆ. ಈ ನಿಯಮ ಅಭ್ಯರ್ಥಿಗಳಿಗೆ ಅನ್ವಯಿಸಲ್ಲ. ಜನರು ತಮಗೆ ಈ ದಾಖಲೆಗಳು ಬೇಕಾದಲ್ಲಿ ಕೋರ್ಟ್ ಅನುಮತಿ ಪಡೆದುಕೊಳ್ಳಬೇಕು ಎಂದು ಕೇಂದ್ರ ಹೇಳಿದೆ.

## ಪುರುಷ ಶಿಕ್ಷಕನಿಗೆ 6 ತಿಂಗಳ ಹೆರಿಗೆ ರಜೆ ನೀಡಿದ ಬಿಹಾರ ಶಿಕ್ಷಣ ಇಲಾಖೆ

**ಪಾಟ್ನಾ:** ಮಹಿಳೆಯರಿಗೆ ಹೆರಿಗೆ ರಜೆ ನೀಡಲಾಗುತ್ತೆ. ಗಂಡಸರಿಗೆ ಇಂಥದ್ದೊಂದು ರಜೆ ಸಿಗಬಹುದೇ?. ಹೌದು ಎನ್ನುತ್ತೆ ಬಿಹಾರದ ಶಿಕ್ಷಣ ಇಲಾಖೆ. ಪುರುಷ ಶಿಕ್ಷಕನಿಗೆ ಹೆರಿಗೆ ರಜೆ ಮಂಜೂರು ಮಾಡಿದ್ದು, ಅದನ್ನು ತನ್ನ ವೆಬ್‌ಸೈಟ್‌ನಲ್ಲಿ ನಮೂದು ಕೂಡ ಮಾಡಿದೆ. ಇದು ಅಚ್ಚರಿಯಾದರೂ ನಿಜ. ಮಹಿಳೆಯರಿಗೆ ಮಾತ್ರ ಇರುವ ಹೆರಿಗೆ ರಜೆಯನ್ನು ಬಿಹಾರ ಶಿಕ್ಷಣ ಇಲಾಖೆ ಪುರುಷರಿಗೂ ನೀಡಿ ಯಡವಟ್ಟು ಮಾಡಿಕೊಂಡಿದೆ. ಇದು ಪ್ರಮಾದವಶಾತ್ ನಡೆದಿದ್ದರೂ, ಅಧಿಕೃತ ಪೋರ್ಟಲ್‌ನಲ್ಲಿ ನಮೂದಿಸುವ ಮೂಲಕ ನಗೆಪಾಟಲಿಗೀಡಾಗಿದೆ.

ಪ್ರಕರಣದ ವಿವರ: ಹಾಜಿಪುರ ಮಹುವಾ ಬ್ಲಾಕ್ ಪ್ರದೇಶದ ಹಸನ್‌ಪುರ ಒಸ್ತಿ ಪ್ರೌಢಶಾಲೆಯ ಶಿಕ್ಷಕರಾಗಿರುವ ಜಿತೇಂದ್ರ ಕುಮಾರ್ ಸಿಂಗ್ ಅವರು ಹೆರಿಗೆ ರಜೆ ಪಡೆದವರು. ಶಿಕ್ಷಕರು ರಜೆ ಯಾವ ಕಾರಣಕ್ಕಾಗಿ ಪಡೆದಿದ್ದಾರೆ ಎಂಬುದನ್ನು ಶಿಕ್ಷಣ ಇಲಾಖೆಯು ತನ್ನ ಅಧಿಕೃತ ಪೋರ್ಟಲ್ ಇ-ಶಿಕ್ಷಾ ಕೋಶದಲ್ಲಿ ಉಲ್ಲೇಖಿಸಿದೆ. ಜಿತೇಂದ್ರ ಅವರ ಹೆಸರಿನ ಮುಂದೆ ಹೆರಿಗೆ ರಜೆ ಎಂದು ನೋಂದಾಯಿಸಲಾಗಿದೆ. ಇಂಥದ್ದೊಂದು ನಗೆಪಾಟಲಿನ ಪ್ರಮಾದ ಹೊರಬಿದ್ದ ಬಳಿಕ ಶಿಕ್ಷಣ ಇಲಾಖೆ ಅಧಿಕಾರಿಗಳು ಮುಜುಗರಕ್ಕೀಡಾಗಿದ್ದಾರೆ. ಈ ಬಗ್ಗೆ ಸ್ಪಷ್ಟನೆ ನೀಡಿರುವ ಕ್ಷೇತ್ರ ಶಿಕ್ಷಣಾಧಿಕಾರಿ ಅರ್ಚನಾ ಕುಮಾರಿ ಅವರು, ಶಿಕ್ಷಕ ಜಿತೇಂದ್ರ ಕುಮಾರ್ ಸಿಂಗ್ ಅವರ ಹೆಸರನ್ನು ಇಲಾಖೆಯ ಪೋರ್ಟಲ್‌ನಲ್ಲಿ ತಪ್ಪಾಗಿ ಸೇರಿದೆ. ಅದನ್ನು ಶೀಘ್ರವೇ ಸರಿಪಡಿಸಲಾಗುವುದು ಎಂದಿದ್ದಾರೆ. ತಾಂತ್ರಿಕ ದೋಷದಿಂದ ಈ ಪ್ರಮಾದ ಉಂಟಾಗಿದೆ. ಶಿಕ್ಷಕರ ರಜೆಯನ್ನು ಅವರು ಅರ್ಹರಲ್ಲದ ವರ್ಗದಲ್ಲಿ ನಮೂದಿಸಲಾಗಿದೆ. ಇದಕ್ಕೆ ಕಾರಣರಾದವರ ಮೇಲೆ ಕ್ರಮ ಜರುಗಿಸಲಾಗುವುದು ಶಿಕ್ಷಣಾಧಿಕಾರಿಗಳು ತಿಳಿಸಿದ್ದಾರೆ.

**ಹೆರಿಗೆ ರಜೆ ನಿಯಮವೇನು:** ರಾಜ್ಯದಲ್ಲಿ ಯಾವುದೇ ಸರ್ಕಾರಿ ಮಹಿಳಾ ಸಿಬ್ಬಂದಿ 180 ದಿನಗಳ (6ತಿಂಗಳ) ಹೆರಿಗೆ ಪಡೆಯಬಹುದು. ಪುರುಷ ಸಿಬ್ಬಂದಿಗೆ ಪಿತೃತ್ವ ರಜೆಯಾಗಿ 15 ದಿನ ಪಾವತಿಸಹಿತ ರಜೆ ನೀಡುವ ನಿಯಮವಿದೆ. ಇದು ಎರಡು ಮಕ್ಕಳ ಹೆರಿಗೆಗೆ ಮಾತ್ರ ಅನ್ವಯಿಸುತ್ತದೆ.




## ಅಫ್ಘಾನಿಸ್ತಾನದ ಮೇಲೆ ಪಾಕಿಸ್ತಾನ ವೈಮಾನಿಕ ದಾಳಿ: 15 ಮಂದಿ ಸಾವು

**ಇಸ್ಲಾಮಾಬಾದ್:** ಅಫ್ಘಾನಿಸ್ತಾನದಲ್ಲಿ ಪಾಕಿಸ್ತಾನ ಮಂಗಳವಾರ ವೈಮಾನಿಕ ದಾಳಿ ನಡೆಸಿದೆ. ಪಾಕಿಸ್ತಾನಿ ವಾಯುಪಡೆಯ ಫೈಟರ್ ಜೆಟ್‌ಗಳು ಪಕ್ತಿಕಾ ಪ್ರಾಂತ್ಯದ ಬರ್ಮಾಲ್ ಜಿಲ್ಲೆಯ ಲಾಮನ್ ಸೇರಿದಂತೆ ಏಳು ಗ್ರಾಮಗಳ ಮೇಲೆ ದಾಳಿ ನಡೆಸಿದೆ ಎಂಬ ಮಾಹಿತಿ ಲಭ್ಯವಾಗಿದೆ.



ಪಾಕಿಸ್ತಾನಿ ಅಧಿಕಾರಿಗಳು ಪಾಕಿಸ್ತಾನಿ ತಾಲಿಬಾನ್ (ಟಿಟಿಪಿ) ತರಬೇತಿ ಶಿಬಿರವನ್ನು ಗುರಿಯಾಗಿಸಿಕೊಂಡು ಈ ದಾಳಿ ನಡೆಸಿದ್ದು, ಸದ್ಯ ತರಬೇತಿ ಕೇಂದ್ರವನ್ನು ನಾಶಪಡಿಸಿದ್ದಾರೆ. ದಾಳಿಯಲ್ಲಿ ಹಲವಾರು ಭಯೋತ್ಪಾದಕರನ್ನು ಕೊಂದಿದ್ದಾರೆ ಎಂದು ಮಾಹಿತಿ ಹೇಳಿದ್ದಾರೆ.

ಸ್ಥಳೀಯ ಮಾಧ್ಯಮಗಳ ವರದಿಯ ಪ್ರಕಾರ, ಡಿಸೆಂಬರ್ 24 ರ ರಾತ್ರಿ ನಡೆದ ಈ ದಾಳಿಗಳಲ್ಲಿ ಮಹಿಳೆಯರು ಮತ್ತು ಮಕ್ಕಳು ಸೇರಿದಂತೆ ಕನಿಷ್ಠ 15 ಜನರು ಸಾವನ್ನಪ್ಪಿದ್ದಾರೆ. ಸಾವಿನ ಸಂಖ್ಯೆ ಹೆಚ್ಚಾಗಬಹುದು. ಲಾಮನ್‌ನಲ್ಲಿ ಒಂದೇ ಕುಟುಂಬದ ಐವರು ಸಾವನ್ನಪ್ಪಿರುವುದು ವರದಿಯಾಗಿದೆ.

ಮಾರ್ಚ್ ನಂತರ ಪಾಕಿಸ್ತಾನಿ ತಾಲಿಬಾನ್ ಗುರಿಗಳ ಮೇಲೆ ಅಫ್ಘಾನಿಸ್ತಾನದಲ್ಲಿ ನಡೆದ ಎರಡನೇ ದಾಳಿ ಇದಾಗಿದೆ. ಅಫ್ಘಾನಿಸ್ತಾನದೊಳಗಿನ ಗಡಿ ಪ್ರದೇಶಗಳಲ್ಲಿ ಗುಪ್ತಚರ ಆಧಾರದ ಮೇಲೆ ದಾಳಿ ನಡೆಸಲಾಗಿದೆ ಎಂದು ಮಾರ್ಚ್‌ನಲ್ಲಿ ಪಾಕಿಸ್ತಾನ ಹೇಳಿತ್ತು. ಪಾಕಿಸ್ತಾನದ ದಾಳಿಯ ನಂತರ ಅಫ್ಘಾನಿಸ್ತಾನವನ್ನು ಆಳಿದ ತಾಲಿಬಾನ್ ರಕ್ಷಣಾ ಸಚಿವಾಲಯ ಆಕ್ರೋಶ ವ್ಯಕ್ತಪಡಿಸಿದೆ.

ಅಫ್ಘಾನಿಸ್ತಾನದ ರಕ್ಷಣಾ ಸಚಿವಾಲಯವು ಪಾಕಿಸ್ತಾನದ ವೈಮಾನಿಕ ದಾಳಿಯನ್ನು ಖಂಡಿಸಿದೆ. ಬಾಂಬ್ ದಾಳಿಯು ಮಹಿಳೆಯರು ಮತ್ತು ಮಕ್ಕಳು ಸೇರಿದಂತೆ ನಾಗರಿಕರನ್ನು ಗುರಿಯಾಗಿಸಿಕೊಂಡಿದೆ ಎಂದು ಆರೋಪಿಸಿದೆ. ಬಲಿಯಾದವರಲ್ಲಿ ಹೆಚ್ಚಿನವರು ವಜಿರಿಸ್ತಾನ್ ಪ್ರದೇಶದ ನಿರಾಶ್ರಿತರು ಎಂದು ಮಾಧ್ಯಮಗಳು ವರದಿ ಮಾಡಿದೆ. ಇಸ್ಲಾಮಿಕ್ ಎಮಿರೇಟ್ ಆಫ್ ಅಫ್ಘಾನಿಸ್ತಾನ (ತಾಲಿಬಾನ್ ಆಡಳಿತ) ಇದು ಎಲ್ಲ ಅಂತಾರಾಷ್ಟ್ರೀಯ ತತ್ವಗಳ ವಿರುದ್ಧ ಕ್ರೂರ ಕೃತ್ಯ ಮತ್ತು ಸಂಪೂರ್ಣ ಆಕ್ರಮಣ ಎಂದು ಪರಿಗಣಿಸುತ್ತದೆ ಮತ್ತು ಇದನ್ನು ಬಲವಾಗಿ ಖಂಡಿಸುತ್ತದೆ ಎಂದು ಅಫ್ಘಾನ್ ಸಚಿವಾಲಯ ಹೇಳಿದೆ.

ಅಫ್ಘಾನ್ ರಕ್ಷಣಾ ಸಚಿವಾಲಯವು ಪಾಕಿಸ್ತಾನದ ವಿರುದ್ಧ ಸೇಡು ತೀರಿಸಿ ಕೊಳ್ಳುವುದಾಗಿ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದೆ. ಇಂತಹ ಏಕಪಕ್ಷೀಯ ಕ್ರಮಗಳು ಯಾವುದೇ ಸಮಸ್ಯೆಗೆ ಪರಿಹಾರವಲ್ಲ ಎಂಬುದನ್ನು ಪಾಕಿಸ್ತಾನ ಅರಿಯಬೇಕು. ಇಸ್ಲಾಮಿಕ್ ಎಮಿರೇಟ್ ಈ ಹೇಡಿತನದ ಕೃತ್ಯವನ್ನು ಉತ್ತರಿಸದೆ ಬಿಡುವುದಿಲ್ಲ. ನಮ್ಮ ಪ್ರದೇಶ ಮತ್ತು ಪ್ರದೇಶದ ರಕ್ಷಣೆಯನ್ನು ತನ್ನ ಅವಿನಾಭಾವ ಹಕ್ಕು ಎಂದು ಅಫ್ಘಾನ್ ಪರಿಗಣಿಸುತ್ತದೆ.

ಅಫ್ಘಾನಿಸ್ತಾನದ ಪಾಕಿಸ್ತಾನದ ವಿಶೇಷ ಪ್ರತಿನಿಧಿ ಮೊಹಮ್ಮದ್ ಸಾದಿಕ್ ಕಾಬೂಲ್‌ಗೆ ಭೇಟಿ ನೀಡಿದ ಕೆಲವೇ ಗಂಟೆಗಳ ನಂತರ ಈ ದಾಳಿ ನಡೆದಿದೆ. ದ್ವಿಪಕ್ಷೀಯ ಮತ್ತು ಸಂಬಂಧಗಳನ್ನು ಸುಧಾರಿಸುವುದು ಸೇರಿದಂತೆ ಹಲವು ವಿಷಯಗಳ ಕುರಿತು ಚರ್ಚಿಸಲು ಸಾದಿಕ್ ಮಂಗಳವಾರ ಕಾಬೂಲ್‌ಗೆ ಆಗಮಿಸಿದ್ದರು. ಅಲ್ಲಿ ಅವರು ತಾಲಿಬಾನ್ ಆಡಳಿತದ ಅಧಿಕಾರಿಗಳನ್ನು ಭೇಟಿ ಮಾಡಿರುವುದು ಗಮನಾರ್ಹ.

## ಬಾಹ್ಯಾಕಾಶ ನಿಲ್ದಾಣದಲ್ಲೇ ಸುನಿತಾ ವಿಲಿಯಮ್ಸ್ ಕ್ರಿಸ್ಮಸ್ ಹಬ್ಬ ಆಚರಣೆ

**ನ್ಯೂಯಾರ್ಕ್:** ಸುನೀತಾ ವಿಲಿಯಮ್ಸ್ ಮತ್ತು ಇತರ ಗಗನಯಾತ್ರಿಗಳು ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಲ್ಲೇ ಕ್ರಿಸ್ಮಸ್ ಆಚರಿಸಿ ಸಂತಸಪಟ್ಟರು. ಸುನೀತಾ ವಿಲಿಯಮ್ಸ್ ಸೇರಿದಂತೆ ಇತರ ಗಗನಯಾತ್ರಿಗಳು ಕ್ರಿಸ್ಮಸ್ ಸಂದೇಶಗಳನ್ನು ನೀಡಿದರು. ಈ ಬಗ್ಗೆ ನಾಸಾ ವಿಡಿಯೋವೊಂದನ್ನು ಪೋಸ್ಟ್ ಮಾಡಿದೆ.

ಈ ವರ್ಷದ ಜೂನ್‌ನಲ್ಲಿ ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ತೆರಳಿದ್ದ ಸುನೀತಾ ವಿಲಿಯಮ್ಸ್ ಮತ್ತು ಬುಚ್ ವಿಲ್ಮೋರ್ ಅವರು ಬಾಹ್ಯಾಕಾಶ ನೌಕೆಯಲ್ಲಿನ ತಾಂತ್ರಿಕ ಸಮಸ್ಯೆಗಳಿಂದಾಗಿ ಅಲ್ಲಿ ಸಿಲುಕಿಕೊಂಡಿದ್ದಾರೆ. ಮುಂದಿನ ವರ್ಷ ಮಾರ್ಚ್ ಅಂತ್ಯ ಅಥವಾ ಏಪ್ರಿಲ್ ಮೊದಲ ವಾರದಲ್ಲಿ ಅವರು ಭೂಮಿಗೆ ತಲುಪುವ ಸಾಧ್ಯತೆ ಇದೆ ಎಂದು ನಾಸಾ ಇತ್ತೀಚೆಗೆ ಬಹಿರಂಗಪಡಿಸಿದೆ.

ಸುನೀತಾ ಮತ್ತು ವಿಲ್ಮೋರ್ 8 ದಿನಗಳ ಕಾರ್ಯಾಚರಣೆಯ ಭಾಗವಾಗಿ ಬೋಯಿಂಗ್ ಸ್ಟಾರ್ಲೈನರ್ ಕ್ಯಾಪ್ಸುಲ್‌ನಲ್ಲಿ ಜೂನ್ 6 ರಂದು ಬಾಹ್ಯಾಕಾಶ ನಿಲ್ದಾಣಕ್ಕೆ ತೆರಳಿದ್ದರು. ವಾಸ್ತವವಾಗಿ ಇಬ್ಬರೂ ಜೂನ್ 14 ರಂದು ಭೂಮಿಗೆ ಮರಳಬೇಕಿತ್ತು. ಆದರೆ, ಬಾಹ್ಯಾಕಾಶ ನೌಕೆಯಲ್ಲಿ ಹೀಲಿಯಂ ಸೋರಿಕೆಯಿಂದಾಗಿ ತಾಂತ್ರಿಕ ಸಮಸ್ಯೆಗಳಿಂದ ಅವರು ಬಾಹ್ಯಾಕಾಶದಲ್ಲಿ ಸಿಲುಕಿಕೊಂಡಿದ್ದಾರೆ. ಅವರನ್ನು ಭೂಮಿಗೆ ಕರೆ ತರುವ ಪ್ರಯತ್ನಗಳು ಮುಂದುವರೆದಿವೆ.

ಮಾರ್ಚ್‌ಗೂ ಮುನ್ನ ಭೂಮಿಗೆ ಮರಳುತ್ತಾರಾ: ಇಬ್ಬರನ್ನು ವಾಪಸ್ ಭೂಮಿಗೆ ಕರೆತರಲು ಖಔಚಿಛಿಜಘ ಕ್ರೂ-9 ಎಂಬ ಮಿಷನ್ ಪ್ರಾರಂಭಿಸಿತು. ಇದರಲ್ಲೂ ಹಾಗ್ ಮತ್ತು ಗೋರ್ಬುನೋವ್ ಎಂಬ ಇಬ್ಬರು ಗಗನಯಾತ್ರಿಗಳಿದ್ದರು. ಇದೇ ವೇಳೆ, ಬಾಹ್ಯಾಕಾಶದಲ್ಲಿ ಸಿಲುಕಿದವರನ್ನು ಭೂಮಿಗೆ ಕರೆತರಲು ಇವರ ಜತೆ ಎರಡು ಆಸನಗಳನ್ನು ಖಾಲಿ ಕಳುಹಿಸಲಾಗಿದೆ. ಅದು ಸೆಪ್ಟೆಂಬರ್‌ನಲ್ಲಿಯೇ ಬಾಹ್ಯಾಕಾಶ ನಿಲ್ದಾಣವನ್ನು ತಲುಪಿದೆ.

ಈ ನಾಲ್ವರೂ ಫೆಬ್ರವರಿಯಲ್ಲಿ ಹಿಂತಿರುಗುತ್ತಾರೆ ಎಂದು ನಾಸಾ ಆರಂಭದಲ್ಲಿ ಘೋಷಿಸಿತ್ತು. ಆದಾಗ್ಯೂ, ಕ್ರ್ಯೂ -9 ರ ಸಿಬ್ಬಂದಿಯನ್ನು ಭೂಮಿಗೆ ಮರಳಿ ತರಲು ಕ್ರ್ಯೂ -10 ಉಡಾವಣೆ ಮಾರ್ಚ್‌ಗಿಂತ ಮೊದಲು ಸಂಭವಿಸುವ ಸಾಧ್ಯತೆಗಳಿಲ್ಲಎಂದು ತಿಳಿದು ಬಂದಿದೆ.

ಇದು ಸುನಿತಾರ ಮೂರನೇ ಯಾತ್ರೆ: ಸುನಿತಾ ವಿಲಿಯಮ್ಸ್ ಅವರಿಗೆ ಇದು ಮೂರನೇ ಬಾಹ್ಯಾಕಾಶ ಯಾನ ಯಾತ್ರೆ. ಇದಕ್ಕೂ ಮೊದಲು ಅಂದರೆ ಅವರು 2006 ಮತ್ತು 2012ರಲ್ಲಿ ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ತೆರಳಿದ್ದರು. ಒಟ್ಟು 50 ಗಂಟೆ 40 ನಿಮಿಷಗಳ ಕಾಲ ಬಾಹ್ಯಾಕಾಶ ನಡಿಗೆ ಕೈಗೊಂಡಿದ್ದರು. ಬಾಹ್ಯಾಕಾಶದಲ್ಲಿ 322 ದಿನಗಳನ್ನು ಅವರು ಕಳೆದಿದ್ದರು. ISS ನಲ್ಲಿ ಒಮ್ಮೆ ಮ್ಯಾರಥಾನ್ ಕೂಡ ಮಾಡಿದ್ದರು. ಈ ವೇಳೆ ವಿಲಿಯಮ್ಸ್ ಬಾಹ್ಯಾಕಾಶ ನಿಲ್ದಾಣ ಪ್ರವೇಶಿಸುತ್ತಿದ್ದಂತೆ ಖುಷಿಯಿಂದ ಡ್ಯಾನ್ಸ್ ಮಾಡಿರುವ ವಿಡಿಯೋ ಕೂಡಾ ವೈರಲ್ ಆಗಿತ್ತು.





# ಕಂಡುಕೊಂಡೈನ್ ಚಿತ್ರದಲ್ಲಿ ನಟಿಸಬೇಕಿತ್ತು

ತಮಿಳು ನಟಿಯರಿಗಿಂತ ಬೇರೆ ಭಾಷೆಯ ನಟಿಯರಿಗೆ ತಮಿಳು ಸಿನಿಮಾದಲ್ಲಿ ಬೇಡಿಕೆ ಜಾಸ್ತಿ ಇದೆ. ನಯನತಾರ, ರಶ್ಮಿಕಾ ಮಂದಣ್ಣ, ಮಾಳವಿಕಾ ಮೋಹನ್, ಪ್ರಿಯಾಂಕ ಮೋಹನ್ ಇವರನ್ನೆಲ್ಲ ಹೇಳಬಹುದು. ಈಗ ತಮಿಳು ಸಿನಿಮಾದಲ್ಲಿ ಬೇರೆ ಭಾಷೆಯ ನಟಿಯರದ್ದೇ ಕಾರುಬಾರು. ನಾಯಕಿ ಪಾತ್ರವಾದರೂ, ಪೋಷಕ ಪಾತ್ರವಾದರೂ ತಮಿಳು ನಟಿಯರಿಗಿಂತ ಅವರಿಗೆ ಬೇಡಿಕೆ ಜಾಸ್ತಿ.

ಸಾಯಿ ಪಲ್ಲವಿ ತಮಿಳುನಾಡಿನಲ್ಲಿ ಹುಟ್ಟಿದ್ರೂ ಮಲಯಾಳಂನಲ್ಲಿ ಹೆಚ್ಚು ಚಿತ್ರಗಳಲ್ಲಿ ನಟಿಸಿ ಸಾಧನೆ ಮಾಡಿದ್ದಾರೆ. ಇತ್ತೀಚೆಗೆ 'ಅಮರನ್' ಚಿತ್ರದಲ್ಲಿ ಶಿವಕಾರ್ತಿಕೇಯನ್ ಜೊತೆ ನಟಿಸಿ ಮಿಂಚಿದ್ರು. ಈ ಚಿತ್ರಕ್ಕೆ ಅಭಿಮಾನಿಗಳಿಂದ ಭರ್ಜರಿ ಪ್ರತಿಕ್ರಿಯೆ ಸಿಕ್ಕಿತು. ಸಾಯಿ ಪಲ್ಲವಿಯವರ ನಟನೆ ಕೂಡ ಮೆಚ್ಚುಗೆ ಪಡೆಯಿತು. ಈ ಚಿತ್ರವು ಒಳ್ಳೆಯ ಗಳಿಕೆ ಮತ್ತು ವಿಮರ್ಶೆಗಳನ್ನು ಪಡೆಯಿತು.

ಅದೇ ರೀತಿ ಈಗ ಮಂಜು ವಾರಿಯರ್ ಕೂಡ ತಮಿಳು ಸಿನಿಮಾದಲ್ಲಿ ಸಕ್ರಿಯರಾಗಿದ್ದಾರೆ. ನಾಗರ್‌ಕೋಯಿಲ್‌ನಲ್ಲಿ ಹುಟ್ಟಿದ ಮಂಜು ವಾರಿಯರ್, ಧನುಷ್ ನಟನೆಯ 'ಅಸುರನ್' ಚಿತ್ರದ ಮೂಲಕ ತಮಿಳು ಚಿತ್ರರಂಗಕ್ಕೆ ಪಾದಾರ್ಪಣೆ ಮಾಡಿದರು. ನಂತರ ಅಜಿತ್ ನಟನೆಯ 'ತುನಿವು' ಚಿತ್ರದಲ್ಲಿ ನಟಿಸಿದರು. ಕೊನೆಯದಾಗಿ 'ವೇಟ್ಟೈಯನ್' ಚಿತ್ರದಲ್ಲಿ ನಟಿಸಿದ್ದರು. ಈಗ ವೆಟ್ರಿಮಾರನ್ ಅವರ 'ವಿಡುತಲೈ ಭಾಗ 2' ಚಿತ್ರದಲ್ಲಿ ನಟಿಸಿ ತಮ್ಮ ನಟನಾ ಕೌಶಲ್ಯವನ್ನು ಪ್ರದರ್ಶಿಸಿದ್ದಾರೆ. ಈ ಚಿತ್ರದಲ್ಲಿ ವಿಜಯ್ ಸೇತುಪತಿಗೆ ಜೋಡಿಯಾಗಿದ್ದಾರೆ. ಮಂಜು ವಾರಿಯರ್ 'ಅಸುರನ್' ಚಿತ್ರಕ್ಕಿಂತ ಮೊದಲು ತಮಿಳಿಗೆ ಬರಬೇಕಿತ್ತಂತೆ. ಅದೂ ಅಜಿತ್ ಚಿತ್ರದಲ್ಲಿ. ಹೌದು, 'ಕಂಡುಕೊಂಡೈನ್ ಕಂಡುಕೊಂಡೈನ್' ಚಿತ್ರದಲ್ಲಿ ಅಜಿತ್ ಜೊತೆ ನಟಿಸಬೇಕಿತ್ತಂತೆ. ರಾಜೀವ್ ಮೆನನ್ ನಿರ್ದೇಶನದಲ್ಲಿ ಅಜಿತ್, ಮಮ್ಮೂಟ್ಟಿ, ಐಶ್ವರ್ಯ ರೈ, ತಬು, ಅಬ್ಬಾಸ್, ಮಣಿವಣ್ಣನ್, ರಘುವರನ್ ಮುಂತಾದವರ ನಟನೆಯ 'ಕಂಡುಕೊಂಡೈನ್ ಕಂಡುಕೊಂಡೈನ್' ಚಿತ್ರ 2000ದಲ್ಲಿ ಬಿಡುಗಡೆಯಾಗಿತ್ತು. ಈ ಚಿತ್ರದಲ್ಲಿ ಐಶ್ವರ್ಯ ರೈ ನಟಿಸುವುದು ನಿರ್ದೇಶಕ ರಾಜೀವ್ ಮೆನನ್‌ಗೆ ಇಷ್ಟವಿರಲಿಲ್ಲವಂತೆ. ಆ ಪಾತ್ರಕ್ಕೆ ಮೊದಲು ಮಂಜು ವಾರಿಯರ್ ಅವರನ್ನು ಸಂಪರ್ಕಿಸಿದ್ದರಂತೆ. ಅವರು ಕಥೆ, ನಾಯಕ ಎಲ್ಲವನ್ನೂ ತಿಳಿದು ಒಪ್ಪಿಕೊಂಡಿದ್ದರಂತೆ. ಆದರೆ, ಅವರಿಂದ ನಟಿಸಲು ಸಾಧ್ಯವಾಗಲಿಲ್ಲವಂತೆ. ನಂತರ ನಟಿ ಸೌಂದರ್ಯಾ ಅವರನ್ನು ಕೇಳಿದಾಗ, ಅವರು ನಿರಾಕರಿಸಿದರಂತೆ. ಬೇರೆ ದಾರಿ ಇಲ್ಲದೆ ಕೊನೆಗೆ ಐಶ್ವರ್ಯ ರೈ ಅವರನ್ನು ಕೇಳಿದ್ದಾರೆ. ಅವರು ಕಥೆ ಕೇಳಿ ನಟಿಸಲು ಒಪ್ಪಿಕೊಂಡಿದ್ದಾರೆ. ಈ ಬಗ್ಗೆ ರಾಜೀವ್ ಮೆನನ್ ಹೇಳಿದ್ದಾರೆ.

# ನಟಿ ರುಕ್ಮಿಣಿಗೆ ಷರತ್ತು!


'ಸಪ್ತ ಸಾಗರದಾಚೆ ಎಲ್ಲೋ' ಸಿನಿಮಾ ಬಳಿಕ ರಕ್ಮಿಣಿ ವಸಂತ್ ದಕ್ಷಿಣ ಭಾರತದ ಬಹುಬೇಡಿಕೆಯ ನಟಿಯಾಗಿದ್ದಾರೆ. ಕನ್ನಡದಲ್ಲಿ ಇತ್ತೀಚೆಗೆ ರುಕ್ಮಿಣಿ ನಟಿಸಿದ ಸಿನಿಮಾಗಳು ಒಂದರ ಹಿಂದೊಂದು ಬಿಡುಗಡೆಯಾಗಿತ್ತು. 'ಬಘೀರ' ಹಾಗೂ 'ಭೈರತಿ ರಣಗಲ್' ಎರಡೂ ಸಿನಿಮಾಗಳು ಬಾಕ್ಸಾಫೀಸ್‌ನಲ್ಲಿ ಹಿಟ್ ಅಂತಾ ಸಾಬೀತಾಗಿದೆ. ಇದರ ಜೊತೆಗೆ ತಮಿಳು ಹಾಗೂ ತೆಲುಗು ಭಾಷೆಯ ಸಿನಿಮಾಗಳಲ್ಲೂ ರಕ್ಮಿಣಿ ನಟಿಸುತ್ತಿದ್ದಾರೆ. ದಕ್ಷಿಣ ಭಾರತದ ಸೂಪರ್ ಸ್ಟಾರ್ ಸಿನಿಮಾಗಳಿಂದಲೂ ರುಕ್ಮಿಣಿ ವಸಂತ್‌ಗೆ ಆಫರ್ ಬರುತ್ತಿವೆ. ಪ್ರಶಾಂತ್ ನೀಲ್ ನಿರ್ದೇಶಿಸುತ್ತಿರುವ ಜೂ.ಎನ್‌ಟಿಆರ್ ಸಿನಿಮಾದಲ್ಲಿ ರುಕ್ಮಿಣಿ ವಸಂತ್ ನಟಿಸುತ್ತಿದ್ದಾರೆ ಎನ್ನಲಾಗಿದೆ. ಈ ಮಧ್ಯೆ ಜೂ.ಎನ್‌ಟಿಆರ್ ಕನ್ನಡದ ನಟಿ ರುಕ್ಮಿಣಿ ವಸಂತ್‌ಗೆ ತಮ್ಮ ಸಿನಿಮಾದಲ್ಲಿ ನಟಿಸುವುದಕ್ಕೂ ಮುನ್ನ ಒಂದು ಕಂಡಿಷನ್ ಹಾಕಿದ್ದಾರೆ ಅನ್ನೋ ಸುದ್ದಿ ಹರಿದಾಡುತ್ತಿದೆ. ರುಕ್ಮಿಣಿ ವಸಂತ್‌ಗೆ ಜೂ.ಎನ್‌ಟಿಆರ್ ಷರತ್ತು ಒಂದನ್ನು ಹಾಕಿದ್ದಾರೆ. ಅದಕ್ಕೆ ರುಕ್ಮಿಣಿ ವಸಂತ್ ಕೂಡ ಗ್ರೀನ್ ಸಿಗ್ನಲ್ ಕೊಟ್ಟಿದ್ದಾರೆ ಎನ್ನಲಾಗಿದೆ. ಹೌದು, ಕೆಲವು ದಿನಗಳ ಹಿಂದೆ ಜೂ.ಎನ್‌ಟಿಆರ್ ಸಿನಿಮಾದಲ್ಲಿ ರುಕ್ಮಿಣಿ ವಸಂತ್ ನಟಿಸುತ್ತಿದ್ದಾರೆ ಅನ್ನೋ ಸುದ್ದಿ ಹಬ್ಬಿತ್ತು. ಪ್ರಶಾಂತ್ ನೀಲ್ ತಮ್ಮ ಮುಂದಿನ ಸಿನಿಮಾಗೆ ಕನ್ನಡದ ನಟಿಯನ್ನೇ ಆಯ್ಕೆ ಮಾಡಿಕೊಂಡಿರುವ ಬಗ್ಗೆ ತೆಲುಗು ಮಾಧ್ಯಮಗಳು ಸುದ್ದಿ ಮಾಡಿದ್ದವು. ಪ್ರಶಾಂತ್ ನೀಲ್ ನಿರ್ದೇಶಿಸುತ್ತಿರುವ ಈ ಸಿನಿಮಾ ರಿಲೀಸ್ ಆಗುವವರೆಗೂ ರುಕ್ಮಿಣಿ ವಸಂತ್ ಬೇರೊಂದು ಸಿನಿಮಾದಲ್ಲಿ ನಟಿಸುವಂತಿಲ್ಲ. ಇಂತಹದ್ದೊಂದು ಷರತ್ತು ಸ್ವತ: ತೆಲುಗಿನ ಸೂಪರ್‌ಸ್ಟಾರ್ ಜೂ.ಎನ್‌ಟಿಆರ್ ಹಾಕಿದ್ದಾರೆಂಬ ಸುದ್ದಿ ಹಬ್ಬಿದೆ. ತೆಲುಗು ಹಾಗೂ ಕನ್ನಡದ ಸೋಶಿಯಲ್ ಮೀಡಿಯಾ ಪೇಜ್‌ನಲ್ಲಿ ಈ ಸುದ್ದಿ ವೈರಲ್ ಆಗುತ್ತಿದೆ. ಆದರೆ, ಈ ಬಗ್ಗೆ ಚಿತ್ರತಂಡ ಹಾಗೂ ರುಕ್ಮಿಣಿ ವಸಂತ್ ಕಡೆಯಿಂದ ಅಧಿಕೃತ ಮಾಹಿತಿ ಹೊರಬಿದ್ದಿಲ್ಲ. ಅಂದ್ಹಾಗೆ, ಕೆಲವು ತಿಂಗಳ ಹಿಂದೇನೆ ರುಕ್ಮಿಣಿ ವಸಂತ್ ತಾನು ಜೂ.ಎನ್‌ಟಿಆರ್ ಸಿನಿಮಾದಲ್ಲಿ ನಟಿಸುತ್ತಿಲ್ಲ. ತನಗೆ ಅಂತಹ ಯಾವುದೇ ಆಫರ್ ಇದೂವರೆಗೂ ಬಂದಿಲ್ಲ ಎಂದು ಹೇಳಿದ್ದಾಗಿ ವರದಿಗಳಾಗಿದ್ದವು. ಹೀಗಾಗಿ ಜೂ.ಎನ್‌ಟಿಆರ್ ಸಿನಿಮಾ ರುಕ್ಮಿಣಿ ವಸಂತ್ ನಟಿಸುತ್ತಿದ್ದಾರೋ ಇಲ್ಲವೋ ಅನ್ನೋದು ಇನ್ನೂ ಕನ್ಫರ್ಮ್ ಆಗಿಲ್ಲ. ಅಷ್ಟರಲ್ಲೇ ಜೂ.ಎನ್‌ಟಿಆರ್ ಷರತ್ತು ಹಾಕಿದ್ದಾರೆಂಬ ಸುದ್ದಿ ಹರಿದಾಡುತ್ತಿದೆ. 'ಭೈರತಿ ರಣಗಲ್' ಬಳಿಕ ರುಕ್ಮಿಣಿ ವಸಂತ್ ಕನ್ನಡದ ಹೊಸ ಸಿನಿಮಾಗಳಿಗೆ ಗ್ರೀನ್ ಸಿಗ್ನಲ್ ಕೊಟ್ಟಿಲ್ಲ. ಈಗಾಗಲೇ ತಮಿಳಿನ ಎರಡು ಸಿನಿಮಾಗಳಲ್ಲಿ ನಟಿಸುತ್ತಿದ್ದಾರೆ. ವಿಜಯ್ ಸೇತುಪತಿ ನಟನೆಯ 'ಏಸ್' ಹಾಗೂ ಶಿವಕಾರ್ತಿಕೇಯ್ ನಟಿಸುತ್ತಿರುವ ಹೊಸ ಸಿನಿಮಾಗೆ ರುಕ್ಮಿಣಿ ವಸಂತ್ ನಾಯಕಿಯಾಗಿ ನಟಿಸುತ್ತಿದ್ದಾರೆ. ಹಾಗೇ ಜೂನಿಯರ್ ಎನ್‌ಟಿಆರ್ 31 ಹಾಗೂ 32ನೇ ಸಿನಿಮಾಗೂ ಇವರೇ ನಾಯಕಿ ಎಂದು ತೆಲುಗು ಮಾಧ್ಯಮಗಳು ಹೇಳುತ್ತಿವೆ. ಆದರೆ, ರುಕ್ಮಿಣಿ ವಸಂತ್ ಇನ್ನೂ ಕನ್ಫರ್ಮ್ ಮಾಡಿಲ್ಲ.




# 2024ರಲ್ಲಿ ವಿದಾಯ ಹೇಳಿದ ಆಟಗಾರರು



ಭಾರತ ತಂಡದ ದಿಗ್ಗಜ ಸ್ಪಿನ್ನರ್ ರವಿಚಂದ್ರನ್ ಅಶ್ವಿನ್ ಡಿಸೆಂಬರ್ 18ರಂದು ಬಾರ್ಡರ್–ಗವಾಸ್ಕರ್ ಸರಣಿಯ ಮೂರನೇ ಟೆಸ್ಟ್ ಪಂದ್ಯದ ನಂತರ ಅಂತರರಾಷ್ಟ್ರೀಯ ಕ್ರಿಕೆಟ್‌ನಿಂದ ನಿವೃತ್ತಿ ಹೊಂದಿದರು. 106 ಟೆಸ್ಟ್ ಪಂದ್ಯಗಳಲ್ಲಿ 537 ವಿಕೆಟ್‌ಗಳೊಂದಿಗೆ, ಭಾರತದ ಪರ ಎರಡನೇ ಅತಿ ಹೆಚ್ಚು ವಿಕೆಟ್ ಪಡೆದ ಬೌಲರ್ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಒಂದು ದಿನದ ಪಂದ್ಯಗಳಲ್ಲಿ 165 ವಿಕೆಟ್‌ಗಳು ಮತ್ತು ಟಿ20 ಕ್ರಿಕೆಟ್‌ನಲ್ಲಿ 72 ವಿಕೆಟ್‌ಗಳನ್ನು ಪಡೆದಿದ್ದಾರೆ.




**ಡೇವಿಡ್ ವಾರ್ನರ್:** ಆಸ್ಟ್ರೇಲಿಯಾದ ಆರಂಭಿಕ ಆಟಗಾರ ಡೇವಿಡ್ ವಾರ್ನರ್ 2024ರಲ್ಲಿ ಅಂತರರಾಷ್ಟ್ರೀಯ ಕ್ರಿಕೆಟ್‌ನಿಂದ ನಿವೃತ್ತಿ ಹೊಂದಿದರು. ಟೆಸ್ಟ್, ಏಕದಿನ ಅಥವಾ ಟಿ20, ಯಾವುದೇ ಮಾದರಿಯಲ್ಲಾದರೂ ಸ್ಫೋಟಕ ಬ್ಯಾಟಿಂಗ್‌ಗೆ ಹೆಸರುವಾಸಿಯಾಗಿದ್ದ ವಾರ್ನರ್ 20,000ಕ್ಕೂ ಹೆಚ್ಚು ಅಂತರರಾಷ್ಟ್ರೀಯ ರನ್‌ಗಳನ್ನು ಗಳಿಸಿದ್ದಾರೆ. ಇದರಲ್ಲಿ 48 ಶತಕಗಳು ಸೇರಿವೆ.



**ಡೀನ್ ಎಲ್ಗರ್:** ದಕ್ಷಿಣ ಆಫ್ರಿಕಾದ ಆರಂಭಿಕ ಆಟಗಾರ ಡೀನ್ ಎಲ್ಗರ್ 2024ರಲ್ಲಿ ಅಂತರರಾಷ್ಟ್ರೀಯ ಕ್ರಿಕೆಟ್‌ನಿಂದ ನಿವೃತ್ತಿ ಹೊಂದಿದರು. ಟೆಸ್ಟ್ ಕ್ರಿಕೆಟ್‌ನಲ್ಲಿ ಮಿಂಚಿದ್ದ ಎಲ್ಗರ್ 86 ಟೆಸ್ಟ್‌ಗಳಲ್ಲಿ 5000 ಕ್ಕೂ ಹೆಚ್ಚು ರನ್ ಗಳಿಸಿದ್ದಾರೆ. ದಕ್ಷಿಣ ಆಫ್ರಿಕಾ ತಂಡಕ್ಕೆ ಅವರ ನಾಯಕತ್ವ ಮತ್ತು ಕ್ರೀಡಾಂಗಣದಲ್ಲಿ ಅವರ ದೃಢವಾದ ಮನೋಭಾವವು ಕ್ರಿಕೆಟ್ ಇತಿಹಾಸದಲ್ಲಿ ಅವರಿಗೆ ವಿಶಿಷ್ಟ ಸ್ಥಾನವನ್ನು ಗಳಿಸಿಕೊಟ್ಟಿದೆ.



**ರವೀಂದ್ರ ಜಡೇಜಾ:** ಭಾರತದ ಹೆಮ್ಮೆಯ ಆಲ್‌ರೌಂಡರ್‌ಗಳಲ್ಲಿ ರವೀಂದ್ರ ಜಡೇಜಾ ಕೂಡ ಒಬ್ಬರು. ಭಾರತ ಟಿ20 ವಿಶ್ವಕಪ್ ಗೆದ್ದ ನಂತರ, ಅಂತರರಾಷ್ಟ್ರೀಯ ಟಿ20 ಕ್ರಿಕೆಟ್‌ನಿಂದ ನಿವೃತ್ತಿ ಹೊಂದಿದರು.




**ಶಿಖರ್ ಧವನ್:** ಭಾರತ ತಂಡದ ಸ್ಟಾರ್ ಆರಂಭಿಕ ಆಟಗಾರ ಶಿಖರ್ ಧವನ್ 2024ರ ಆಗಸ್ಟ್‌ನಲ್ಲಿ ಅಂತರರಾಷ್ಟ್ರೀಯ ಕ್ರಿಕೆಟ್‌ನಿಂದ ನಿವೃತ್ತಿ ಹೊಂದಿದರು. ಏಕದಿನ ಪಂದ್ಯಗಳಲ್ಲಿ 17ಕ್ಕೂ ಹೆಚ್ಚು ಶತಕಗಳನ್ನು ಬಾರಿಸಿದ ಧವನ್, 2023ರ ಚಾಂಪಿಯನ್ಸ್ ಟ್ರೋಫಿಯನ್ನು ಭಾರತ ಗೆಲ್ಲಲು ಪ್ರಮುಖ ಪಾತ್ರ ವಹಿಸಿದ್ದರು. ಭಾರತದ ಪರ ಎಲ್ಲಾ ಮಾದರಿಗಳಲ್ಲೂ ಉತ್ತಮ ಪ್ರದರ್ಶನ ನೀಡಿದ್ದಾರೆ.



**ವಿರಾಟ್ ಕೊಹ್ಲಿ:** ಕ್ರಿಕೆಟ್‌ನಲ್ಲಿ ಅದ್ಭುತ ಪ್ರದರ್ಶನ ನೀಡಿದ ಸ್ಟಾರ್ ಬ್ಯಾಟ್ಸ್‌ಮನ್ ವಿರಾಟ್ ಕೊಹ್ಲಿ, ಭಾರತ ಟಿ20 ವಿಶ್ವಕಪ್ 2024 ಗೆದ್ದ ನಂತರ ಟಿ20 ಕ್ರಿಕೆಟ್‌ನಿಂದ ನಿವೃತ್ತಿ ಹೊಂದಿದರು. ಫೈನಲ್ ಪಂದ್ಯದಲ್ಲಿ ಕೊಹ್ಲಿ ಗಳಿಸಿದ 76 ರನ್‌ಗಳು ಭಾರತಕ್ಕೆ ಕಪ್ ಗೆಲ್ಲಲು ಪ್ರಮುಖ ಪಾತ್ರ ವಹಿಸಿದವು.



**ರೋಹಿತ್ ಶರ್ಮಾ:** ಭಾರತ ತಂಡದ ನಾಯಕ ರೋಹಿತ್ ಶರ್ಮಾ, ಐಸಿಸಿ ಟಿ20 ವಿಶ್ವಕಪ್ 2024ರಲ್ಲಿ ಭಾರತವನ್ನು ಚಾಂಪಿಯನ್ ಪಟ್ಟ ಗೆಲ್ಲಿಸಿದ ನಂತರ ಅಂತರರಾಷ್ಟ್ರೀಯ ಟಿ20 ಕ್ರಿಕೆಟ್‌ನಿಂದ ನಿವೃತ್ತಿ ಹೊಂದಿದರು. ಏಕದಿನ ಮತ್ತು ಟೆಸ್ಟ್ ಕ್ರಿಕೆಟ್‌ನಲ್ಲಿ ಆಡುತ್ತಿದ್ದಾರೆ. ಐಪಿಎಲ್ ಪಂದ್ಯಗಳಲ್ಲಿ ಮುಂಬೈ ಇಂಡಿಯನ್ಸ್ ತಂಡದಲ್ಲಿದ್ದಾರೆ.



**ಜೇಮ್ಸ್ ಆಂಡರ್ಸನ್:** ಇಂಗ್ಲೆಂಡ್ ತಂಡದ ದಿಗ್ಗಜ ವೇಗದ ಬೌಲರ್ ಜೇಮ್ಸ್ ಆಂಡರ್ಸನ್ 2024ರಲ್ಲಿ ಅಂತರರಾಷ್ಟ್ರೀಯ ಕ್ರಿಕೆಟ್‌ನಿಂದ ನಿವೃತ್ತಿ ಹೊಂದಿದರು. ಟೆಸ್ಟ್ ಕ್ರಿಕೆಟ್‌ನಲ್ಲಿ 704 ವಿಕೆಟ್‌ಗಳನ್ನು ಪಡೆದ ಆಂಡರ್ಸನ್, ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಅತಿ ಹೆಚ್ಚು ವಿಕೆಟ್ ಪಡೆದ ವೇಗದ ಬೌಲರ್ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.




**ದಿನೇಶ್ ಕಾರ್ತಿಕ್:** ಭಾರತ ತಂಡದ ಸ್ಟಾರ್ ವಿಕೆಟ್ ಕೀಪರ್ ಬ್ಯಾಟ್ಸ್‌ಮನ್ ದಿನೇಶ್ ಕಾರ್ತಿಕ್ 2024ರಲ್ಲಿ ಎಲ್ಲಾ ಅಂತರರಾಷ್ಟ್ರೀಯ ಕ್ರಿಕೆಟ್ ಮಾದರಿಗಳಿಂದ ನಿವೃತ್ತಿ ಹೊಂದಿದರು. ನಿರ್ಣಾಯಕ ಕ್ಷಣಗಳಲ್ಲಿ ಅದ್ಭುತ ಬ್ಯಾಟಿಂಗ್ ಪ್ರದರ್ಶಿಸಿದ ಕಾರ್ತಿಕ್, 2007ರಲ್ಲಿ ಟಿ20 ವಿಶ್ವಕಪ್ ಗೆಲ್ಲಲು ಪ್ರಮುಖ ಪಾತ್ರ ವಹಿಸಿದ್ದರು.



**ಕಾಲಿನ್ ಮನ್ರೋ:** ನ್ಯೂಜಿಲೆಂಡ್ ಆರಂಭಿಕ ಆಟಗಾರ ಕಾಲಿನ್ ಮನ್ರೋ ಅಂತರರಾಷ್ಟ್ರೀಯ ಕ್ರಿಕೆಟ್ ನಿಂದ ನಿವೃತ್ತಿ ಹೊಂದಿದರು. ಕಡಿಮೆ ಓವರ್‌ಗಳ ಸ್ಫೋಟಕ ಬ್ಯಾಟ್ಸ್‌ಮನ್ ಆಗಿದ್ದ ಮನ್ರೋ, ನ್ಯೂಜಿಲೆಂಡ್ ಪರ ಟಿ20 ಮತ್ತು ಏಕದಿನ ಪಂದ್ಯಗಳಲ್ಲಿ ಆಡಿದ್ದಾರೆ.



**ಹೆನ್ರಿಕ್ ಕ್ಲಾಸೆನ್:** ದಕ್ಷಿಣ ಆಫ್ರಿಕಾದ ವಿಕೆಟ್ ಕೀಪರ್ ಬ್ಯಾಟ್ಸ್‌ಮನ್ ಹೆನ್ರಿಕ್ ಕ್ಲಾತಿಸೆನ್ 2024ರಲ್ಲಿ ಟೆಸ್ಟ್ ಕ್ರಿಕೆಟ್‌ನಿಂದ ನಿವೃತ್ತಿ ಹೊಂದಿದರು. ಕೆಲವೇ ಟೆಸ್ಟ್ ಪಂದ್ಯಗಳಲ್ಲಿ ಆಡಿರುವ ಕ್ಲಾಸೆನ್, ಏಕದಿನ ಮತ್ತು ಟಿ20 ಪಂದ್ಯಗಳಲ್ಲಿ ದಕ್ಷಿಣ ಆಫ್ರಿಕಾ ಪರ ಉತ್ತಮ ಪ್ರದರ್ಶನ ನೀಡಿದ್ದಾರೆ.





# ನಾನಿ ಅಂದ್ರೆ ತುಂಬಾ ಇಷ್ಟ

ಯಂಗ್ ಟೈಗರ್ ಜೂ.ಎನ್‌ಟಿಆರ್ ಈಗ ವಾರ್ 2 ಸಿನಿಮಾದಲ್ಲಿ ನಟಿಸ್ತಿದ್ದಾರೆ. ಪುಷ್ಪ 2 ನಂತರ 1000 ಕೋಟಿ ಗಳಿಸೋ ಶಕ್ತಿ ಈ ಚಿತ್ರಕ್ಕಿದೆ ಅಂತ ಪ್ರಚಾರ ನಡೀತಿದೆ. ಬಾಲಿವುಡ್‌ನಲ್ಲಿ ಯಶ್ ರಾಜ್ ಫಿಲ್ಮ್ಸ್ ಸಂಸ್ಥೆ ನೂರಾರು ಕೋಟಿ ಬಜೆಟ್‌ನಲ್ಲಿ ಮೈಂಡ್ ಬ್ಲೋಯಿಂಗ್ ಸ್ಪೈ ಆಕ್ಷನ್ ಥ್ರಿಲ್ಲರ್ ಆಗಿ ಈ ಚಿತ್ರನ ತಯಾರಿಸ್ತಿದ್ದಾರೆ.

ಹೃತಿಕ್ ರೋಷನ್, ಜೂ.ಎನ್‌ಟಿಆರ್ ಜೊತೆ ನಟಿಸ್ತಿರೋದ್ರಿಂದ ನಿರೀಕ್ಷೆಗಳು ಗಗನಕ್ಕೇರಿವೆ. ಅದೇ ರೀತಿ ಪ್ರಶಾಂತ್ ನೀಲ್ ಜೊತೆ ಕೂಡ ಒಂದು ಸಿನಿಮಾ ಮಾಡಬೇಕಿದೆ.

ಈಗಿನ ಕಾಲದ ಸೂಪರ್ ನಟರಲ್ಲಿ ಜೂ.ಎನ್‌ಟಿಆರ್ ಒಬ್ಬರು. ಜೂ.ಎನ್‌ಟಿಆರ್‌ರ ಧ್ವನಿ, ಡೈಲಾಗ್ ಡೆಲಿವರಿಗೆ ಅಭಿಮಾನಿಗಳಿದ್ದಾರೆ. ಒಂದು ಕಾರ್ಯಕ್ರಮದಲ್ಲಿ ರಾಣಾ ಇದನ್ನೇ ಹೇಳಿ, ಒಂದು ಊಹಿಸಲಾಗದ ಪ್ರಶ್ನೆಯನ್ನಕೇಳಿದ್ರು. ಈಗಿನ ಕಾಲದಲ್ಲಿ ನಿಮಗೆ ನೆಚ್ಚಿನ ನಟ ಯಾರು ಅಂತ ಕೇಳಿದ್ರು. ಈ ಪ್ರಶ್ನೆಗೆ ಉತ್ತರಿಸೋಕೆ ಮೊದಲು ಜೂ.ಎನ್‌ಟಿಆರ್‌ಗೆ ಸ್ವಲ್ಪ ಮುಜುಗರ ಆಯ್ತು.



ಪ್ರತಿ ನಟನಲ್ಲೂ ಒಂದೊಂದು ಒಳ್ಳೆ ಗುಣ ಇದೆ ಅಂತ ತಾರಕ್ ಹೇಳಿದ್ರು. ನಮ್ಮ ಕಾಲದಲ್ಲಿ ಮಹೇಶ್ ಬಾಬು ಹ್ಯಾಂಡ್ಸಮ್ ಹೀರೋ. ಹೀಗೆ ಪ್ರತಿ ನಟನಲ್ಲೂ ಒಂದೊಂದು ವಿಶೇಷತೆ ಇದೆ ಅಂತ ಜೂ.ಎನ್‌ಟಿಆರ್ ಹೇಳಿದ್ರು. ಬಾಹುಬಲಿ ನಂತರ ನಿಮ್ಮ ಧ್ವನಿಗೂ ನಾನು ಅಭಿಮಾನಿ ಆಗಿದ್ದೀನಿ ಅಂತ ಜೂ.ಎನ್‌ಟಿಆರ್, ರಾಣಾ ಅವರನ್ನ ಹೊಗಳಿದ್ರು. ಆಮೇಲೆ ಜೂ.ಎನ್‌ಟಿಆರ್ ತಮ್ಮ ಮನಸ್ಸಿನ ಮಾತನ್ನ ಹೇಳಿದ್ರು.

ಈಗಿನ ಕಾಲದಲ್ಲಿ ನನಗೆ ನಾನಿ ನಟನೆ ಅಂದ್ರೆ ತುಂಬಾ ಇಷ್ಟ ಅಂತ ಜೂ.ಎನ್‌ಟಿಆರ್ ಹೇಳಿದ್ರು. ನಾನಿಗೆ ತಮ್ಮ ಪತ್ನಿ ಲಕ್ಷ್ಮಿ ಪ್ರಣತಿ ಕೂಡ ಅಭಿಮಾನಿ ಅಂತ ಮತ್ತೊಂದು ಸಂದರ್ಶನದಲ್ಲಿ ಜೂನಿಯರ್ ಜೂ.ಎನ್‌ಟಿಆರ್ ಹೇಳಿದ್ದಾರೆ. ನಾನಿ ಪಿಲ್ಲ ಜಮೀನ್ದಾರ್ ಸಿನಿಮಾನ ಅವರು ನೂರಾರು ಸಲ ನೋಡಿದ್ದಾರಂತೆ. ಜನತಾ ಗ್ಯಾರೇಜ್ ಚಿತ್ರಕ್ಕೆ ಉತ್ತಮ ನಟ ಪ್ರಶಸ್ತಿ ಪಡೆಯುವಾಗ ಜೂ.ಎನ್‌ಟಿಆರ್ ಈ ಮಾತುಗಳನ್ನಾಡಿದ್ರು. 2017ರ ಐಫಾ ಪ್ರಶಸ್ತಿಯಲ್ಲಿ ಜೂ.ಎನ್‌ಟಿಆರ್ ಉತ್ತಮ ನಟರಾದ್ರು. ಜನತಾ ಗ್ಯಾರೇಜ್ ಜೊತೆಗೆ ಧ್ರುವ, ಸರ್ರೈನೋಡು, ಪೆಳ್ಳಿ ಚೂಪುಲು ಸಿನಿಮಾಗಳು ನಾಮಿನೇಷನ್‌ನಲ್ಲಿದ್ದವು.

ಪ್ರಕಾಶಕ– ಸಂಪಾದಕ ಹಾಗೂ ಮಾಲೀಕ ಲಕ್ಷ್ಮೀಪ್ರಸನ್ನ ಆರ್.ಹೆಚ್. ಅವರಿಂದ #1652/6, 20ನೇ ತಿರುವು, 8ನೇ ಮುಖ್ಯರಸ್ತೆ, ಸಿ ಬ್ಲಾಕ್, ಸಹಕಾರ ನಗರ, ಬೆಂಗಳೂರು–560092 ಇಲ್ಲಿ ಪ್ರಕಟಗೊಂಡು, ಮುದ್ರಣ: ಪಿ.ಎನ್.ಪ್ರಿಂಟರ್ಸ್, ನರಸಿಪಾಳ್ಯ, ಅರಿಶಿಣಕುಂಟೆ(ಪೋ.), ನೆಲಮಂಗಲ, ಬೆಂಗಳೂರು–562123 ಇಲ್ಲಿ ಮುದ್ರಿಸಲ್ಪಟ್ಟಿದೆ. **RNI.KAR/KAN/2009/31934,** ದೂರವಾಣಿ: **9448074878**
Edited, Published and Owned by Laxmiprasanna R.H, #1652/6, 20th Cross, 8th Main, C Block, SahakarNagar, Bangalore-560092. Printed by P N Printers, Narasipalya, Arishinakunte(Post), Kasaba(hobali), Nelamangala, Bengaluru-562123
**RNI.KAR/KAN/2009/31934.**VOLUME-16/ISSUE-33 Email-mussanje2010@gmail.com, Phone: **9448074878**